ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 12 ಮಾರ್ಚ್ 16-22, 1998

ರೂ.2.00

ಬಿಜೆಪಿ ಕೂಟ: ಸಿದ್ಧಾಂತವಿಹೀನ ಖಿಚಡಿಯೆಂದು ಆರಂಭದಲ್ಲೇ ಬಯಲು!

'ಜನಾದೇಶ' ತಮಗೇ ಸಿಕ್ಕಿದೆ, ರಾಷ್ಟ್ರಪತಿಗಳು ತಮ್ಮನ್ನೇ ಆಹ್ವಾನಿಸಬೇಕು, ಸ್ಥಿರ ಸರ್ಕಾರ ಒದಗಿಸುವ ಸಮರ್ಥ ನಾಯಕರು ತಮ್ಮಲ್ಲಿ ಮಾತ್ರ ಇದ್ದಾರೆ ಎನ್ನುತ್ತಿದ್ದ ಬಿಜೆಪಿ ಈ ಸಂಚಿಕೆ ಮುದ್ರಣಕ್ಕೆ ಹೋಗುವವರೆಗೂ ರಾಷ್ಟ್ರಪತಿಗಳ ಸರಳ ಪ್ರಶ್ನೆಗೆ ಉತ್ತರ ಕೊಡಲಾಗದೆ ಚಡಪಡಿಸುತ್ತಿದೆ, ಅವರ 'ಸ್ಥಿರ ಸರ್ಕಾರ, ಸಮರ್ಥ ನಾಯಕ' ಘೋಷಣೆಗೆ ತಾವು ಮೋಸ ಹೋದೆವೇ ಎಂದು ಅವರ ಕೂಟಕ್ಕೆ ಮತನೀಡಿದ 37% ಮತದಾರರೂ ಯೋಚಿಸುವಂತಾಗಿದೆ.

ಮಾರ್ಚ್ 10 ರಂದು ರಾಷ್ಟ್ರಪತಿಗಳು ಬಿಜೆಪಿ ಮುಖಂಡರಿಗೆ 'ನೀವು ಸ್ಥಿರ ಸರಕಾರ ರಚಿಸಬಲ್ಲಿರಾ? ಈ ಬಗ್ಗೆ ದಸ್ತಾವೇಜುಗಳನ್ನು ಸಲ್ಲಿಸಬಲ್ಲಿರಾ" ಎಂದು ಕೇಳಿದಾಗ ಖಂಡಿತಾ ಕೊಡಬಲ್ಲೆವು ಎಂದವರು, ತಮಗೆ 264 ಸದಸ್ಯರ ಬೆಂಬಲವಿದೆ ಎಂದವರು ನಂತರ ನಾಲ್ಕು ದಿನಗಳಾದರೂ ಕೇವಲ 240 ಮಂದಿಯ ಪಟ್ಟಿಯನ್ನಷ್ಟೇ ಕೊಡಲು ಸಾಧ್ಯವಾಯಿತು. ಅದು ನಂತರ 237 ಕ್ಕಿಳಿಯಿತು. ಇದರಲ್ಲೂ ಕನಿಷ್ಠ 10 ಮಂದಿ ಚುನಾವಣೆಗಳ ವೇಳೆಯಲ್ಲಿ ಇವರನ್ನು ಬೆಂಬಲಿಸಿದವರಲ್ಲ, ಕೆಲವರಂತೂ ಇವರನ್ನು ವಿರೋಧಿಸಿ ಗೆದ್ದವರು. ಚುನಾವಣೆಯ ವೇಳೆಯಲ್ಲಿ ಇವರ ಜತೆಗಿದ್ದ ಎಐಎಡಿಎಂಕೆ ಹಾಗೂ ತಮಿಳುನಾಡಿನ ಇತರ ಪಕ್ಷಗಳು ಬೆಂಬಲ ಪತ್ರ ನೀಡಲು ಹಿಂದೆ-ಮುಂದೆ ನೋಡಲಾರಂಭಿಸಿದವು. ಈ ಬಗ್ಗೆ ಬಿಜೆಪಿ ಹಾಗೂ ಎಐಎಡಿಎಂಕೆ ನಡುವೆ ಆರೋಪ-ಪ್ರತ್ಯಾರೋಪಗಳ ವಿನಿಮಯ ನಡೆಯುತ್ತಿದೆ. 'ಜನಾದೇಶ' ಬಂದು ಹತ್ತು ದಿನಗಳಾದರೂ 'ಸ್ಥಿರ' ಸರ್ಕಾರದ 'ರಾಷ್ಟ್ರೀಯ ಅಜೆಂಡಾ' ಕೂಡಾ ತಯಾರಾಗಿಲ್ಲ! ಆದರೂ ಅಟಲ್ ಬಿಹಾರಿ ವಾಜಪೇಯಿಯವರನ್ನು 'ಈ ಬಾರಿ' ಪ್ರಧಾನ ಮಂತ್ರಿಯಾಗಿ ಮಾಡಲೇಬೇಕು ಎಂಬ ಪ್ರಯತ್ನ ಭರದಿಂದ ಸಾಗಿದೆ-ಅದಕ್ಕಾಗಿ ಲಕ್ನೌ ಹೊಲಸು ನಾಟಕ ದಿಲ್ಲಿಯಲ್ಲೂ ಪುನರಾವರ್ತನೆಯಾಗುವ ಸಾಧ್ಯತೆಗಳೂ ಇವೆ. ಏನೇ ಆಗಲಿ, ಬಿಜೆಪಿ ಹೇಗಾದರೂ ದಿಲ್ಲಿ ಅಧಿಕಾರ ಗದ್ದುಗೆ ಗಿಟ್ಟಿಸಲು ಮಾಡಿಕೊಂಡ ಮೈತ್ರಿಗಳು ಕೇವಲ ಸಮಯಸಾಧಕ ಮೈತ್ರಿಗಳು, ಸಂಯುಕ್ತರಂಗದಂತೆ ಒಕ್ಕೂಟತತ್ವ, ಧರ್ಮನಿರಪೇಕ್ಷತೆ ಹಾಗೂ ಸಾಮಾಜಿಕ ನ್ಯಾಯದ ಗಟ್ಟಿ ಸೈದ್ಧಾಂತಿಕ ನೆಲೆಯ ಮೇಲೆ ನಿಂತ ರಂಗವಂತೂ ಅಲ್ಲವೇ ಅಲ್ಲ ಎಂಬುದು ಈಗ ಬೆಳಕಿನಷ್ಟು ಸ್ಪಷ್ಟ.

ಆದ್ದರಿಂದಲೇ ಮಾರ್ಚ್ 6-7 ರಂದು ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿ ಸರಕಾರ ರಚಿಸಿದರೆ ಅದನ್ನು ಲೋಕಸಭೆಯಲ್ಲಿ ಸೋಲಿಸಲು ನಿರ್ಧರಿಸಿತು (ಪುಟ 5 ನೋಡಿ). ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳಿಗೆ ಈ ಚುನಾವಣೆಯಲ್ಲಿ 37% ಮತ ದೊರೆತಿದೆ. ಇದರಲ್ಲಿ ಬಿಜೆಪಿಯ ಪಾಲು 25.4% ಕಾಂಗ್ರೆಸ್ 25.9% ಮತ ಪಡೆದಿದೆ. ತನ್ನ ಮಿತ್ರ ಪಕ್ಷಗಳೊಂದಿಗೆ ಸೇರಿ ಅದಕ್ಕೆ ದೊರತಿರುವುದು 30.6% ಸಂಯುಕ್ತ ರಂಗಕ್ಕೆ 22.3% ದೊರೆತಿದೆ. ಇತರರಿಗೆ 9.6%. ಆದ್ದರಿಂದ ಕೇವಲ 25.4% ಮತ ಪಡೆದು 'ಜನಾದೇಶ' ತನಗೆ ದೊರೆತಿದೆ ಎನ್ನವುದು ಸರಿಯಲ್ಲ. 74% ಜನ ಬಿಜೆಪಿಯ ವಿರುದ್ಧ ಮತನೀಡಿದ್ದಾರೆ, 63% ಜನ ಅದರ ಮಿತ್ರ ಪಕ್ಷಗಳೊಂದಿಗೂ ಅದು ಬೇಡ ಎಂದಿದ್ದಾರೆ. ವಾಸ್ತವವಾಗಿ ಜನಾದೇಶ ಅವರಿಗೆ ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಬಿಜೆಪಿಯೊಂದಿಗೆ ಸೇರಿದ ಪಕ್ಷಗಳೂ

4ನೇ ಪುಟ ನೋಡಿ

ತಿದ್ದುಪಡಿ

ಕಳೆದ ಸಂಚಿಕೆಯ ಮುಖಪುಟದ ವರದಿಯ ಆರಂಭಿಕ ಪರಿಚ್ಛೇದದ ಕೊನೆ ವಾಕ್ಯ "ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳಲ್ಲಿ ಚಂಚಲತೆ ಹಾಗೂ ಅನೈಕ್ಯತೆಯಿಂದಾಗಿಯಷ್ಟೇ ಇಷ್ಟಾದರೂ ಸ್ಥಾನ ಪಡೆಯಲು ಸಾಧ್ಯವಾಯಿತು...." ಎಂದು ಇರಬೇಕಾಗಿತ್ತು. ಮುದ್ರಣದಲ್ಲಾದ ತಪ್ಪಿಗಾಗಿ ವಿಷಾದಿಸುತ್ತೇವೆ.

ತ್ರಿಪುರಾದಲ್ಲಿ ಎಡರಂಗ ಸರ್ಕಾರ ಮತ್ತೆ ಅಧಿಕಾರಕ್ಕೆ ಮಾಣಿಕ ಸರ್ಕಾರ ಹೊಸ ಮುಖ್ಯಮಂತ್ರಿ

ತ್ರಿಪುರಾದ ಒಂಭತ್ತನೇ ಮುಖ್ಯಮಂತ್ರಿ ಯಾಗಿ ಸಿ.ಪಿ.ಐ(ಎಂ)ನ ಕೇಂದ್ರ ಸಮಿತಿ ಸದಸ್ಯ ಮಾಣಿಕ್ ಸರ್ಕಾರ್ ಮಾರ್ಚ್ 11ರಂದು ಅಗರ್ತಲಾದಲ್ಲಿ ಅಧಿಕಾರವನ್ನು ವಹಿಸಿಕೊಂಡರು.

ರಾಜ್ಯಪಾಲ ಸಿದ್ಧೇಶ್ವರ ಪ್ರಸಾದ್‌ರವರು ಮುಖ್ಯಮಂತ್ರಿ ಹಾಗೂ ಇತರ 16 ಜನರಿಗೆ ಸಚಿವ ಹುದ್ದೆಯ ಪ್ರಮಾಣ ವಚನ ಬೋಧಿಸಿದರು.

ಫೆಬ್ರವರಿಯಲ್ಲಿ ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗ ಪ್ರಚಂಡ ಜಯಭೇರಿ ಬಾರಿಸಿ ಮೂರನೇ ಎರಡು ಬಹುಮತದೊಂದಿಗೆ ಆಯ್ಕೆಯಾಗಿದೆ. ಒಟ್ಟು 60 ಸ್ಥಾನಗಳಲ್ಲಿ ಎಡರಂಗ 41 ಸ್ಥಾನಗಳನ್ನು ಗೆದ್ದಿದೆ. ಇದರಲ್ಲಿ ಸಿಪಿಐ(ಎಂ) ಸ್ಥಾನಗಳು 38, ಆರ್.ಎಸ್.ಪಿ.-2 ಹಾಗೂ ಸಿಪಿಐ-1

ದೇಶದ ಈಶಾನ್ಯ ಭಾಗದ ಈ ಪುಟ್ಟ ರಾಜ್ಯದಲ್ಲಿ ನಾಲ್ಕನೇ ಎಡರಂಗ ಸರಕಾರ ಇದಾಗಿದೆ. ಇದು ಸತತ 2ನೇ ಅವಧಿಗೆ ಆಯ್ಕೆಯಾದ ಎಡರಂಗ ಸರಕಾರ.

ಮಾಣಿಕ್ ಸರ್ಕಾರ್ ಅವರಿಗೆ 49 ವರ್ಷವಾಗಿದ್ದು ರಾಜ್ಯದ ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

ಐದು ವರ್ಷದಿಂದ ತ್ರಿಪುರಾದ ಆಡಳಿತ ಚುಕ್ಕಾಣಿ ಹಿಡಿದಿದ್ದ ಹಿರಿಯ ನೇತಾರ, ಬುಡಕಟ್ಟು ನಾಯಕ ದಶರಥ ದೇವ್ ಅನಾರೋಗ್ಯದ ಕಾರಣ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ.

ಎಡರಂಗದ ಚುನಾಯಿತ ಸದಸ್ಯರು ಮಾರ್ಚ್ 10ರಂದು ಸರ್ಕಾರ್ ಅವರನ್ನು ತಮ್ಮ ನಾಯಕನನ್ನಾಗಿ ಅವಿರೋಧವಾಗಿ ಆಯ್ಕೆಮಾಡಿದರು.


ಸಿಪಿಐ(ಎಂ)ನ ಜಿತೇನ್ ಚೌಧರಿ, ಬಾದಲ್ ಚೌಧರಿ, ಕೇಶವ್ ಮಜುಂದಾರ್, ಸುಕುಮಾರ್ ಬರ್ಮನ್, ಅನಿಲ್ ಸರ್ಕಾರ್, ನಿರಂಜನ್ ದೇವ್‌ಬರ್ಮ, ಅಘೋರ್ ದೇವ್‌ಬರ್ಮ, ಬಿಮಲ್ ಸಿಂಗ್, ಸುಭೋದ್ ದಾಸ್, ಫೈಝುರ್ ರಹಮಾನ್, ನಾರಾಯಣ್ ರೂಪಿಣಿ, ಪವಿತ್ರ ಕಾರ್, ಅನಂತ ಪಾಲ್ ಮತ್ತು ರೊಮೇಂದ್ರ ದೇಬ್ ನಾಥ್ ಆರ್.ಎಸ್.ಪಿ.ಯ ಗೋಪಾಲ್ ದಾಸ್ ಹಾಗೂ ಸಿಪಿಐನ ದುರ್ಬಿಜಯ್ ರಿಯಾಂಗ್ - ಇವರು ಮಾಣಿಕ್ ಸರ್ಕಾರ್ ಅವರ ಜೊತೆ ಪ್ರಮಾಣ ವಚನ ಸ್ವೀಕರಿಸಿದವರು. ಇವರೆಲ್ಲರೂ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗಿದ್ದಾರೆ. 17 ರಲ್ಲಿ ಐವರು ಹೊಸದಾಗಿ ಸಂಪುಟ ಸೇರಿದವರು. ಸ್ವತಃ ಮಾಣಿಕ್ ಸರ್ಕಾರ್ ಈ ಹಿಂದೆ ಯಾವುದೇ ಸರಕಾರೀ ಅಧಿಕಾರ ನಡೆಸಿದವರಲ್ಲ.

ವಿದ್ಯಾರ್ಥಿ ಮುಖಂಡನಿಂದ ಮುಖ್ಯಮಂತ್ರಿಸ್ಥಾನದವರೆಗೆ

ಜನವರಿ 22, 1949 ರಂದು ದಕ್ಷಿಣ ತ್ರಿಪುರಾದ ರಾಧಾಕಿಶೋರಪುರದಲ್ಲಿ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಮಾಣಿಕ್ ಸರ್ಕಾರ್ ತ್ರಿಪುರಾದಲ್ಲಿ ಅಲ್ಲೋಲ ಕಲ್ಲೋಲವೆಬ್ಬಿಸಿದ್ದ 1967 ರ ಆಹಾರ ಆಂದೋಲನದ ದಿನಗಳಲ್ಲಿ ನೇರವಾಗಿ ವಿದ್ಯಾರ್ಥಿ ಆಂದೋಲನಕ್ಕೆ ಧುಮುಕಿದರು. ಆಗಿನ ಕಾಂಗ್ರೆಸ್ ಸರಕಾರದ ದುರಾಡಳಿತದ ವಿರುದ್ಧ ನಡೆದ ಈ ಹೋರಾಟದಲ್ಲಿ ಪ್ರಮುಖ ಹಾಗೂ ಚೈತನ್ಯಶಾಲೀ ಪಾತ್ರ ವಹಿಸಿದ ಸರ್ಕಾರ್ ಈ ಆಂದೋಲನದ ಮೂಲಕ ಸಿಪಿಐ(ಎಂ) ನತ್ತ ಆಕರ್ಷಿತರಾದರು, 1968 ರಲ್ಲಿ ಪಕ್ಷ ಸೇರಿದರು. ರಾಜ್ಯದ ಪ್ರಮುಖ ಶಿಕ್ಷಣ ಸಂಸ್ಥೆಯಾದ ಎಂ.ಬಿ.ಬಿ. ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಮಾಣಿಕ್ ಸರ್ಕಾರ್ ಆ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್.ಎಫ್.ಐ. ಅಭ್ಯರ್ಥಿಯಾಗಿ ನಿಂತು ಆಯ್ಕೆಯಾದರು. ನಂತರ ಅವರು ಎಸ್.ಎಫ್.ಐನ ರಾಜ್ಯಕಾರ್ಯದರ್ಶಿ ಹಾಗೂ ಅಖಿಲ ಭಾರತ ಉಪಾಧ್ಯಕ್ಷರಾದರು. ಇವರು ಕಲ್ಕತ್ತಾ ವಿಶ್ವವಿದ್ಯಾಲಯದ ವಾಣಿಜ್ಯ ಪದವೀಧರರು.

1972 ರಲ್ಲಿ ಇವರು ಸಿಪಿಐ(ಎಂ) ರಾಜ್ಯ ಸಮಿತಿಗೆ ಆಯ್ಕೆಯಾದರು. 1978 ರಲ್ಲಿ ಮೊದಲ ಎಡರಂಗ ಸರ್ಕಾರ ಅಧಿಕಾರ ಸ್ವೀಕರಿಸಿದಾಗ ಅವರು ರಾಜ್ಯಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದರು. ಕಲ್ಕತ್ತೆಯಲ್ಲಿ ನಡೆದ 12ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. 1980 ರಲ್ಲಿ ಒಂದು ಉಪ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದಾಗ ಅವರು ಮೊದಲ ಬಾರಿ ಎಂ.ಎಲ್.ಎ. ಆದರು. ಆಗ ಅವರಿಗೆ ಎಡರಂಗದ ಮುಖ್ಯ ಸಚೇತಕರ ಜವಾಬ್ದಾರಿ ನೀಡಲಾಯಿತು. 1993 ರಲ್ಲಿ ಮೂರನೇ ಎಡರಂಗ ಸರಕಾರ ಅಧಿಕಾರ ಸ್ವೀಕರಿಸಿದಾಗ ಅವರು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಹಾಗೂ ಎಡರಂಗದ ಸಂಯೋಜಕರಾದರು. ಈ ಬಾರಿಯ ಚುನಾವಣೆಗಳಲ್ಲಿ ಅವರು ಪಶ್ಚಿಮ ತ್ರಿಪುರಾದ ಸೋನಾಮುರ ಸಬ್‌ಡಿವಿಜನ್‌ನ ಧಾನ್ಪುರ್ ಕ್ಷೇತ್ರದಿಂದ ಆಯ್ಕೆಯಾದರು. ಕಾಂ. ವೈದ್ಯನಾಥ್ ಮುಖರ್ಜಿಯನ್ನು ಮಾಣಿಕ್ ಸರ್ಕಾರ್ ಅವರ ಸ್ಥಾನದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ.

ಪುಟ 6 ನೋಡಿ



"ಗೊತ್ತುಗುರಿ ಇಲ್ಲದ ರಾಜ್ಯಪಾಲರ ಭಾಷಣ"

- ಜಿ.ವಿ.ಶ್ರೀರಾಮರೆಡ್ಡಿ

ಚೈತನ್ಯಪೂರ್ಣ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವುದು ಜವಾಬ್ದಾರಿಯುತ ಸರ್ಕಾರದ ಆದ್ಯಕರ್ತವ್ಯ. ರಾಜ್ಯಪಾಲರ ಭಾಷಣ ಸರ್ಕಾರದ ಮುಂದಿನ ಹಾದಿಯ ದಿಕ್ಸೂಚಿ. ಆದರೆ ಈ ಅಧಿವೇಶನದ ಪ್ರಾರಂಭದಲ್ಲಿ ಮಾಡಿದ ಭಾಷಣ ಸರ್ಕಾರ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಲಾರದ ಗೊತ್ತುಗುರಿ-ಯೋಜನೆಗಳಿಲ್ಲದ ಅಂಶಗಳಿಂದಲೇ ತುಳುಕಿದೆ ಎಂದು ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಕೃಷಿ, ಕಾರ್ಮಿಕ, ರೈತ, ಯುವಜನತೆ... ಜನಸಾಮಾನ್ಯರ ನೂರಾರು ಸಂಕಷ್ಟಗಳಿಗೆ ಏಣಿಯಾಗಿರುವ ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತರುವಲ್ಲಿ ಮಹಾರಾಷ್ಟ್ರದ ನಂತರ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. 1997 ರಲ್ಲಿ 128388 ಕೋಟಿ ರೂ. ವಿದೇಶಿ ಹಣ ರಾಜ್ಯಕ್ಕೆ ಹರಿಯುವುದೆಂಬ ಸರ್ಕಾರದ ಗುರಿ 5400 ಕೋಟಿಗೆ ಮೊಟಕುಗೊಂಡಿದೆ. ಅಂದರೆ ಬಂಡವಾಳ ಹೂಡಿಕೆ ಶೇ 20 ರಷ್ಟಿದೆ.

ಉದ್ಯೋಗ ಅವಕಾಶ ಹೆಚ್ಚಿಲ್ಲ, ಹೆಚ್ಚಿಸುವ ಭರವಸೆಯೂ ಇಲ್ಲ. ಸಣ್ಣ ಕೈಗಾರಿಕೆಗಳಿಂದ 5700 ಜನರಿಗೆ ಉದ್ಯೋಗ ಸಿಕ್ಕಿದರೂ ಅದು ದೊಡ್ಡ ನಿರುದ್ಯೋಗದ ಸೂತೆಯಲ್ಲಿ ಗಣನೆಗೆ ಸಿಲುಕದಾಗಿದೆ. ರಾಜ್ಯದ ಒಟ್ಟು ಉತ್ಪಾದನೆಗೂ ನಿರ್ದಿಷ್ಟ ಗುರಿ ಕಾಣಿಸಿಗದು ಎಂದು ಅವರು ಖೇದ ವ್ಯಕ್ತಪಡಿಸಿದರು.

ವಿದ್ಯುತ್ ಉತ್ಪಾದನೆಗಾಗಿ ವಿದೇಶಿ ಕೊಜೆಂಟ್ರಿಕ್ಸ್ ಕಂಪನಿಗೆ ಆಹ್ವಾನ ನೀಡಿರುವುದು ಗ್ರಾಹಕರಿಗೆ ಹೆಚ್ಚಿನ ಹೊರೆಯೇ ಹೊರತು ಕಂಪನಿ ಇನ್ನೂ ಒಂದು ಯೂನಿಟ್ ವಿದ್ಯುತ್ ಉತ್ಪಾದಿಸಿಲ್ಲ. ವಿದ್ಯುತ್ ವಿತರಣೆಗಾಗಿ ಖಾಸಗಿಯವರಿಗೆ ಆಹ್ವಾನ ನೀಡಿರುವ ಪ್ರಥಮ ರಾಜ್ಯವಾಗಿದೆ. ಇದು ಜನತೆಗೆ ಅಪಾಯಕಾರಿ.


ಕೃಷಿ ಉತ್ಪಾದನೆ, ಅಭಿವೃದ್ಧಿ ರೈತ ಸಮುದಾಯದ ಬಗ್ಗೆ ಚಕಾರವಿಲ್ಲ. ವಿದೇಶಿ ಕಂಪನಿಗಳ ಪ್ರವೇಶದಿಂದ ಭೂ ಒಡೆಯರು ಲಾಭದಾಯಕ ವಾಣಿಜ್ಯ ಬೆಳೆಗಳನ್ನು ಬೆಳೆಯತೊಡಗಿದ್ದು, ಆಹಾರ ಧಾನ್ಯಗಳ ಉತ್ಪಾದನೆ ದಿನೇ ದಿನೇ ಕುಂಠಿತಗೊಳ್ಳುತ್ತಿದೆ. 2000 ಇಸ್ವಿಯೊಳಗೆ ರಾಜ್ಯದಲ್ಲಿ 1 ಕೋಟಿ 38 ಲಕ್ಷ ಟನ್ ಆಹಾರ ಉತ್ಪಾದನೆಯಾಗಬೇಕು. 1997-98ನೇ ಸಾಲಿನಲ್ಲಿ 85 ಲಕ್ಷ ಟನ್ ಮಾತ್ರ ಉತ್ಪಾದನೆಯಾಗಿದೆ. ಈ ಬಗ್ಗೆ ಸರ್ಕಾರ ಏನನ್ನೂ ಹೇಳಿಲ್ಲ. ಮುಂದಿನ 4-5 ವರ್ಷಗಳಲ್ಲಿ ರಾಜ್ಯದಲ್ಲಿ ಆಹಾರಕ್ಕಾಗಿ ಹಾಹಾಕಾರ ಏಳಲಿದೆ ಎಂದು ಕಾಂ. ರೆಡ್ಡಿ ಎಚ್ಚರಿಸಿದರು.

ರಾಜ್ಯದ ಉತ್ಪಾದನಾ ಜೀವನಾಡಿಗಳಾದ ಕೃಷಿಕಾರ್ಮಿಕರ ದುಃಖ ದುಮ್ಮಾನಗಳ ಬಗ್ಗೆ ಸರ್ಕಾರದ ನಾಡಿ ಮಿಡಿಯದಿರುವುದು ಆತಂಕಕಾರಿಗಿದೆ.

ಕೃಷ್ಣ ಮೇಲ್ದಂಡ ಯೋಜನೆಗಾಗಿ ಬಾಂಡ್‌ಗಳ ಮುಖಾಂತರ ಬಂಡವಾಳ ಸಂಗ್ರಹಿಸುವುದನ್ನು ಬಿಟ್ಟರೆ ಇನ್ನಾವುದೇ ಹೊಸ ನೀರಾವರಿ ಯೋಜನೆಯ ಬಗ್ಗೆ ಸರ್ಕಾರ ತುಟಿ ಬಿಚ್ಚಿಲ್ಲ.

ದೊಡ್ಡ ಪ್ರಮಾಣದಲ್ಲಿರುವ ಅಸಂಘಟಿತ ಕಾರ್ಮಿಕರ ಕನಿಷ್ಠ ಕೂಲಿ, ಕೆಲಸದ ಭದ್ರತೆ-ನಿಖರತೆ ಕುರಿತಾಗಲಿ, ಒಟ್ಟಾರೆ ಕಾರ್ಮಿಕ ಕಾಯಿದೆ ಬಗ್ಗೆಯಾಗಲಿ ಸರ್ಕಾರ ಮೌನ ಮುರಿದಿಲ್ಲ. ಸರ್ಕಾರಿ ಆಸ್ಪತ್ರೆಗಳಿಗೆ ವಿತರಿಸುವ ಔಷಧಿಯಲ್ಲಿ ಭಾರೀ ಕಡಿತ, ಜೀವರಕ್ಷಕ ಔಷಧಿ, ರಕ್ತದ ಕೊರತೆ ಸೇರಿದಂತೆ ಆರೋಗ್ಯ ಸುಧಾರಣೆ ಕುರಿತಾಗಿ ಸರ್ಕಾರ ಯೋಜಿಸುವಲ್ಲಿ ಅನಾರೋಗ್ಯ ಹೊಂದಿದೆ.

ಒಟ್ಟಾರೆ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಆಡಳಿತವು ಜನತೆಗೆ ಹೆಚ್ಚು ಸಂವೇದನಾಶೀಲವಾಗಿರುವುದಕ್ಕೆ ಬದಲಾಗಿ ಗೊತ್ತುಗುರಿ ಇಲ್ಲದ ಭಾಷಣವಾಗಿದೆ ಈ ಬಾರಿಯ ರಾಜ್ಯಪಾಲರ ಭಾಷಣ ಎಂದು 'ಐಕ್ಯರಂಗ'ದೊಡನೆ ಮಾತನಾಡುತ್ತಾ ಅವರು ಹೇಳಿದ್ದಾರೆ.



ಭಾರತೀಯ ವಿಮೋಚನಾ ಸಮರ


ಸುಮಾರು ಎರಡು ಶತಮಾನಗಳ (೧೭೫೭ -೧೯೪೭)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಕಾಂಗ್ರೆಸ್ ಸಮಾಜವಾದಿ ಪಕ್ಷ ಮತ್ತು ಕೆಲವು ಕ್ರಾಂತಿಕಾರಿಗಳು ಈ ಹೋರಾಟದಲ್ಲಿ ಗಮನಾರ್ಹ ಪಾತ್ರ ವಹಿಸಿದರು. ನವಂಬರ್ 1942 ರಲ್ಲಿ **ಜಯಪ್ರಕಾಶ್ ನಾರಾಯಣ್** ಇತರ ಕೆಲವರು ಮುಖಂಡರೊಡನೆ ಹಜಾರಿಬಾಗ್ ಜೈಲಿನಿಂದ ತಪ್ಪಿಸಿಕೊಂಡು ತಲೆ ಮರೆಸಿಕೊಂಡು ಹೋರಾಟ ಮುಂದುವರಿಸಿದರು. ಈ ಹೋರಾಟದಲ್ಲಿ **ರಾಮಮನೋಹರ ಲೋಹಿಯ, ಅಚ್ಯುತ್ ಪಟವರ್ಧನ್**, ಮತ್ತು **ಅರುಣಾ ಅಸಫ್ ಅಲಿ** ಯವರೊಡನೆ ಸಂಪರ್ಕ ಸ್ಥಾಪಿಸಿದರು. ಬಂಗಾಳದಲ್ಲಿ ಅನುಶೀಲನ್, ಜುಗಾಂತರ್, ಆರ್.ಸಿ.ಪಿ.ಐ. ಕೂಡಾ ಈ ಹೋರಾಟದಲ್ಲಿ ಭಾಗವಹಿಸಿದರು. ಹಲವು ಸ್ಥಳಗಳಲ್ಲಿ ಬ್ರಿಟಿಶ್ ಆಡಳಿತ ಸ್ವಲ್ಪ ಅವಧಿಗಂತೂ ಕುಸಿದೇ ಹೋಗಿತ್ತು.








ಬಂಗಾಳದ ಸೂತಗತ್, ನಂದೀಗ್ರಾಮ್, ಮೊಹಿಸದಲ್ ಹಾಗೂ ತಾಮಲೂಕ್‌ನಲ್ಲಿ ಡಿಸಂಬರ್ 17, 1942 ರಂದು 'ತಾಮ್ರಲಿಪ್ತ ಜಾತೀಯ ಸರ್ಕಾರ್' ರಚನೆಯಾಯಿತು. **ಸತೀಶ್ ಚಂದ್ರ ಸಾಮಂತ್** ಇದರ ಪ್ರಮುಖ ಮುಖಂಡರು. ಇದೇ ರೀತಿ ಕೊಂಟ್ಯಾ ಸಬ್‌ಡಿವಿಜನ್‌ನಲ್ಲಿ ಇಂತಹ 'ಜನತಾ ಸರ್ಕಾರ' ಏರ್ಪಟ್ಟಿತು. ಬಾಲುರ್ಘಾಟ್‌ನಲ್ಲಿ ಒಂದು ದಿನದ ಮಟ್ಟಿಗೆ ಬ್ರಿಟಿಶ್ ಆಳ್ವಿಕೆ ಕುಸಿಯಿತು. ಸರ್ಕಾರಿ ಗೋದಾಮಿನಲ್ಲಿನ ಅಕ್ಕಿಯನ್ನೆಲ್ಲಾ ಬಡವರಿಗೆ ಹಂಚಲಾಯಿತು. ಇಲ್ಲಿ ಸಂತಾಲರು ಪ್ರಮುಖ ಪಾತ್ರ ವಹಿಸಿದ್ದರು. ಬಿಲ್ಲು-ಬಾಣಗಳೊಂದಿಗೆ ಅವರು ಪೋಲೀಸರ ಮೇಲೆ ಎರಗಿದರು.

ಮಹಾರಾಷ್ಟ್ರದ ಸತಾರಾದಲ್ಲಿ 'ಪಾರ್ಲೆಸರ್ಕಾರ್' ಅಥವಾ ಸಮಾನಾಂತರ ಸರ್ಕಾರ ಏರ್ಪಟ್ಟಿತು. ತಂತಿ, ರೈಲ್ವೆ ಲೈನ್‌ಗಳನ್ನು ಕತ್ತರಿಸಿ ಹಾಕಿದ್ದರಿಂದ ಸತಾರಾ ಕೆಲವು ತಿಂಗಳ ಮಟ್ಟಿಗೆ ಸ್ವತಂತ್ರವಾಗಿತ್ತು. ಸುಮಾರು 400 ಹಳ್ಳಿಗಳಲ್ಲಿ ಈ ಪಾರ್ಲೆ ಸರ್ಕಾರವಿತ್ತು. **ನಾನಾ ಪಾಟೀಲ್** ಇದರ ಪ್ರಮುಖ ಮುಂದಾಳು.



ಉತ್ತರ ಪ್ರದೇಶದ ಆಝುಂಗಡ್ ಹಾಗೂ ಬಲಿಯಾದಲ್ಲಿ ಸಾಮೂಹಿಕ ಬಂಡಾಯದಿಂದಾಗಿ ಬ್ರಿಟಿಶ್ ಆಳ್ವಿಕೆ ಕುಸಿಯಿತು. ಅಲ್ಲೂ ಸಮಾನಾಂತರ ಸರ್ಕಾರಗಳು ಏರ್ಪಟ್ಟವು. **ಬೈಜೂಪಾಂಡೆ ಝಾರ್ಖಂಡ್ ರಾಯ್** ಹಾಗೂ **ಸರ್ಜೂ ಪಾಂಡೆ** ಬಂಡಾಯದ ಪ್ರಮುಖರು.




1941 ರಲ್ಲಿ ಕಲ್ಕತ್ತೆಯಲ್ಲಿ ಗೃಹಬಂಧನದಲ್ಲಿದ್ದ **ಸುಭಾಶ್ ಚಂದ್ರ ಬೋಸ್** ಜನವರಿ 16-17 ರ ರಾತ್ರಿ ಪೋಲೀಸರ ಕಣ್ತಪ್ಪಿಸಿ ಪೇಶಾವರದ ಮೂಲಕ ಕಾಬೂಲು ತಲುಪಿದ್ದರು. ಅಲ್ಲಿ 45 ದಿನ ತಲೆ ಮರೆಸಿಕೊಂಡಿದ್ದು ನಂತರ ಇಟಾಲಿಯನ್ ವಿಮಾನದಲ್ಲಿ ರೋಮ್ ತಲುಪಿ ಅಲ್ಲಿಂದ ಬರ್ಲಿನ್ ತಲುಪಿದರು. ಅಲ್ಲಿ ಒಂದು ಭಾರತೀಯ ಸೇನೆಯನ್ನು ಕಟ್ಟಿದರು. ಒಂದು ಪತ್ರಿಕೆ ಹಾಗೂ ಒಂದು ರೇಡಿಯೋ ನಿಲಯವನ್ನು ಸ್ಥಾಪಿಸಿದರು. ಫೆಬ್ರವರಿ 1943 ರಲ್ಲಿ ಸಬ್‌ಮೆರಿನ್‌ವೊಂದರಲ್ಲಿ ಜರ್ಮನಿ ಬಿಟ್ಟ ಸುಭಾಶ್‌ಚಂದ್ರ ಬೋಸ್ ಸುಮಾತ್ರಾ ದ್ವೀಪವನ್ನು ತಲುಪಿದರು. ಜುಲೈ 4, 1943 ರಂದು ಹಿರಿಯ ಕ್ರಾಂತಿಕಾರಿ ರಾಶ್ ಬಿಹಾರಿ ಬೋಸ್ ಆಝಾದ್ ಹಿಂದ್ ಸೇನೆಯ ಸೇನಾಧಿಪತಿಯ ಸ್ಥಾನವನ್ನು ನೇತಾಜಿಯವರಿಗೆ ಬಿಟ್ಟುಕೊಟ್ಟರು. ಅಕ್ಟೋಬರ್ 21, 1943 ರಂದು ನೇತಾಜಿ **ಆಝಾದ್ ಹಿಂದ್ ಸೇನೆ**ಯ ಸೇನಾಧಿಪತಿಯಾದರಲ್ಲದೆ **ಆಝಾದ್ ಹಿಂದ್ ಸರ್ಕಾರ**ವನ್ನು ರಚಿಸಿದರು. ಹೊಸ ಸರಕಾರಗಳ ಅಧ್ಯಕ್ಷರಾಗಿ ಆಯ್ಕೆಯಾದರು. ಆಝಾದ್ ಹಿಂದ್ ಸೇನೆಯ ಮಹಿಳಾ ಬೆಟಾಲಿಯನ್ ಕೂಡಾ ರಚಿಸಲಾಯಿತು. ಇದನ್ನು ರಾಣಿ ಝಾನ್ಸಿ ಬೆಟಾಲಿಯನ್ ಎಂದು ಹೆಸರಿಸಲಾಯಿತು. ಕ್ಯಾಪ್ಟನ್ ಲಕ್ಷ್ಮಿ ಇದರ ಮುಖ್ಯಸ್ಥರಾಗಿ ನೇಮಕಗೊಂಡರು. 1943 ರ ಡಿಸೆಂಬರ್ 29 ರಿಂದ 31 ರ ನಡುವೆ ನೇತಾಜಿ ಅಂಡಮಾನ್-ನಿಕೋಬಾರ್ ದ್ವೀಪಕ್ಕೆ ಭೇಟಿ ನೀಡಿ ರಾಷ್ಟ್ರೀಯ ಬಾವುಟವನ್ನು ಹಾರಿಸಿದರು. ಏಪ್ರಿಲ್ 1944 ರಲ್ಲಿ ನೇತಾಜಿಯವರ ಸೇನಾಧಿಪತ್ಯದಲ್ಲಿ ಆಝಾದ್ ಹಿಂದ್ ಸೇನೆ ಈಶಾನ್ಯ ಗಡಿದಾಟಿ ಭಾರತವನ್ನು ಪ್ರವೇಶಿಸಿತು. 'ಚಲೋ ದಿಲ್ಲಿ' ಎಂಬ ಕರೆ ಮೊಳಗಿತು. ಆದರೆ ಇದು ಕೊನೆಗೂ ಸಫಲವಾಗಲಿಲ್ಲ. ಆದರೂ ಆಝಾದ್ ಹಿಂದ್ ಸೇನೆಯ ನಿರ್ಭೀತ ಸಶಸ್ತ್ರ ಹೋರಾಟ ರಾಷ್ಟ್ರೀಯ ಆಂದೋಲನಕ್ಕೆ ಒಂದು ಹೊಸ ಆಯಾಮ, ದಿಕ್ಕು ನೀಡಿತು.



ಇಟಾಲಿಯನ್ ಪಾಸುಪೋರ್ಟ್‌ನಲ್ಲಿ ಬೋಸ್



ಇಂಡಿಯಾ ಇಂಡಿಪೆಂಡೆನ್ಸ್ ಲೀಗ್ನ ಪರವಾಗಿ ನೇತಾಜಿ ಹಾಂಗ್‌ಕಾಂಗ್ ಹಾಗೂ ಸಿಂಗಾಪುರದಿಂದ ಕೆಲವು ಧೀರ ಕ್ರಾಂತಿಕಾರಿಗಳನ್ನು ಜಪಾನೀ ಸಬ್‌ಮೆರಿನ್‌ನಲ್ಲಿ ಭಾರತಕ್ಕೆ ಕಳಿಸಿದ್ದರು. ಇವರಲ್ಲಿ ತಿರುವಾಂಕೂರಿನ **ಮಹಮದ್ ಅಬ್ದುಲ್ ಖಾದಿರ್, ಸಚ್ಚೇಂದ್ರ ಚಂದ್ರ ಬರ್ಧನ್, ಎಸ್.ವಿ.ಆನಂದ್** ಹಾಗೂ **ಫೌಜಾಸಿಂಗ್** ಸಿಕ್ಕಿಬಿದ್ದು ಸೆಪ್ಟೆಂಬರ್ 10, 1943 ರಂದು ಗಲ್ಲಿಗೇರಿದರು. ಇನ್ನೂ ಹಲವರಿಗೆ ಜೀವಾವಧಿ ಶಿಕ್ಷೆಯಾಗಿ ಗಾಂಧೀಜಿಯ ಮಧ್ಯಪ್ರವೇಶದಿಂದ ಬಿಡುಗಡೆಯಾಯಿತು.





ಏಪ್ರಿಲ್ 18, 1993. ನಾಲ್ಕನೇ ಮದ್ರಾಸ್ ಕರಾವಳಿ ರಕ್ಷಣಾ ಬಟಾಲಿಯನ್‌ನ 12 ಭಾರತೀಯ ನಾವಿಕರನ್ನು ಬ್ರಿಟಿಶ್ ಸರ್ಕಾರವನ್ನು ಕಿತ್ತೊಗೆಯುವ ಪಿತೂರಿಯ ಆಪಾದನೆಯ ಮೇಲೆ ಬಂಧಿಸಲಾಯಿತು. ಮಿಲಿಟರಿ ಕೋರ್ಟ್ ಒಂಬತ್ತು ಮಂದಿಗೆ ಮರಣದಂಡನೆ ವಿಧಿಸಿತು. ಸೆಪ್ಟೆಂಬರ್ 27, 1943 ರಂದು ಅವರನ್ನೆಲ್ಲಾ ಗಲ್ಲಿಗೇರಿಸಲಾಯಿತು.

(ಮುಂದುವರಿಯುವುದು)

ಬಿಜೆಪಿಯ ಹಣಕಾಸು ಸೋತದ್ದು

ಬಿಜೆಪಿಯ ಹಣಕಾಸು ಅಂದರೆ ಹಣಕಾಸಿನ ಮಂತ್ರಿಯಾಗುವವರು. ಶ್ರೀ ಜಸವಂತ್‌ಸಿಂಗ್ ಎಂಬ ಮಾಜಿ ಅಧಿಕಾರಿ ಮಹಾಶಯರೇ ಬಿಜೆಪಿಯ ಆರ್ಥಿಕ ತಜ್ಞರು ಮತ್ತು ಹಣಕಾಸು ಮಂತ್ರಿತ್ವಕ್ಕೆ ಅಭ್ಯರ್ಥಿ. ಈ ಮಹಾಶಯರು ಚುನಾವಣೆ ಯಲ್ಲಿ ಸೋತಿದ್ದಾರೆ. ಇದು ಬಹಳ ದೊಡ್ಡ ವಿಷಯವೇನಲ್ಲ. ಚುನಾವಣೆಯಲ್ಲಿ ಸೋಲು ಗೆಲುವು ಸಹಜವಾದದ್ದೇ. ಆದರೆ ಈತನಿಗೆ ತನ್ನ ಕ್ಷೇತ್ರದ ಸಂಪರ್ಕ ಕಡಿಮೆ ಎಂಬುದರ ಸೂಚನೆ ಇರ ಬಹುದು ಬಿಡಿ. ಲೋಕಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಸೀಟುಗಳನ್ನು ಪಡೆದಿರುವ ಬಿಜೆಪಿಯ ಗೋಳನ್ನು ನೋಡಿದರೆ ಈ ಪಕ್ಷ ಎಂತಹ ದ್ದೆಂದು ಗೊತ್ತಾಗುತ್ತದೆ. ಈಗ ಈ ಪಕ್ಷ ತಾನು ಅಧಿಕಾರಕ್ಕೆ ಬಂದರೆ ಯಾರನ್ನು ಹಣಕಾಸು ಮಂತ್ರಿಯಾಗಿಸಬೇಕೆಂಬ ಸಮಸ್ಯೆಗೆ ಸಿಲುಕಿಕೊಂಡಿದೆ. ಜಸವಂತ್ ಸಿಂಗ್‌ರನ್ನೇ ಮಾಡಿದರೆ ತಾನು ಮಹಾ ನೈತಿಕ ಜವಾಬ್ದಾರಿಯ ಪಕ್ಷ ಎಂಬ ಪೋಸು ಕೊಡುವುದು ಕಷ್ಟವಾಗುತ್ತದೆ. ಇವರನ್ನು ಬಿಟ್ಟರೆ ಸ್ವದೇಶಿ ಎಂಬ ಮಂತ್ರ ಗೊಣಗುವ ಮಾಂತ್ರಿಕರಿದ್ದಾರೆ.

ಆದ್ದರಿಂದ ಬಿಜೆಪಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಡಾ||. ಸಿ. ರಂಗರಾಜನ್ ಅವರನ್ನು ನೀವು ನಮ್ಮ ಹಣಕಾಸು ಮಂತ್ರಿಗಳಾಗುವಿರಾ ಎಂಬ ಪ್ರಶ್ನಾರ್ಥಕ ಸೂಚನೆ ಕಳುಹಿಸಿ ದೆಯಂತೆ. ಉದಾರೀಕರಣದಲ್ಲಿ ನುರಿತ, ಐಎಂಎಫ್. ವಿಶ್ವಬ್ಯಾಂಕುಗಳಿಗೆ ಚಿರಪರಿ ಚಿತರಾದ ಈ ವ್ಯಕ್ತಿ ಹಣಕಾಸು ಮಂತ್ರಿ ಗಳಾದರೆ ಸಾಮ್ರಾಜ್ಯಶಾಹಿಗಳಿಂದ ತನಗೆ ಶಹಬಾಸ್‌ಗಿರಿ ದೊರೆಯುವುದೆಂಬ ಆಸೆ ಬಿಜೆಪಿಯದು. ಹೀಗಾದಾಗ ಆರ್ಥಿಕ ಸುಧಾರಣೆ ಮತ್ತು ಐಎಂಎಫ್ ಸಾಲ ಇವೆರಡನ್ನು ತಾನು ಸಾಧಿಸಬಹುದೆಂಬುದು ಅದರ ಹವಣಿಕೆ.

ಇಲ್ಲಿ ಬಿಜೆಪಿಯದು ಸ್ವದೇಶಿಯೋ ವಿದೇಶಿಯೋ ಎಂಬ ಜಿಜ್ಞಾಸೆಯಲ್ಲಿದೆಯೋ? ಖಂಡಿತ ಇಲ್ಲ. ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವ ಉದಾರೀ ಕರಣವೇ ಅದರ ಗುರಿ. ಆದರೆ ಸ್ವದೇಶಿ, ಎಂಬ ಮಂತ್ರವನ್ನು ದೇಶದ ಸ್ವದೇಶಿ ಪ್ರಿಯರಿಗಾಗಿ ಮಾತ್ರ ತೋರಿಸು ವುದನ್ನು ಅದು ಬಿಡಲಾರದು. ದೇಶದ ಆರ್ಥಿಕ ವನ್ನು ಸುಭದ್ರ ಗೊಳಿಸಿ, ಉತ್ತಮ ಆಡಳಿತ ನೀಡುತ್ತೇವೆನ್ನುವವರಿಗೆ ಭವಿಷ್ಯದ ಆರ್ಥಿಕ ನೀತಿಗಳ ಬಗ್ಗೆ ಖಚಿತ ನಿಲುವುಗಳಿರುವುದು ಅದೂ ಸ್ವಂತ ನಿಲುವಾಗಿರುವುದು ಅವಶ್ಯ ವಲ್ಲವೆ? ಬಿಜೆಪಿಗೆ ಅದಿದೆಯೆ?

ಎಲ್ಲರನ್ನು ಹೊರ ಹಾಕುತ್ತೇವೆ ಆದರೆ ಒಳಗಿರುವವರನ್ನಲ್ಲ

ಇದು ಸಮತಾ ಪಾರ್ಟಿಯೆಂಬ ಬಿಜೆಪಿಯ ಮಿತ್ರ ಪಕ್ಷದ ಜಾರ್ಜ್ ಫರ್ನಾಂಡಿಸ್ ಮಹಾಶಯರ ಅಂಬೋಣ.

ಜಾರ್ಜ್ ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ಕೆಂಡ ಕಾರಿದ್ದಾರೆ. ಅವರನ್ನೆಲ್ಲ ದೇಶ ದಿಂದ ಹೊರಗಟ್ಟುವುದು ತಮ್ಮ ಸರ್ಕಾರದ ಮೊದಲ ಕಾರ್ಯ (ಅಧಿಕಾರಕ್ಕೆ ಬಂದ ಮೇಲೆ) ಎಂದು ಅರ್ಭಟಿಸಿದ್ದಾರೆ ಶ್ರೀ ಫರ್ನಾಂಡಿಸ್.

ಇಂತಹ ಆರ್ಭಟಕ್ಕೆ ದೇಶದ ಉದ್ಯಮ ಪತಿಗಳು ಭಯ ವ್ಯಕ್ತಪಡಿಸಿದ್ದಾರೆ. ಹೀಗೆ ಹೇಳಿದರೆ ವಿದೇಶೀ ಹೂಡಿಕೆದಾರರಿಗೆ ಭಯವಾಗಿ ಅವರು ಭಾರತದೊಳಗೆ ಹೂಡಿಕೆ ಮಾಡಲು ಮುಂದೆ ಬರುವುದಿಲ್ಲ ಎನ್ನುತ್ತಿದ್ದಾರೆ ಅವರು. ವಿದೇಶಿ ಹೂಡಿಕೆಯ ಬಗ್ಗೆ ಯಾವುದೇ ತರಹದ ನಿರ್ಬಂಧಗಳನ್ನು ಹೇರ ಬಾರದು ಹಾಗೆ ಹೇರಿದರೆ ವಿದೇಶಿ ಹೂಡಿಕೆ ಬರುವುದಿಲ್ಲ ಎಂದೂ ಹೇಳಿ ದ್ದಾರೆ. ಅವರು ಉದ್ಯಮ ಪತಿಗಳಿಂದ ಇಂತಹ ಆಕ್ಷೇಪಣೆ ಕೇಳಿ ಬಂದ ಕೂಡಲೇ ಫರ್ನಾಂಡಿಸ್ ಮಹಾಶಯರು ವಿಷಯದ ಮೇಲೆ ಸ್ಪಷ್ಟೀಕರಣ ನೀಡಿದ್ದಾರೆ. ಬಳಕೆ ವಸ್ತುಗಳ ಕ್ಷೇತ್ರದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳನ್ನು ದೇಶದಿಂದ ಹೊರಕ್ಕೆ ಅಟ್ಟುವುದಿಲ್ಲ ಎಂದಿದ್ದಾರೆ ಅವರು.

ಅಲ್ಲದೆ ತಾವು ಅಧಿಕಾರಕ್ಕೆ ಬಂದರೆ ಆಗ 'ಪ್ರತಿಯೊಂದು ಬಹುರಾಷ್ಟ್ರೀಯ ಕಂಪನಿಯ ಪ್ರಕರಣವನ್ನು ಪ್ರತ್ಯೇಕವಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದಿದ್ದಾರೆ. ಈ ಕಂಪನಿಗಳು ನಮಗೆ ನೀಡಿರುವ ಭರವಸೆಗಳನ್ನು ಪೂರೈಸಿದ್ದಾರೊ ಇಲ್ಲವೊ ಎಂಬುದು ಮುಖ್ಯ ವಂತೆ. ಈಗಾಗಲೇ ಇರುವ ಕಂಪನಿಗಳಿಗೆ ಹೊರ ಹೋಗಿ ಎಂದು ಹೇಳ ಲಾಗುವುದಿಲ್ಲ. ಆದರೆ ಕೆಲವು ನಿರ್ಬಂಧನೆಗಳನ್ನು ಮಾತ್ರ ಹೇರಲಾಗುತ್ತದೆಯಂತೆ.

ಹೀಗೆ ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ಜಾರ್ಜ್ ಫರ್ನಾಂಡಿಸ್‌ರ ನಿಲುವು ದೇಶೀ ಉದ್ಯಮಪತಿಗಳ ನಿಲುವಿನ ಮೇಲೆ ಅವಲಂಬಿಸಿದೆ. ದೇಶೀ ಉದ್ಯಮ ಪತಿಗಳು ಬೇಕೆಂದರೆ ಬೇಕು ಬೇಡವೆಂದರೆ ಬೇಡ ಎಂಬ ನಿಲುವಲ್ಲವೇ ಇದು?

ಒಂಬತ್ತನೇ ಪಂಚ ವಾರ್ಷಿಕ ಯೋಜನೆ

ಒಂಬತ್ತನೇ ಪಂಚವಾರ್ಷಿಕ ಯೋಜನೆಯ ಕರಡನ್ನು ಯೋಜನಾ ಮಂಡಳಿ ಸಿದ್ಧಪಡಿಸಿದೆ. ಈಗ ಸರ್ಕಾರವೇ ಬದಲಾಗುವುದರಿಂದ ಈ ಕರಡು ಎಷ್ಟು ಪ್ರಯೋಜನದ್ದು ಎಂಬುದು ಪ್ರಶ್ನೆ.

ಏನೇ ಇರಲಿ, ಈ ಪಂಚ ವಾರ್ಷಿಕ ಯೋಜನೆಯ ಕರಡು ಉದಾರೀಕರಣದ ರೂಪುರೇಷೆಗಳ ಕರಡು ಎಂಬುದು ಸ್ಪಷ್ಟ.

ಒಟ್ಟು 875000 ಕೋಟಿ ರೂಪಾಯಿ ಗಳ ವೆಚ್ಚದ ಈ ಯೋಜನಾಕರಡು ಕೃಷಿಗೆ ಹೆಚ್ಚಿನ ಒತ್ತು ನೀಡುವ ಅವಶ್ಯಕತೆಯ ಬಗ್ಗೆ ಹೇಳಿದೆ. ಕೃಷಿ ಲಾಗುವಾಡುಗಳ ಮೇಲಿನ ಸಹಾಯಧನ, ಕೃಷಿ ಸಂಶೋಧನೆ, ಆರ್ಥಿಕ ಇಳುವರಿ, ತಳಿಗಳ ಅಭಿವೃದ್ಧಿ ಪಡಿಸು ವುದು ಇತ್ಯಾದಿಗಳ ಬಗ್ಗೆ ಈ ಕರಡು ಒತ್ತು ನೀಡಿದೆ.

ಹಣಕಾಸು ಖೋತಾವನ್ನು ಕಡಿಮೆ ಮಾಡುವ ಬಗ್ಗೆಯೂ ಕರಡು ಹೇಳಿದೆ. ಕೃಷಿ ಕ್ಷೇತ್ರದಲ್ಲಿ ಶೇ 4.5 ರಷ್ಟು ಬೆಳವಣಿಗೆ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಶೇ 9.3 ರಷ್ಟು ಬೆಳವಣಿಗೆ ಹಾಗೂ ಒಟ್ಟಾರೆ ಶೇ. 7 ರಷ್ಟು ಒಟ್ಟುತ್ಪಾದನೆಯ ಬೆಳವಣಿಗೆ ಸಾಧಿಸುವ ಗುರಿಯನ್ನು ಯೋಜನೆ ಹಾಕಿಕೊಂಡಿದೆ.

ಉದಾರೀಕರಣ ಇಂದು ಎಂತಹ ಸ್ಥಿತಿಯನ್ನು ಹುಟ್ಟು ಹಾಕಿದೆ, ಎಂತಹ ಸಮಸ್ಯೆಗಳನ್ನು ಸೃಷ್ಟಿಸಿದೆ ಮತ್ತು ಅವುಗಳಿಗೆ ಪರಿಹಾರವೇನು? ದೇಶದ ಜನತೆಗೆ ಅನುಕೂಲವಾಗುವಂತೆ ಏನು ಮಾಡಬೇಕು ಎಂಬ ಬಗ್ಗೆ ಈ ಕರಡು ಹೇಳುವುದಿಲ್ಲ. ಆದ್ದರಿಂದಲೇ ಇದು ಉದಾರೀಕರಣದ ಕರಡು ಯೋಜನೆ ಎಂದು ಹೇಳಿದ್ದು



ಫಿಕ್ಕಿಯ 90 ದಿನದ ಕಾರ್ಯಕ್ರಮದ ಪಟ್ಟಿ

ಉದ್ಯಮಪತಿ, ಬಂಡವಾಳಿಗರ ಸಂಸ್ಥೆಯಾದ ಫಿಕ್ಕಿಯ ಹೊಸ ಸರ್ಕಾರ ಅಧಿಕಾರಕ್ಕೆ ಬಂದರೆ ಮೊದಲ 90 ದಿನಗಳಲ್ಲಿ ಏನೇನು ಮಾಡಬೇಕು ಎಂಬ ಕಾರ್ಯಕ್ರಮದ ಪಟ್ಟಿಯೊಂದನ್ನು ತಯಾರಿಸಿದೆಯಂತೆ.

ಈ ಪಟ್ಟಿಯಲ್ಲೆಲ್ಲ ಬಹು ಮುಖ್ಯವಾದದ್ದು ಆಡಳಿತದಲ್ಲಿ ಬದಲಾವಣೆ ತರುವ ಪ್ರಸ್ತಾಪ. ಫಿಕ್ಕಿಯ ಪ್ರಕಾರ ಕಂಪನಿಗಳಲ್ಲಿ ಆಡಳಿತದ ಅನುಭವವಿರುವವರಿದ್ದಾರೆ. ಹಾಗೆಯೇ ಸರ್ಕಾರೀ ಸೇವೆಯಲ್ಲಿ ವ್ಯಾಪಾರ/ ಉದ್ಯಮಗಳ ಬಗ್ಗೆ ತಿಳಿದ ಅನುಭವಿಗಳಿದ್ದಾರೆ. ಸರ್ಕಾರ ಮತ್ತು ಕಂಪನಿಗಳ ಅಧಿಕಾರಿಗಳ ಪರಸ್ಪರ ಬದಲಾವಣೆ ತರುವಂತಾಗ ಬೇಕು ಎಂಬುದು ಇಂತಹ ಒಂದು ಬೇಡಿಕೆ.

ಇದು ಸಾಧ್ಯವಾದರೆ ಸರ್ಕಾರಿ ಅಧಿಕಾರಿಯಾಗಿರುವಾತ ಕಂಪನಿಗಳ ನೌಕರನಾಗುವ ಅವಕಾಶವಿರಬೇಕು ಹಾಗೆಯೇ ಕಂಪನಿಗಳ ಅಧಿಕಾರಿಗಳು ಆಯಕಟ್ಟಿನ ಸರ್ಕಾರಿ ಹುದ್ದೆಗಳನ್ನು ಅಲಂಕರಿಸುವಂತಾಗಬೇಕು.

ಈ ಎರಡೂ ಸ್ಥಿತಿಗಳು ಉದ್ಯಮಿಗಳಿಗೇ ಲಾಭದಾಯಕವಾಗಿರುತ್ತದೆ ಎಂಬ ಬಗ್ಗೆ ಸಂಶಯ ಬೇಡ. ಯಾಕೆಂದರೆ ಸರ್ಕಾರಿ ಅಥವಾ ಕಂಪನಿಯ ಅಧಿಕಾರಿಯಾಗಿ ನೇಮಕಗೊಂಡರೆ ಸರ್ಕಾರೀ ವ್ಯವಸ್ಥೆ ಕಂಪನಿಗೆ ಲಾಭದಾಯಕವಾಗುವಂತೆ ಮಾಡುತ್ತಾನೆ. ಹಾಗೆಯೇ ಕಂಪನಿಯ ಅಧಿಕಾರಿಯೊಬ್ಬ ಸರ್ಕಾರದ ಹುದ್ದೆಗೆ ಹೋದರೆ ಆಗಲೂ ಆತ ತನ್ನ ಹಿಂದಿನ ಕಂಪನಿಯ ಲಾಭಕ್ಕೆ ಸರ್ಕಾರೀ ಯಂತ್ರವನ್ನು ಬಳಸಿಕೊಳ್ಳುತ್ತಾನೆ.

ಖಾಸಗಿಯವರ ಲಾಭಕ್ಕಾಗಿ ಸರ್ಕಾರೀ ಯಂತ್ರವನ್ನು ಹಿಂಡುವುದೆಂದರೆ ಇದಲ್ಲವೆ? ಹಿಂದೆ ಇದು (ಹಿಂಡುವುದು) ಇರಲಿಲ್ಲವೆಂದಲ್ಲ. ಹಿಂದೆ ಗುಟ್ಟಾಗಿತ್ತು ಅನಧಿಕೃತವಾಗಿತ್ತು. ಈಗ ಬಹಿರಂಗವಾಗಿ, ಅಧಿಕೃತವಾಗಿ ನಡೆಸುವುದರ ಅವಕಾಶ ಇರಬೇಕೆಂಬುದೇ ಈ ಬೇಡಿಕೆ. ಆಡಳಿತದಲ್ಲಿ ಪಾರದರ್ಶಿಕತೆ ಎಂದರೆ ಇದೇ ಅಲ್ಲವೇ?

ಸಣ್ಣ ಕೈಗಾರಿಕೆಗಳ ಗೋಳು

ಲೋಕಸಭೆಗೆ ಚುನಾವಣೆ ನಡೆದಿರುವಾಗಲೇ ಸಂಯುಕ್ತರಂಗ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಹೊಡೆತ ಬೀಳುವ ಕ್ರಮವೊಂದನ್ನು ಕೈಗೊಂಡಿದೆ. ಸುಧಾರಣೆಗಳ ಅಂಗವಾಗಿ 1997 ರಲ್ಲಿ ಸ್ಟ್ರಾಟಜಿಕ್ ಮೇನೇಜ್‌ಮೆಂಟ್ ಗ್ರೂಪ್ ಎಂಬುದು ಸಣ್ಣ ಕೈಗಾರಿಕೆಗಳಿಗಿರುವ ಸರ್ಕಾರೀ ಯಂತ್ರದ ಪುನರ್‌ರಚನೆಯ ವರದಿಯೊಂದನ್ನು ಸಲ್ಲಿಸಿತು.

ಅದರಂತೆ ಸರ್ಕಾರ ಸಣ್ಣ ಕೈಗಾರಿಕೆಗಳಿಗಾಗಿದ್ದ ಅಭಿವೃದ್ಧಿ ಕಮಿಶನರ್ ಹುದ್ದೆಯನ್ನೇ ತೆಗೆದು ಹಾಕಿ ಒಟ್ಟು ವ್ಯವಸ್ಥೆಯನ್ನೇ ಬದಲು ಮಾಡಿದೆ. ಈ ಯಂತ್ರದ ಗಾತ್ರವನ್ನು ಕಡಿಮೆ ಮಾಡಿದೆ. ಅಲ್ಲದೆ ಅಧಿಕಾರಿಗಳನ್ನು ಕೈಗಾರಿಕಾ ಮಂತ್ರಾಲಯಕ್ಕೆ ವರ್ಗಾಯಿಸಲಾಗಿದೆ. ಈಗ ತಾಂತ್ರಿಕ ವಿಷಯಗಳ ಅಲ್ಪಸ್ವಲ್ಪ ಅಧಿಕಾರಗಳನ್ನು ಬಿಟ್ಟರೆ ಬೇರೆ ಯಾವುದೇ ತರಹದ ಅಧಿಕಾರಗಳು ಈ ಅಭಿವೃದ್ಧಿ ವಿಭಾಗಕ್ಕೆ ಇಲ್ಲ. ಸಣ್ಣ ಕೈ ಗಾರಿಕೆಗಳು ಈಗ ಉಳಿದೆಲ್ಲ ವಿಷಯಗಳಿಗೆ ಕೈಗಾರಿಕಾ ಮಂತ್ರಾಲಯದೊಂದಿಗೇ ವ್ಯವಹರಿಸಬೇಕು. ಕೈಗಾರಿಕಾ ಮಂತ್ರಾಲಯದೊಂದಿಗೆ ವ್ಯವಹರಿಸುವ ತಾಕತ್ತು ಸಣ್ಣ ಕೈಗಾರಿಕೆಗಳಿಗಿರುವುದೇ ಇಲ್ಲವಾದ್ದರಿಂದ ಅವರು ಧ್ವನಿಯೆತ್ತದಂತೆ ಆಗಿದೆ.

ಸಣ್ಣ ಕೈಗಾರಿಕೆಗಳ ಸಂಘಟನೆಗಳು ಸರ್ಕಾರದ ಈ ಕ್ರಮವನ್ನು ತೀವ್ರವಾಗಿ ಖಂಡಿಸಿದ್ದಾರೆ.

ಕಾಂ. ಸೂರಿಯವರ ಮೇಲೆ ಹಲ್ಲೆ ಯತ್ನ: ಸಿಪಿಐ(ಎಂ) ಖಂಡನೆ

ಸಿಪಿಐ(ಎಂ) ಕಾರ್ಯದರ್ಶಿಮಂಡಳಿ ಸದಸ್ಯರು ಹಾಗೂ ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ॥ ಸೂರ್ಯ ನಾರಾಯಣ ರಾವ್ ಮೇಲೆ ಮಾರ್ಚ್ 9 ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಜೆ.ಸಿ.ರಸ್ತೆಯಲ್ಲಿರುವ ಕಾರ್ಮಿಕ ಆಯುಕ್ತರ ಕಚೇರಿಯಲ್ಲಿ ಸಂಧಾನ ಸಭೆಯಲ್ಲಿ ಭಾಗ ವಹಿಸಿ ಹಿಂದಿರುಗುತ್ತಿದ್ದಾಗ ಮೈಕೊ ಕಾರ್ಖಾನೆಯಲ್ಲಿನ 'ಇಂಟಕ್' ಯೂನಿಯನ್ನಿನ ಮುಖಂಡ ಶಿವಲಿಂಗಯ್ಯ ನೇತೃತ್ವದಲ್ಲಿ ಕೆಲವು ಗೂಂಡಾಗಳು ಧಾಳಿ ನಡೆಸಿರುವುದನ್ನು ಸಿಪಿಐ (ಎಂ) ರಾಜ್ಯಸಮಿತಿ ತೀವ್ರವಾಗಿ ಖಂಡಿಸಿದೆ.

ಈ ಗೂಂಡಾಗಳು ಕಬ್ಬಿಣದ ಸಲಾಕೆಗಳನ್ನು ಕಾರಿನಲ್ಲಿ ತುಂಬಿಕೊಂಡು ಬಂದಿದ್ದು, ಮಾರಕವಾಗಿ ಸೂರ್ಯನಾರಾಯಣರಾವ್ ಅವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದಾಗ, ಪೋಲೀಸರ ಮಧ್ಯ ಪ್ರವೇಶದಿಂದಾಗಿ ಕಾಂ. ಸೂರಿ ಅವರು ಅಪಾಯದಿಂದ ಪಾರಾಗಿದ್ದರೂ, ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್ ಕಾರ್ಯಕರ್ತರಿಗೆ ತೀವ್ರ ಗಾಯಗಳಾಗಿವೆ ಹಾಗೂ ಕಾರಿನ ಚಾಲಕ ತಿಮ್ಮಯ್ಯ ಅವರಿಗೆ ಪೆಟ್ಟಾಗಿದೆ.

ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಮಿಕ ಸಂಘಟನೆಯನ್ನು ಮುನ್ನಡೆಸುತ್ತಿರುವ ಪಕ್ಷದ ಮುಖಂಡರಾದ ಸೂರ್ಯನಾರಾಯಣರಾವ್ ಅವರನ್ನು ಸೋಲಿಸಲು ಹಲವಾರು ಪಟ್ಟಭದ್ರ ಹಿತಾಸಕ್ತಿಗಳು ಪ್ರಯತ್ನಿಸಿದ್ದು ಈವರೆಗೆ ಯಶಸ್ಸು ಸಿಕ್ಕಿಲ್ಲ. 8.3.98 ರಂದು ನಡೆದ ಮೈಕೊ ಯೂನಿಯನ್ನಿನ ಸರ್ವಸದಸ್ಯರ ಸಭೆಯಲ್ಲಿ ಕಾಂ. ಸೂರಿಯವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಹತಾಶ ವ್ಯಕ್ತಿಗಳು ಒತ್ತಾಯಿಸಿ ವಿಫಲರಾಗಿದ್ದು 9 ರಂದು ನಡೆದ ಹಲ್ಲೆ ಪೂರ್ವಯೋಜಿತ ಕೃತ್ಯವೆಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಹಿಂದೆ 'ಇಂಟಕ್' ಮುಖಂಡರಾದ ಎಫ್.ಎಂ.ಖಾನ್ ನೇತೃತ್ವದಲ್ಲಿ ಇಂತಹುದೇ ಗೂಂಡಾ ಧಾಳಿಯನ್ನು ಮೈಕೊ ಕಾರ್ಮಿಕರು ಒಗ್ಗಟ್ಟಾಗಿ ಹಿಮ್ಮೆಟ್ಟಿಸಿದ್ದು ಇಂದೂ ಕೂಡಾ ಐಕ್ಯತೆಯಿಂದ ಸಮಾಜ ವಿರೋಧಿ, ದುಡಿಮೆಗಾರರ ವಿರೋಧಿ ಶಕ್ತಿಗಳನ್ನು ಎದುರಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ.

ಅದೇ ಸಂದರ್ಭದಲ್ಲಿ ಕಾರ್ಮಿಕ ಸಂಘಟನೆ, ಸಂಧಾನದಲ್ಲಿ ಗೂಂಡಾಗಿರಿಯನ್ನು ಪ್ರಚೋದಿಸುತ್ತಿರುವ ಶಕ್ತಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ, ರಾಜ್ಯ ಸರ್ಕಾರ, ಮೈಕೊ ಆಡಳಿತ ಹಾಗೂ ಪೋಲೀಸ್ ಅಧಿಕಾರಿಗಳನ್ನು ಒತ್ತಾಯಿಸಿದೆ.

ಗ್ರಾಮ ಪಂಚಾಯತ್ ನೌಕರರ ಆಮರಣ ಉಪವಾಸ ಸತ್ಯಾಗ್ರಹ

1997 ಫೆಬ್ರವರಿಯಲ್ಲಿ ರಾಜ್ಯದ ಗ್ರಾಮ ಪಂಚಾಯತ್‌ಗಳ ಸಹಸ್ರಾರು ನೌಕರರು ಜೀವನಾವಶ್ಯಕ ಕನಿಷ್ಠ ಕೂಲಿ, ಸೇವಾ ನಿಯಮಾವಳಿ ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಬೃಹತ್ ಬೆಂಗಳೂರು ಚಲೋ ರ್ಯಾಲಿ ನಡೆಸಿದರು. ಮೂರು ದಿನಗಳು ನಡೆದ ಚಳುವಳಿಯ ಸಂದರ್ಭದಲ್ಲಿ ನೀಡಿದ ಭರವಸೆಯನ್ನು ಸರಕಾರ ಇದುವರೆಗೂ ಈಡೇರಿಸದಿರುವುದನ್ನು ಪ್ರತಿಭಟಿಸಿ ಮಾರ್ಚ್ ಕೊನೆಯ ವಾರ ಪಂಚಾಯತ್ ನೌಕರರ ಸಂಘದ ಮುಖಂಡರು ಬೆಂಗಳೂರಿನಲ್ಲಿ ಆಮರಣ ಉಪವಾಸ ಸತ್ಯಾಗ್ರಹ ಹಾಗೂ ಸಹಸ್ರಾರು ನೌಕರರು ಧರಣಿ ಸತ್ಯಾಗ್ರಹ ನಡೆಸಲು ಮಾರ್ಚ್ 6 ರಂದು ಗುಲ್ಬರ್ಗದಲ್ಲಿ ನಡೆದ ಪಂಚಾಯತ್ ನೌಕರರ ಸಂಘದ ರಾಜ್ಯ ಸಮಿತಿಯ ಸಭೆಯು ಈ ಕುರಿತು ನಿರ್ಣಯ ಕೈಗೊಂಡಿದೆ.

ಕನಿಷ್ಠ ರೂ. 900 ಹಾಗೂ ಅದಕ್ಕೆ ಅನುಗುಣವಾಗಿ ವೇತನ ಹೆಚ್ಚಿಸುವ ಭರವಸೆ ನೀಡಿ ಒಂದು ವರ್ಷ ಕಳೆದರೂ ಸರ್ಕಾರ ಇದುವರೆಗೂ ಯಾವುದೇ ನಿರ್ಣಯಕ್ಕೆ ಬಂದಿಲ್ಲ. ಸಂಬಂಧಿತ ಸಚಿವರನ್ನು ಈ ಕುರಿತು ಅನೇಕ ಬಾರಿ ಭೇಟಿ ಮಾಡಿ ಚರ್ಚಿಸಿದರೂ ತೀವ್ರ ಸಂಕಷ್ಟದಲ್ಲಿರುವ ನೌಕರರಿಗೆ ಕನಿಷ್ಠ ಕೂಲಿಯನ್ನು ನೀಡದ ಧೋರಣೆಯನ್ನು ಸಂಘವು ತೀವ್ರವಾಗಿ ಖಂಡಿಸಿದೆ.

ಈಗಲಾದರೂ ಪಂಚಾಯತ್ ರಾಜ್ ಸಚಿವರು ಕೂಡಲೇ ಸಂಘದ ಮುಖಂಡರ ಜೊತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಸಭೆಯು ಒತ್ತಾಯಿಸಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಗೌರವಾಧ್ಯಕ್ಷರಾದ ಶ್ರೀ ಎನ್.ಕೆ.ಉಪಾಧ್ಯಾಯರು ವಹಿಸಿದ್ದರು. ಅಧ್ಯಕ್ಷರಾದ ಮಾರುತಿ ಮಾನಪಡೆ, ಉಪಾಧ್ಯಕ್ಷರಾದ ಭೀಮಸಿ ಕಲಾದಗಿ, ಪ್ರಧಾನಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಮತ್ತು ರಾಜ್ಯ ಸಮಿತಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಲೇವಲಿಂಗ್ ಸಾಲ ರದ್ದತಿಗೆ ರೈತರ ಒತ್ತಾಯ

ರಾಮದುರ್ಗ: 7-8 ವರ್ಷಗಳ ಹಿಂದೆ ಭೂಮಿ ಸಮಪಾತಳಿ(ಲೇವಲಿಂಗ) ಗಾಗಿ ರಾಮದುರ್ಗ ತಾಲೂಕಿನ 12 ಹಳ್ಳಿಗಳಲ್ಲಿ 219 ರೈತರ ಭೂಮಿಯ ಸಮಪಾತಳಿಯ ಕೆಲಸ ನಡೆದಿತ್ತು.

ಈ ಸಂದರ್ಭದಲ್ಲಿ ರೈತರ ಒಪ್ಪಿಗೆ ಪಡೆಯದೇ ಬೇಕಾಬಿಟ್ಟಿಯಾಗಿ ಕೆಲಸ ಮಾಡಿ ರೈತರ ಹೆಸರಿನಲ್ಲಿ ಅಧಿಕಾರಿಗಳು ಹಣ ಲೂಟಿ ಮಾಡಿದ್ದಾರೆ. ಈಗ ಈ ಸಾಲ ಅಸಲು ಬಡ್ಡಿ ಸೇರಿ ಸುಮಾರು 30 ಲಕ್ಷ ಗಳಷ್ಟಾಗಿದ್ದು ವಸೂಲಿ ಕ್ರಮ ಬಿರುಸಾಗಿ ನಡೆದಿದೆ. ಹಣ ತುಂಬದ ರೈತರ ಜಮೀನುಗಳನ್ನು ಸರಕಾರ ಕೈವಶ ಮಾಡಿಕೊಳ್ಳುತ್ತಿದೆ.

ಈ ವರ್ಷ ಮುಂಗಾರು ಹಿಂಗಾರು ಬೆಳೆಗಳು ಸಂಪೂರ್ಣ ವಿಫಲವಾಗಿ ರೈತ ದಿವಾಳಿ ಅಂಚಿಗೆ ತಲುಪಿದ್ದು ದಿನನಿತ್ಯ ಸಾಲದ ಬಾಧೆಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ.

ಲೇವಲಿಂಗ್ ಹೆಸರಿನಲ್ಲಿ ಅಧಿಕಾರಿಗಳು ಮಾಡಿದ ದರೋಡೆಗೆ ರೈತರು ಬೆಲೆ ತೆರಬೇಕಾಗಿ ಬಂದಿದ್ದು ಈ ಸಾಲ ರದ್ದತಿಗಾಗಿ ಮಲಪ್ರಭಾ ಹೋರಾಟ ಪ್ರದೇಶಗಳಾದ ರಾಮದುರ್ಗ, ಸವದತ್ತಿ, ನರಗುಂದ ಮತ್ತು ನವಲಗುಂದಗಳಲ್ಲಿ ರೈತರು ಪ್ರತಿಭಟನೆಗೆ ಸಿದ್ಧರಾಗುತ್ತಿದ್ದಾರೆ. ಈ ಅನ್ಯಾಯದ ಸಾಲ ವಸೂಲಿಯ ರದ್ದತಿಗಾಗಿ ಒತ್ತಾಯಿಸಿ ಫೆಬ್ರವರಿ 27 ರಂದು ರಾಮದುರ್ಗ ತಾಲೂಕಿನ ರೈತರು ಭಾರೀ ಮೆರವಣಿಗೆ ನಡೆಸಿ ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ತಹಶೀಲದಾರ ಕಛೇರಿ ಎದುರು ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮುಖಂಡ ವಿ.ಪಿ.ಕುಲಕರ್ಣಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಘಟಕದ ಕಾರ್ಯದರ್ಶಿ ಗೈಬು ಜೈನೇಖಾನ ಮತ್ತು ಮುಳ್ಳೂರಿನ ಜೀವಪ್ಪ ಗೌಡಣ್ಣವರ ಮಾತನಾಡಿ ಸಾಲ ರದ್ದತಿಗೆ ಒತ್ತಾಯಿಸಿದರು.

ಮುಂದಿನ ಹಂತದ ಹೋರಾಟ ರೂಪಿಸಲು ವಿ.ಪಿ.ಕುಲಕರ್ಣಿ ಸಂಚಾಲಕರಾಗಿರುವ 12 ಜನರುಳ್ಳ ಕ್ರಿಯಾ ಸಮಿತಿಯನ್ನು ರಚಿಸಲಾಗಿದೆ. ಮಲಪ್ರಭಾ, ಘಟಪ್ರಭಾ ವ್ಯಾಪ್ತಿಯಲ್ಲಿ ಬರುವ ಎಲ್ಲ ಪ್ರದೇಶಗಳ ಲೇವಲಿಂಗ್ ಸಾಲ ಪಡೆದಿರುವ ರೈತರನ್ನು ಸಂಪರ್ಕಿಸಿ ವಿಶಾಲ ತಳಹದಿಯ ಹೋರಾಟ ಸಂಘಟಿಸಲು ತೀರ್ಮಾನಿಸಲಾಗಿದೆ.

ಚುನಾವಣೆಗಳು ಮತ್ತು ಗ್ರಾಮೀಣ ದುಡಿಯುವ ಜನರು

ಫೆಬ್ರವರಿ 22 ರಂದು ನಡೆದ ಲೋಕಸಭಾ ಚುನಾವಣೆಯಲ್ಲಿ, ರಾಯಚೂರು ಲೋಕಸಭಾ ಕ್ಷೇತ್ರದ ದೇವದುರ್ಗ ವಿಧಾನ ಸಭಾವಿಭಾಗದಲ್ಲಿ ಪಕ್ಷದ ಕಾರ್ಯಕರ್ತರು ನಡೆಸಿದ ಚುನಾವಣಾ ಪ್ರಚಾರ ಕಾಲದಲ್ಲಿ ಕಂಡ, ಗಮನಿಸಿದ ವಿಚಾರಗಳನ್ನು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಚಂದ್ರಶೇಖರ ಬಾಳೆಯವರು ಚರ್ಚೆ ಹಾಗೂ ಅಧ್ಯಯನಕ್ಕಾಗಿ ನಮ್ಮ ಮುಂದಿರಿಸಿದ್ದಾರೆ.

ಪ್ರಚಾರಾಂದೋಲನದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಪಕ್ಷದ ಮುಂದಾಳುಗಳು, ಕಾರ್ಯಕರ್ತರು ಒಟ್ಟು ಐವತ್ತು ಹಳ್ಳಿ ಹದಿನೈದು ಲಂಬಾಣಿ ತಾಂಡಾಗಳಲ್ಲಿ ಪ್ರಚಾರ ನಡೆಸಿದ್ದಾರೆ. ಜಾಲಹಳ್ಳಿಯ ಪಕ್ಷದ ಪ್ರಮುಖ ಕೇಂದ್ರದಲ್ಲಿ ಒಂದು ಬಹಿರಂಗ ಸಭೆ ನಡೆಸಲಾಗಿದ್ದು ಎಂಟು ಸಾವಿರಕ್ಕೂ ಹೆಚ್ಚು ಜನ ಪಾಲುಗೊಂಡಿದ್ದರು.

ಪಕ್ಷ ಪ್ರಚಾರಗೈದ ಐವತ್ತಕ್ಕೂ ಹೆಚ್ಚು ಹಳ್ಳಿಗಳಲ್ಲಿ ಹಾಗೂ ಪಕ್ಷದ ಕಾರ್ಯಕರ್ತರು ಕೆಲಸಮಾಡುವ ಸಾಮೂಹಿಕ ಸಂಘಟನೆಗಳಿರುವ ಹಳ್ಳಿಗಳಲ್ಲಿ, ಮತದಾರರು ಬೆಳಿಗ್ಗೆ ಕೃಷಿ ಚಟುವಟಿಕೆಗೆ ಹೋಗುವ ತವಕದಲ್ಲಿಯೇ ಮತದಾನ ಮಾಡಿದರು, ಮತದಾರರಲ್ಲಿ ಆಸಕ್ತಿಯನ್ನು ಕೆರಳಿಸುವಲ್ಲಿ ಪಕ್ಷಕ್ಕೆ ಸಾಧ್ಯವಾಗಿದ್ದುದು ಕಂಡು ಬರುತ್ತಿತ್ತು. ಇತರೆಡೆ ಎ ೦ ತ ದ ೌ ೦ ೦ ಲಿ ನಿರಾಸಕ್ತಿಯೊಂದೆಡೆಯಾದರೆ ಭಜನೆ ಸಾಮಾನುಗಳನ್ನು, ಇತರ ಕಾಣಿಕೆಗಳನ್ನು ಗ್ರಾಮಕ್ಕೆ ಕಾಣಿಕೆಯಾಗಿ ಕೊಟ್ಟ ಪಕ್ಷಕ್ಕೆ ಮತ ಹಾಕುವ ಶರತ್ತುಗಳು ಹಾಕಿದ್ದುಂಟು. ಚುನಾವಣೆ ಮುಂಚಿನ ರಾತ್ರಿ ಸೆರೆ, ಬ್ರಾಂದಿಯನ್ನು ವ್ಯಾಪಕವಾಗಿ ಮತದಾರರಿಗೆ ಹಂಚಲಾಗಿತ್ತು.

ಒಟ್ಟಾರೆಯಾಗಿ 50% ಮಾತ್ರ ಮತದಾನವಾಗಿದ್ದು 50%ರಷ್ಟು ಮತದಾರರು ಗ್ರಾಮದಲ್ಲಿರಲಿಲ್ಲವೆಂಬುದು ಕಟುಸತ್ಯ. ಒಂದು ನಿರ್ದಿಷ್ಟ ಹಳ್ಳಿಯಲ್ಲಿ ಪಕ್ಷದ ಕಾರ್ಯಕರ್ತರ ವರದಿಯಂತೆ ಒಂಭತ್ತು ನೂರು ಮತದಾರರಲ್ಲಿ 350 ಮತದಾರರು ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ವಲಸೆಹೋಗಿರುವುದು ಕಂಡುಬಂತು. ಕನಿಷ್ಠ ಹತ್ತು ಸಾವಿರ ಕುಟುಂಬಗಳು ಅಂದರೆ 30% ರಿಂದ 40% ಮತದಾರರು ಕೆಲಸ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಹೋಗಿದ್ದಾರೆ. ಅಂದರೆ ಬಹು ಸಂಖ್ಯಾತ ಗ್ರಾಮೀಣ ದುಡಿಯುವ ಜನತೆ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲುಗೊಳ್ಳಲಿಲ್ಲವೆಂಬುದು ಗಮನಾರ್ಹ.

ಯಾವ ಬಂಡವಾಳಶಾಹಿ-ಭೂಮಾಲೀಕ ರಾಜಕೀಯ ಧೋರಣೆಯಿಂದಾಗಿ ದುಡಿಯುವ ಕೈಗೆ ಕೆಲಸವಿಲ್ಲದಾಗಿದೆಯೋ, ಕೊಳ್ಳುವ ಶಕ್ತಿಯನ್ನು ಕಳೆದುಕೊಂಡು ಅಲೆಮಾರಿಗಳನ್ನಾಗಿ ಮಾಡಲು ಕಾರಣೀಭೂತವಾಗಿದೆಯೋ ಆ ಧೋರಣೆಯನ್ನು ಬದಲಾಯಿಸಬೇಕಾದ ಚುನಾವಣೆಯಲ್ಲಿ ಆ ಮತದಾರರೇ ಪಾಲುಗೊಳ್ಳಲಾಗುತ್ತಿಲ್ಲವೆಂಬುದೇ ಬಂಡವಾಳಶಾಹಿ ರಾಜಕೀಯಕ್ಕೆ ಮತ್ತೆ ಐದು ವರ್ಷದ ಜೀವದಾನವಾಗಿದೆ.

ಕಳೆದ ವರ್ಷಗಳಲ್ಲಿ ಬೆಳೆಯಿಲ್ಲದಿರುವಾಗ ಹಾಗೂ ಬರಗಾಲದಲ್ಲಿ ಕೃಷಿಕೂಲಿಕಾರರು ನೀರಾವರಿಯಿರುವ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು. ಈಗ ಹೆಚ್ಚು ನಗರ ಪ್ರದೇಶಗಳಿಗೆ ಹೋಗುತ್ತಾರೆ. ಅದರಲ್ಲೂ ಇತ್ತಿತ್ತಲಾಗಿ ಬೆಂಗಳೂರು ಮಹಾನಗರದಲ್ಲಿ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡಲು ಹೋಗುತ್ತಾರೆ.

ಬದಲಾದ ಜೀವನ ಕ್ರಮ

ಹೈದ್ರಾಬಾದ್ ಕರ್ನಾಟಕದ ಬಹುತೇಕ ತಾಲೂಕುಗಳಲ್ಲಿ ಇದೇ ಪರಿಸ್ಥಿತಿ ಕಂಡು ಬರುತ್ತಿದೆ. ಆದಾಗ್ಯೂ ದೇವದುರ್ಗ ತಾಲೂಕಿನಿಂದ ಸ್ಪಷ್ಟ ವರದಿಯಿದ್ದು ನಮ್ಮ ಸಂಘಟನೆಯಲ್ಲಿ ಮತ್ತು ಹೋರಾಟದಲ್ಲಿ ಪಾಲುಗೊಂಡ ಸಾವಿರಾರು ರೈತರು, ಕೃಷಿಕೂಲಿಕಾರರು ಬೆಂಗಳೂರಿಗೆ ವಲಸೆ ಬಂದಿದ್ದಾರೆ.

ಗ್ರಾಮದಲ್ಲಿ ಇಪ್ಪತ್ತು ಮೂವತ್ತು ರೂಪಾಯಿಗೆ ದಿನವಿಡೀ ಕೆಲಸಮಾಡಬೇಕಾದವರೇ ಇಂದು ಬೆಂಗಳೂರಲ್ಲಿ ಗಂಡ ಹೆಂಡತಿ ಸೇರಿ 100/- ರೂ ನಿಂದ ರೂ 120/-ವರೆಗೆ ದಿನವೊಂದಕ್ಕೆ ಕೂಲಿ ಪಡೆಯುತ್ತಾರೆ. ಈ ಹೆಚ್ಚಿನ ಕೂಲಿಯಿಂದಾಗಿ ಅವರ ಕೊಳ್ಳುವ ಶಕ್ತಿ ಹೆಚ್ಚಾಗಿದೆ, ಜೀವನ ಕ್ರಮ ಬದಲಾಗಿದೆ. ಕೆಲವು ಕುಟುಂಬಗಳು ಶಾಶ್ವತವಾಗಿಯೇ ಬೆಂಗಳೂರಲ್ಲಿ ನೆಲೆಸಿದ್ದಾರೆ. ಹಬ್ಬ, ಜಾತ್ರೆ ಇತರ ಪ್ರಮುಖ ದಿನಗಳಿಗೆ ಮಾತ್ರ ತಮ್ಮ ಗ್ರಾಮಗಳಿಗೆ ಭೇಟಿ ನೀಡುತ್ತಾರೆ. ಉಳಿದ ಬಹುಸಂಖ್ಯಾತರು ಹಳ್ಳಿಯಲ್ಲಿ ಕೆಲಸವಿಲ್ಲದ ಸಮಯದಲ್ಲಿ ಮಾತ್ರ ಬೆಂಗಳೂರಿಗೆ ಬಂದು ಕೆಲವು ತಿಂಗಳಿದ್ದು ಮರಳಿ ಹಳ್ಳಿಗೆ ಹೋಗುತ್ತಾರೆ.

ಹೊಸ ಆರ್ಥಿಕ ನೀತಿಯಿಂದಾಗಿ ಬಡ ಹಾಗೂ ಮಧ್ಯಮ ರೈತರು ಕೃಷಿಯಲ್ಲಿ ತೀವ್ರ ಹಿನ್ನಡೆ ಸಾಧಿಸಿದ್ದು, ಅತಿ ಹೆಚ್ಚು ಸಾಲದಲ್ಲಿ ಸಿಲುಕಿದ್ದು ಅದರಿಂದ ಹೊರಬರಲಾಗದೆ ಹೊಸ ಸಾಲ ಸಿಗದಂತಾಗಿ ಬೆಳೆದ ಮಾಲಿಗೆ ಸುಗ್ಗಿಯ ಸಮಯದಲ್ಲಿ ಬೆಲೆಗಳು ತೀರಾ ಕುಸಿದು ಕೃಷಿಕೂಲಿಕಾರರ ಜೊತೆ ಸೇರುವ ಅನಿವಾರ್ಯತೆಗೆ ಬಂದಿದ್ದಾರೆ. ಹಳ್ಳಿಯಲ್ಲಿ ಕೂಲಿಗೆ ಹೋಗಲು ಕೆಲವರು ಮುಜುಗರದಿಂದಾಗಿ ನಗರಕ್ಕೆ ವಲಸೆ ಹೋಗುತ್ತಾರೆ.

ಈ ಹಿನ್ನೆಲೆಯಲ್ಲಿ ಗ್ರಾಮದ ಕೃಷಿಕೂಲಿಕಾರ ಬಡರೈತರ ಬಹು ಭಾಗ, ಮಧ್ಯಮ ರೈತರ ಒಂದು ಸಣ್ಣ ಭಾಗ ತಮ್ಮ ಶ್ರಮದ ಬೆಲೆಯನ್ನು ಅರಿಯಲು ಸಾಧ್ಯವಾಗಿದೆ. ಗ್ರಾಮದಲ್ಲಿ ಇಪ್ಪತ್ತು ಮೂವತ್ತು ರೂಪಾಯಿ ಕೂಲಿಗೆ ನಿರಾಕರಣೆ ಮಾಡುವ ಮುಖಾಂತರ ಹೆಚ್ಚಿನ ಕೂಲಿ ಕೊಡಬೇಕು ಇಲ್ಲವೆ 50 ರೂ ಕೂಲಿ ಬೀಳುವಂತೆ ಗುತ್ತಿಗೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಈ ಪ್ರಜ್ಞೆ ಸಾಮಾನ್ಯ ಪ್ರಜ್ಞೆಯಾಗಿ ಗ್ರಾಮೀಣ ದುಡಿಮೆಗಾರರಲ್ಲಿ ಶ್ರಮಕ್ಕೆ ತಕ್ಕ ಪ್ರತಿಫಲ ಕೇಳುವ ಕ್ರಾಂತಿಕಾರಿ ತಿಳುವಳಿಕೆ ಹೆಚ್ಚಾಗುತ್ತಿದೆ. ಹತ್ತಾರು ಕಾರ್ಯಕರ್ತರು ವರ್ಷಗಟ್ಟಲೆ ಹೋರಾಟ ಮಾಡಿ ಬೆಳೆಸಬೇಕಾದ ಪ್ರಜ್ಞೆ ಬಂಡವಾಳಶಾಹಿಯ ಕೋಟೆಯಾದ ಬೆಂಗಳೂರು ಮಹಾ ನಗರದ ಕಾರ್ಮಿಕರ ಕೊಡುಗೆಯಾಗಿ ಬಂದಿದೆ.

ಈ ಪ್ರಜ್ಞೆ ಕೂಲಿ ಹೆಚ್ಚು ಕೇಳುವುದರ ಜೊತೆ ಭೂಮಾಲೀಕರಿಗೆ ತಗ್ಗಿ, ಬಗ್ಗಿ ನಡೆಯಬೇಕೆಂಬ ಪಾಳೇಗಾರಿ ಪ್ರಜ್ಞೆಯಿಂದ ಹೊರಬಂದು ನಮ್ಮ ದುಡಿಮೆಯಿಂದ ನಾವು ಬದುಕುತ್ತಿದ್ದೇವೆಂಬ ಪ್ರಜ್ಞೆಯುತ್ತ ಹಾಗೂ ಭೂಮಿ, ಹಸಿರು ಕಾರ್ಡ್ ಸೇರಿದಂತೆ ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಯಾರಿಗೂ ಹೆದರದೆ ಹೋರಾಟಕ್ಕೆ ಹೆಚ್ಚೆಚ್ಚು ಉತ್ಸಾಹ ತೋರಿಸುವುದು ಕಂಡು ಬರುತ್ತಿದೆ.

ಬದಲಾಗುತ್ತಿರುವ ಗ್ರಾಮೀಣ ಶೋಷಕರು

ಕೃಷಿಕೂಲಿಕಾರರು ಕೂಲಿ ಹೆಚ್ಚು ಕೇಳುತ್ತಿರುವಾಗ ಭೂಮಾಲೀಕರು ಕೃಷಿಕೂಲಿಕಾರರನ್ನು ಹೆಚ್ಚೆಚ್ಚು ದ್ವೇಷದಿಂದ ಕಾಣುತ್ತಿದ್ದಾರೆ. ಹಿಂದೆ ಬಿಟ್ಟಿಗೆ ಕೆಲಸ ಪಡೆದು ನಂತರ ಅತೀ ಕಡಿಮೆ ಕೂಲಿಯಲ್ಲಿ ಕೆಲಸ ಪಡೆದ ಅನುಭವದಲ್ಲಿ ಕೂಲಿಕಾರರಿಗೆ ಸೊಕ್ಕು ಬಂದಿದೆ ಸೋಮಾರಿಗಳಾಗಿದ್ದಾರೆ, ಕೆಲಸವಿದ್ದರೂ ಬರದೆ ಹೊತ್ತು ಕಳೆಯುತ್ತಾರೆಂದು ವಾದಿಸುತ್ತಾರೆ. ಜೊತೆಗೆ ಹೆಚ್ಚು ಕೂಲಿ ಕೊಟ್ಟರೂ ಎಂಟು ಘಂಟೆ ಕೆಲಸ ಮಾಡುವುದಿಲ್ಲವೆಂದು ದೂರುತ್ತಾರೆ.

ಕೃಷಿಕೂಲಿಕಾರರು ಶ್ರಮಕ್ಕೆ ಕೂಲಿ ಹೆಚ್ಚು ಕೇಳುವುದನ್ನು ಪ್ರತಿಭಟಿಸುವ ಭೂಮಾಲೀಕರು ಬಂಡವಾಳಶಾಹಿ ಮಾರುಕಟ್ಟೆಯ ದಾಳಿಯ ಬಗ್ಗೆ ಸರಕಾರದ ಹೊಸ ಕೃಷಿ ನೀತಿಯಿಂದಾಗುವ ತೊಂದರೆಗಳನ್ನು ಪ್ರತಿಭಟಿಸುವುದಕ್ಕಿಂತಲೂ ಹೆಚ್ಚಾಗಿ, ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಹಾದಿ ಹಿಡಿದಿದ್ದಾರೆ. ಆದರಲ್ಲಿ ವಿಭಿನ್ನತೆಯನ್ನು ಕಾಣಬಹುದು.

ಮಧ್ಯಮ ರೈತರ ಒಂದು ಭಾಗ ಶ್ರೀಮಂತ ರೈತರು ಹಾಗೂ ಬಂಡವಾಳಶಾಹಿ ಮತ್ತು ಪಾಳೇಗಾರಿ ಭೂಮಾಲಿಕರಲ್ಲಿ ಒಂದು ಭಾಗ ಕೃಷಿಯಲ್ಲಿ ಬಂಡವಾಳಶಾಹೀಕರಣ ಗೊಳಿಸುವುದಕ್ಕಿಂತಲೂ ಹೆಚ್ಚಾಗಿ ಕೃಷಿಯೇತರ ಚಟುವಟಿಕೆಗಳನ್ನು ಹಾಗೂ ಕೃಷಿಗೆ ಪೂರಕವಾದ ವ್ಯವಹಾರಗಳಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಮುಖಾಂತರ ತಮ್ಮ ಗ್ರಾಮೀಣ ವರ್ಗದ ಹಿಡಿತವನ್ನು ಭದ್ರಪಡಿಸಿಕೊಳ್ಳುತ್ತಿರುವುದು ಗಂಭೀರವಾಗಿ ಅವಗಾಹನೆ ಮಾಡುವ ಅವಶ್ಯಕತೆಯಿದೆ (ಪಕ್ಷದ ರಾಜ್ಯ ಸಮ್ಮೇಳನ ಇದನ್ನು ಒತ್ತಿ ಹೇಳಿದೆ.)

ಗ್ರಾಮೀಣ ಶೋಷಕರು ಗ್ರಾಮೀಣ ಅಭಿವೃದ್ಧಿಗಾಗಿ ಬರುವ ಹಣವನ್ನು ದೋಚುವ ಗುತ್ತೇದಾರಿ ಲೈಸನ್ಸ್ ಹೊಂದುತ್ತಾರೆ ಇಲ್ಲವೆ ಇಲಾಖೆಯ ಹೆಸರಲ್ಲಿ ಬೇನಾಮಿಯಾಗಿ ಮಾಡಿ ಬಿಲ್ ಎತ್ತಿ ದುಡ್ಡುಮಾಡುತ್ತಾರೆ.

ಬಾಡಿಗೆ ನಡೆಸಲು ಜೀಪ್, ಕಾರ್, ಟೆಂಪೊ, ಟ್ರಕ್, ಟ್ರಾಕ್ಟರ್, ಬೆಳೆಕಟಾವು ಯಂತ್ರ, ರಾಶಿ ಮಾಡುವ ಯಂತ್ರ, ಬಾವಿಯಲ್ಲಿ ಹೊಂಡ ತೆಗೆಯುವ ಯಂತ್ರ, ಬೋರವೆಲ್ಲ ಹಾಕುವ ರಿಗ್ಗಗಳನ್ನು ಬ್ಯಾಂಕ್ ಸಾಲಗಳ ಮುಖಾಂತರ ಖರೀದಿಸಿ ಲಾಭ ಮಾಡಿಕೊಳ್ಳುತ್ತಾರೆ.

ಇನ್ನು ಕೆಲವರು ಕಿರಾಣಿ, ರಸಗೊಬ್ಬರ ಕ್ರಿಮಿನಾಶಕ, ಬೀಜ, ವಿದ್ಯುತ್ ವಸ್ತುಗಳು ಮೋಟಾರುಗಳನ್ನು ಮಾರಾಟಮಾಡುವ ಶಾಪ್‌ಗಳನ್ನು ಹೊಂದುತ್ತಿದ್ದರೆ ರೈತರ ಮಾಲನ್ನು ಖರೀದಿಸಿ, ಮಾರಾಟ ಮಾಡುವುದು, ಬಡ್ಡಿ ಲೇವಾದೇವಿ ಮಾರಾಟ ಮಾಡುವವರು ಇನ್ನು ಕೆಲವರು.

ಮತ್ತೆ ಕೆಲವರು ನ್ಯಾಯ ಬೆಲೆ ಅಂಗಡಿ ಸಹಕಾರಿ ಸಂಘ ಹೆಂಡ ಸೆರೆ, ಬ್ರಾಂದಿ ಮಾರಾಟ, ಗ್ರಾಮ ಪಂಚಾಯತಿ, ತಾಲೂಕಾ ಪಂಚಾಯತಿ ಕೃಷಿ ಹುಟುವಳಿ ಮಾರುಕಟ್ಟೆ ಸಮಿತಿಗೆ ಚುನಾಯಿತರಾಗಿ ರಾಜಕೀಯವಾಗಿ ಹಣ ಮಾಡುವುದು.

ಪ್ರತಿಗ್ರಾಮದ 5% ರಿಂದ 10% ಭಾಗದ ಭೂಮಾಲಿಕ ಶ್ರೀಮಂತ ರೈತರು ಇಂತಹ ಚಟುವಟಿಕೆಗಳ ಮುಖಾಂತರ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಗಟ್ಟಿಗೊಳಿಸಿಕೊಳ್ಳುತ್ತಾ ಯಾವುದಾದರೊಂದು

7ನೇ ಪುಟ ನೋಡಿ

ಸ್ವತಂತ್ರ ಭಾರತದ ಗಣತಂತ್ರ ಸಂವಿಧಾನ

ಇಎಂಎಸ್

ಐವತ್ತು ವರ್ಷಗಳ ಹಿಂದೆ ಸ್ವತಂತ್ರ ಭಾರತದ ಗಣತಂತ್ರ ಸಂವಿಧಾನದ ಕರಡು ಸಿದ್ಧವಾಯಿತು. ಈ ಸಂವಿಧಾನದ ಆಶಯಗಳೇನು ? ಕಳೆದ ಐವತ್ತು ವರ್ಷಗಳಲ್ಲಿ ಇವು ಅನುಷ್ಠಾನಕ್ಕೆ ಬಂದಿವೆಯೇ? ಹಿರಿಯ ಮಾರ್ಕ್ಸ್‌ವಾದಿ ಚಿಂತಕ ಇ.ಎಂ.ಎಸ್. ನಂಬೂದರಿಪಾಡ್ ಪರಿಶೀಲಿಸುತ್ತಾರೆ.

ಸ್ವತಂತ್ರ ಭಾರತದ ಸಂವಿಧಾನದ ಕರಡನ್ನು ಫೆಬ್ರವರಿ 21, 1948 ರಂದು ಸಂವಿಧಾನದ ಸಭೆಯ ಸಮ್ಮತಿಗೆ ಮಂಡಿಸಲಾಯಿತು. ನಂತರ ಎರಡು ವರ್ಷಗಳೊಳಗೆ ಅಂದರೆ ಜನವರಿ 26, 1950 ರಂದು ಅಂತಿಮವಾಗಿ ಅದನ್ನು ಅಂಗೀಕರಿಸಿದಾಗ ಅದು ಈ ನೆಲದ ಕಾನೂನಾಗಿ ಪರಿವರ್ತನೆಗೊಂಡಿತು.

ಈ ಸಂವಿಧಾನ ಬ್ರಿಟಿಶ್ ಸಂವಿಧಾನವನ್ನು ಆಧರಿಸಿತ್ತು. ಆದರೆ ಬ್ರಿಟಿಶ್ ಒಂದು ಚಕ್ರಾಧಿಪತ್ಯ, ಆಳುವ ಸಾಮ್ರಾಟ ಪ್ರಭುತ್ವದ ಮುಖ್ಯಸ್ಥ. ಹೀಗೆ ಅಲ್ಲಿ ಪ್ರಭುತ್ವದ ಮುಖ್ಯಸ್ಥನ ಸ್ಥಾನ ವಂಶಪಾರಂಪರ್ಯದ್ದು.

ಆದರೆ ಭಾರತದಲ್ಲಿ ಇಂತಹ ಆಳುವ ಚಕ್ರಾಧಿಪತಿಯಿಲ್ಲ, ಸಂಸತ್ತಿನ ಎರಡೂ ಸದನಗಳ ಹಾಗೂ ಎಲ್ಲಾ ವಿಧಾನ ಸಭೆಗಳು ಸದಸ್ಯರು ಆರಿಸುವ ರಾಷ್ಟ್ರಪತಿಗಳು ಇಲ್ಲಿ ಪ್ರಭುತ್ವದ ಮುಖ್ಯಸ್ಥರು. ಆದರೆ ಸಂಸತ್ತಿನ ಎರಡೂ ಸದನಗಳ ನಡವಳಿಕೆಗಳ ವಿಧಿ-ವಿಧಾನಗಳು ಬ್ರಿಟಿಶ್ ಕಾನೂನನ್ನು ಆಧರಿಸಿದಂತವು. ಆದ್ದರಿಂದ ಭಾರತದ ಗಣತಂತ್ರ ಸಂವಿಧಾನವನ್ನು ಅರ್ಥೈಸುವಾಗ ಪರಿಣಿತರು ಬ್ರಿಟಿಶ್ ಪಾರ್ಲಿಮೆಂಟಿನ ವಿಧಿ-ವಿಧಾನಗಳ ಮೇಲೆ ವಿಪರೀತವಾಗಿ ಅವಲಂಬಿಸುತ್ತಾರೆ.

ಅತ್ಯಂತ ತೀವ್ರಗಾಮಿ ಸಂವಿಧಾನ

ಭಾರತೀಯ ಸಂವಿಧಾನದ ಮೇಲೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ನೇತೃತ್ವದ ಸ್ವಾತಂತ್ರ್ಯ ಆಂದೋಲನ ಪ್ರತಿಪಾದಿಸಿದ ತೀವ್ರಗಾಮಿ ಪ್ರಜಾಪ್ರಭುತ್ವವಾದೀ ವಿಚಾರಗಳ ಪ್ರಭಾವ ಬಹಳವಿದೆ. ಮೂಲಭೂತ ಹಕ್ಕುಗಳು ಮತ್ತು ಪ್ರಭುತ್ವ ಧೋರಣೆಯ ನಿರ್ದೇಶಕ ಸೂತ್ರಗಳು ಎಂಬ ಅಧ್ಯಾಯಗಳು ಮೂಲಭೂತ ಹಕ್ಕುಗಳನ್ನು ಕುರಿತಾದ ಕರಾಚಿ ಕಾಂಗ್ರೆಸ್ ನಿರ್ಣಯವನ್ನೇ ಆಧರಿಸಿವೆ. ಅಲ್ಲದೆ, ಭಾರತೀಯ ಸಂವಿಧಾನವನ್ನು ಅಂಗೀಕರಿಸಿದ ನಂತರದ ದಶಕಗಳಲ್ಲಿ ಧರ್ಮನಿರಪೇಕ್ಷತೆ ಹಾಗೂ ಸಮಾಜವಾದೀ ಸಮಾಜದ ವಿಚಾರಗಳನ್ನು ಸಂವಿಧಾನದ ಮುನ್ನುಡಿಯಲ್ಲಿ ಸೇರಿಸಲಾಯಿತು. ಆದ್ದರಿಂದ ಎರಡನೇ ಮಹಾಯುದ್ಧದ ನಂತರ ರಚನೆಗೊಂಡ ಸ್ವತಂತ್ರ ಪ್ರಭುತ್ವಗಳು ರೂಪಿಸಿದ ಸಂವಿಧಾನಗಳಲ್ಲಿ 1980 ರಲ್ಲಿ ಅಂತಿಮವಾಗಿ ಅಂಗೀಕರಿಸಿದ ಭಾರತೀಯ ಸಂವಿಧಾನವೇ ಅತ್ಯಂತ ತೀವ್ರಗಾಮಿ ಸಂವಿಧಾನ ಎಂದು ಹೇಳಲು ಅಡ್ಡಿಯೇನಿಲ್ಲ.

ಈಗ ಏಳುವ ಪ್ರಶ್ನೆ ಈ ಸಂವಿಧಾನ ಕಳೆದ ಐವತ್ತು ವರ್ಷಗಳಲ್ಲಿ ಹೇಗೆ ಕೆಲಸ ಮಾಡಿದೆ ಎಂಬುದು; ಸಂವಿಧಾನ ಸ್ಪಷ್ಟವಾಗಿ ಕಾಣಿಸಿದ ಹಾಗೂ ಅದರಲ್ಲಿ ಅಂತರ್ಗತವಾದ ಉಚ್ಛ ಭಾವನೆಗಳನ್ನು, ವಿಚಾರಗಳನ್ನು ಈಡೇರಿಸಲಾಗಿದೆಯೇ ಅಥವಾ ಅವನ್ನು ಕಾರ್ಯತಃ ಉಲ್ಲಂಘಿಸಲಾಗಿದೆಯೇ?

ಮೊದಲ ಅಸಂವಿಧಾನಿಕ ಕ್ರಮ

ಸ್ವತಂತ್ರ ಭಾರತದ ಸಂವಿಧಾನ 1952 ರ ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದ ತಕ್ಷಣ ಮೊದಲ ಪರೀಕ್ಷೆಗೆ ಒಡ್ಡಲ್ಪಟ್ಟಿತು. ಕಾಂಗ್ರೆಸ್ ತಿರುವಾಂಕೂರು, ಕೊಚ್ಚಿನ್, ಮದ್ರಾಸ್ ಹಾಗೂ ಪೆಪ್ಸು(ಪಾಟಿಯಾಲ ಮತ್ತು ಪಶ್ಚಿಮ ಪಂಜಾಬ್ ರಾಜ್ಯಗಳ ಸಂಘ) ನಲ್ಲಿ ಸೋತಿತು. ಈ ಮೂರು ರಾಜ್ಯ ವಿಧಾನ ಸಭೆಗಳಲ್ಲಿ ಪ್ರತಿಪಕ್ಷಗಳ ಬಹುಮತವಿತ್ತು. ಆದರೆ ಕೇಂದ್ರದಲ್ಲಿನ ಆಳುವ ಪಕ್ಷದ ಕಸರತ್ತಿನಿಂದಾಗಿ ತಿರುವಾಂಕೂರು - ಕೊಚ್ಚಿನ್‌ನ ರಾಜ ಪ್ರಮುಖ ಹಾಗೂ ಮದ್ರಾಸಿನ ರಾಜ್ಯಪಾಲರ ಹುದ್ದೆಯನ್ನು ಬಳಸಿಕೊಂಡು ಕಾಂಗ್ರೆಸ್ ಶಾಸಕಾಂಗ ಮುಖಂಡ ಮುಖ್ಯಮಂತ್ರಿಯಾಗಿ ಪ್ರತಿಜ್ಞಾ-ಸ್ವೀಕಾರ ಮಾಡುವಂತಾಯಿತು. ಆದರೆ ಪೆಪ್ಸುನಲ್ಲಿ ಅಕಾಲಿ ಸರಕಾರ ಪ್ರತಿಜ್ಞಾ ಸ್ವೀಕರಿಸುವುದನ್ನು ತಪ್ಪಿಸಲಾಗಲಿಲ್ಲ.

ಇಲ್ಲಿ ಕೂಡಾ ಕೆಲವು ತಿಂಗಳ ಅಕಾಲಿ ಆಳ್ವಿಕೆಯ ನಂತರ ಈ ಕಾಂಗ್ರೆಸ್ಸೇತರ ಸರಕಾರವನ್ನು ಕೇಂದ್ರ ಸರಕಾರ ವಜಾ ಮಾಡಿತು. ನಂತರ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ಕಾಂಗ್ರೆಸ್ ಅಕಾಲಿದಳದ ಒಂದು ವಿಭಾಗದ ಬೆಂಬಲದಿಂದ ಅಧಿಕಾರಕ್ಕೆ ಬಂತು. ಹೀಗೆ ಕೇಂದ್ರದಲ್ಲಿನ ಆಳುವ ಪಕ್ಷ ಅಂದರೆ ಕಾಂಗ್ರೆಸ್ ಸಂವಿಧಾನವನ್ನು ಕಾಯಾ, ವಾಚಾ, ಮನಸಾ ಅನುಷ್ಠಾನಕ್ಕೆ ತರಲು ಸಿದ್ಧವಿರಲಿಲ್ಲ ಎಂಬುದು ಸ್ಪಷ್ಟವಾಯಿತು.

ಮುಂದಿನ ಸಾರ್ವತ್ರಿಕ ಚುನಾವಣೆ(1957) ಯಲ್ಲಿ ತೀರ್ಪು ಇನ್ನೂ ಸ್ಪಷ್ಟವಾಗಿತ್ತು. ಕೇರಳ ರಾಜ್ಯ ವಿಧಾನಸಭೆಯಲ್ಲಿ ಕಮ್ಯುನಿಸ್ಟ್ ಪಕ್ಷ ಅತಿದೊಡ್ಡ ಪಕ್ಷವಾಗಿ ಮೂಡಿಬಂತು. ಒಂದು ಕಮ್ಯುನಿಸ್ಟ್ ಮಂತ್ರಿ ಮಂಡಳದ ಪ್ರತಿಜ್ಞಾ ಸ್ವೀಕಾರವನ್ನು ತಪ್ಪಿಸಲಾಗಲಿಲ್ಲ. ಭಾರತದ ಯಾವುದೇ ರಾಜ್ಯದಲ್ಲಿ ಪ್ರಪ್ರಥಮ ಎಡ ನೇತೃತ್ವದ ಮಂತ್ರಿಮಂಡಳವಾದ ಈ ಮಂತ್ರಿ ಮಂಡಳದ ಕಾರ್ಯನಿರ್ವಹಣೆಯಲ್ಲಿ ಕೇಂದ್ರ ಹಸ್ತಕ್ಷೇಪ ಮಾಡುವುದಿಲ್ಲ ಎಂದು ರಾಷ್ಟ್ರಪತಿ ರಾಜೇಂದ್ರಪ್ರಸಾದ್ ಹಾಗೂ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಸ್ಪಷ್ಟ ಹೇಳಿಕೆಗಳನ್ನು ನೀಡಿದರು.

ಆದರೆ ಎರಡೂವರೆ ವರ್ಷದೊಳಗೆ, ಕಮ್ಯುನಿಸ್ಟ್ ಸರಕಾರವನ್ನು ಪದಚ್ಯುತಗೊಳಿಸುವ ಸಂವಿಧಾನಬಾಹಿರ 'ವಿಮೋಚನಾ ಸಮರ' ಕೇಂದ್ರ ಕಾಂಗ್ರೆಸ್ ನಾಯಕತ್ವದ ಆಶೀರ್ವಾದದಿಂದ ನಡೆಯಿತು. ಈ ಸಂವಿಧಾನಬಾಹಿರ ಸಮರದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಿತು. ಯಾವ ನೀತಿಗಳ ಆಧಾರದಲ್ಲಿ ಜನವರಿ 26, 1950 ರಂದು ಗಣತಂತ್ರ ಸಂವಿಧಾನವನ್ನು ಅಂಗೀಕರಿಸಲಾಗಿತ್ತೋ ಈ ನೀತಿಗಳಿಗೆ ದೇಶದ ಆಳುವ ಪಕ್ಷ ಯಾವುದೇ ಗೌರವ ನೀಡುವುದಿಲ್ಲ ಎಂಬುದು ಸ್ಪಷ್ಟವಾಯಿತು.

ಉಲ್ಲಂಘನೆಗಳೇ ಉಲ್ಲಂಘನೆಗಳು

ಆದರೆ ಇದು ಕೇವಲ ಆರಂಭವಾಗಿತ್ತು. ಮೊದಲು 1952 ರಲ್ಲಿ ಪೆಪ್ಸುನಲ್ಲಿ ಕೈಗೊಂಡ ಕ್ರಮ, ನಂತರ 1959 ರಲ್ಲಿ ಕೇರಳದಲ್ಲಿ ಕೈಗೊಂಡ ಕ್ರಮ ಆ ಮೇಲೆ ಸುಮಾರು ನೂರುಬಾರಿ ಪುನರಾವರ್ತನೆಗೊಂಡಿತು; ಕೇಂದ್ರ ಸರ್ಕಾರ ಹೀಗೆ ವಜಾ ಮಾಡಿದ ಸರಕಾರಗಳಲ್ಲಿ ಕೇಂದ್ರದ ಮುಖಂಡರ ಮರ್ಜಿ ಹಿಡಿಯದ ಕಾಂಗ್ರೆಸ್ಸಿನ ಗುಂಪಿನ ನೇತೃತ್ವ ಸರಕಾರಗಳೂ ಇವೆ. ಹೀಗೆ ರಾಜ್ಯದ ಶಾಸಕರ ಬಹುಮತದ ಬೆಂಬಲವಿರುವ ಚುನಾಯಿತ ರಾಜ್ಯ ಸರಕಾರದ ಹಕ್ಕನ್ನು ಸಂವಿಧಾನದ ಬಗ್ಗೆ ಯಾವುದೇ ಪರಿಗಣನೆಯಿಲ್ಲದೆ ಉಲ್ಲಂಘಿಸಲಾಯಿತು.

ಆಳುವ ಪಕ್ಷಕ್ಕೆ ಸಂವಿಧಾನದ ಅಂಶಗಳ ಬಗ್ಗೆ ಯಾವುದೇ ಗೌರವವಿಲ್ಲ ಎಂಬುದು ಈ ಎಲ್ಲಾ ಪ್ರಕರಣಗಳಲ್ಲಿ ಸ್ಪಷ್ಟವಾಗಿತ್ತು. 1996-97 ರಲ್ಲಿ ಕಾಂಗ್ರೆಸ್ ಲೋಕಸಭೆಯಲ್ಲೂ, ರಾಜ್ಯಸಭೆಯಲ್ಲೂ ಅಲ್ಪಮತಕ್ಕಿಳಿದಾಗ ಈ ಪ್ರವೃತ್ತಿ ತಾರಕಕ್ಕೇರಿತು. ಬಹುಪಾಲು ಭಾರತೀಯ ಜನತೆಯ ಬೆಂಬಲವನ್ನು ಕಳಕೊಂಡಿದ್ದೇವೆ ಎಂಬ ವಾಸ್ತವತೆಯನ್ನು ಮರ್ಯಾದೆಯಿಂದ ಒಪ್ಪಿಕೊಳ್ಳುವ ಬದಲು ಕಾಂಗ್ರೆಸ್ ಮತ್ತೆ ಕಸರತ್ತುಗಳನ್ನು ಆರಂಭಿಸಿತು. 13 ಪಕ್ಷಗಳ ಸಂಯುಕ್ತ ರಂಗ ತನ್ನ ಮೊದಲ ಸರಕಾರ ರಚಿಸಿದಾಗ ಅದನ್ನು ವಿಧ್ಯುಕ್ತವಾಗಿ ವಿರೋಧಿಸಲಾಗದಿದ್ದರೂ, ಅಷ್ಟೇ ಅಲ್ಲ ಹೊರಗಿನಿಂದ ಆ ಸರಕಾರಕ್ಕೆ, ಬೆಂಬಲ ನೀಡುವುದಾಗಿ ಬಹಿರಂಗವಾಗಿ ಘೋಷಿಸಿದ್ದರೂ ಒಂದೇ ವರ್ಷದೊಳಗೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡು, 12ನೇ ಲೋಕಸಭೆಗೆ ಹೊಸ ಚುನಾವಣೆ ನಡೆಯುವಂತೆ ಮಾಡಿತು.

ಧರ್ಮನಿರಪೇಕ್ಷತೆಯ ತತ್ವಕ್ಕೂ ತಿಲಾಂಜಲಿ

ಈ ಇಡೀ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ತನಗೆ ಸಂವಿಧಾನದ ಇನ್ನೊಂದು ನೀತಿ ಅರ್ಥಾತ್ ಧರ್ಮನಿರಪೇಕ್ಷತೆಯ ಬಗ್ಗೆಯೂ ಗೌರವವಿಲ್ಲ ಎಂದು ತೋರಿಸಿಕೊಂಡಿತು. ಕೇರಳದಲ್ಲಿ 1959 ರಲ್ಲಿ ಕಮ್ಯುನಿಸ್ಟ್ ಸರಕಾರದ ವಿರುದ್ಧ ನಡೆಸಿದ 'ವಿಮೋಚನಾ ಸಮರ' ಒಂದು ಪ್ರಜಾಪ್ರಭುತ್ವ ನೀತಿಯ ಮೇಲೆ ಅಂದರೆ ರಾಜ್ಯದ ಶಾಸನ ಸಭೆಯ ಬಹುಮತದ ವಿಶ್ವಾಸ ಪಡೆದಿರುವ ಒಂದು ಸರಕಾರ ಮುಂದಿನ ಚುನಾವಣೆಯವರೆಗೆ ಮುಂದುವರಿಯಲು ಹಕ್ಕಿದೆ ಎಂಬ ಪ್ರಜಾಪ್ರಭುತ್ವ ನೀತಿಯ ಮೇಲೆ ಮಾಡಿದ ಧಾಳಿ ಮಾತ್ರವೇ ಆಗಿರಲಿಲ್ಲ. ಅದು ಧರ್ಮನಿರಪೇಕ್ಷತೆಯ ನೀತಿಯ ಉಲ್ಲಂಘನೆಯೂ ಆಗಿತ್ತು. ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರವನ್ನು ಎಸೆದುಬಿಡಲು ಕಾಂಗ್ರೆಸ್ ಮುಸ್ಲಿಂಲೀಗ್, ಕ್ರಿಶ್ಚಿಯನ್ ಚರ್ಚುಗಳು ಹಾಗೂ ಜಾತಿ ಪಕ್ಷಗಳೊಂದಿಗೆ ವಿಧ್ಯುಕ್ತ ಮೈತ್ರಿಗಳನ್ನು ಏರ್ಪಡಿಸಿಕೊಳ್ಳುವ ಮಟ್ಟಕ್ಕೆ ಇಳಿಯಿತು. ಅಂದಿನಿಂದ ಇಂದಿನವರೆಗೂ ಕೇವಲ ತನ್ನನ್ನು ಅಧಿಕಾರದಲ್ಲಿರಿಸಿಕೊಳ್ಳಲು ಒಂದಿಲ್ಲೊಂದು ಕೋಮುವಾದಿ, ಜಾತಿವಾದಿ ಪಕ್ಷದೊಂದಿಗೆ ಅದು ಮೈತ್ರಿಗಳನ್ನು ಉಳಿಸಿಕೊಂಡು ಬಂದಿದೆ.

ಅದರ ಈ ಚುನಾವಣಾ ಸಮಯಸಾಧಕತನದಿಂದಾಗಿಯೇ ಹಿಂದೂ ಮತ್ತು ಹಿಂದೂವೇತರ ಕೋಮುವಾದ ಬೆಳೆಯುವಂತಾಯಿತು. ಕಾಂಗ್ರೆಸ್ಸಿನ ಸಂಸದೀಯ ಮತ್ತು ಚುನಾವಣಾ ಸಮಯಸಾಧಕತನವೇ ಹಿಂದೂ ಕೋಮುವಾದ ಒಂದು ಚುನಾವಣಾ ಹಾಗೂ ರಾಜಕೀಯ ಶಕ್ತಿಯಾಗಿ ಬೆಳೆಯಲು ನೆರವು ನೀಡಿತು. ಕಾಂಗ್ರೆಸ್ಸಿನ ಈ ಚುನಾವಣಾ ಸಮಯಸಾಧಕತನ ಪೂರ್ಣಪ್ರಯೋಜನ ಪಡೆಯುವಲ್ಲಿ ಹಿಂದೂ ಹಾಗೂ ಹಿಂದೂವೇತರ ಕೋಮುವಾದಿ ಶಕ್ತಿಗಳು ಹಿಂದೆ ಬೀಳಲಿಲ್ಲ. ಆದ್ದರಿಂದಲೇ ದೇಶದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಕಾಂಗ್ರೆಸ್ ವಿರುದ್ಧ ಹೋರಾಟದಲ್ಲಿ ಎಲ್ಲಾ ಧರ್ಮನಿರಪೇಕ್ಷ ಶಕ್ತಿಗಳನ್ನು ಒಗ್ಗೂಡಿಸಲು ಪ್ರಯತ್ನಿಸುತ್ತಿವೆ. ಕಾಂಗ್ರೆಸ್ಸಿನ ಚುನಾವಣಾ ಸಮಯಸಾಧಕತನ ಹಾಗೂ ಹಿಂದೂ ಮತ್ತು ಹಿಂದೂವೇತರ ಮತೀಯ ಗುಂಪುಗಳ ಹಾಗೂ ಅವುಗಳ ಸಂಘಟನೆಗಳ ಕೋಮುವಾದ ಒಂದೇ ನಾಣ್ಯದ ಎರಡು ಮುಖಗಳು.

1975 ರ ತಿದ್ದುಪಡಿಯ ಪ್ರಕಾರ ಧರ್ಮನಿರಪೇಕ್ಷತೆ ಸಂವಿಧಾನದ ಪೀಠಿಕೆಯಲ್ಲೇ ವಿರಾಜಿಸುತ್ತಿದ್ದರೂ ಕಾಂಗ್ರೆಸ್ ಆಳರಸರು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಸಿಖ್ ಕೋಮುವಾದಿ ಸಂಘಟನೆಗಳೊಂದಿಗೆ ಸೇರಿ ಅವರೊಂದಿಗೆ ಮೈತ್ರಿಗಳನ್ನು ಬೆಸೆಯಲೂ ಹೇಸಲಿಲ್ಲ.

ಶ್ರಮಜೀವಿ ವಿರೋಧಿ ನಿಲುವಿನಲ್ಲೂ

ಜನವರಿ 26, 1950 ರಲ್ಲಿ ಅಂಗೀಕರಿಸಿದ ಸಂವಿಧಾನದ ಆಧಾರಭೂತ ನೀತಿಗಳ ಉಲ್ಲಂಘನೆ ಎದ್ದು ಕಾಣಿಸುತ್ತಿರುವುದು ಶ್ರಮಜೀವಿಗಳನ್ನು ಕುರಿತಂತಹ ನಿಲುವಿನಲ್ಲಿ. ಜವಾಹರಲಾಲ್ ನೆಹರೂರವರಿಂದ ಹಿಡಿದು ಎಲ್ಲಾ ಕಾಂಗ್ರೆಸ್ ಸರಕಾರಗಳು ಕೈಗಾರಿಕಾ ಹಾಗೂ ಕೃಷಿ ಕಾರ್ಮಿಕರು, ದುಡಿಯುವ ರೈತರು, ಶ್ರಮಜೀವಿ ಮಧ್ಯಮ ವರ್ಗಗಳು ಇತ್ಯಾದಿ ಜನವಿಭಾಗಗಳ ಪ್ರಜಾಪ್ರಭುತ್ವ ಆಂದೋಲನಗಳ ಮೇಲೆ ನಡೆಸುತ್ತಾ ಬಂದ ಧಾಳಿಗಳು ಇದಕ್ಕೆ ಜ್ವಲಂತ ಉದಾಹರಣೆಗಳು. ಆದ್ದರಿಂದ ಕಾರ್ಮಿಕ ಸಂಘಗಳು, ಕಿಸಾನ್ ಸಭಾಗಳು, ಕೃಷಿ ಕಾರ್ಮಿಕರ ಸಂಘಗಳು ಇತರೆಲ್ಲಾ ದುಡಿಯುವ ಜನವಿಭಾಗಗಳ ಹೋರಾಟನಿರತ ಸಂಘಟನೆಗಳು ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳು ಕೈ ಮಿಲಾಯಿಸಬೇಕಾಗಿದೆ. ದುಡಿಯುವ ಜನಗಳ ಹೋರಾಟನಿರತ ಸಂಘಟನೆಗಳು ಈಗಾಗಲೇ ಕಾಂಗ್ರೆಸ್ ಮತ್ತು ಅದೇ ವರ್ಗ ಹಿತಾಸಕ್ತಿಯನ್ನು ಪ್ರತಿನಿಧಿಸುವ ಇತರ ಬಂಡವಾಳಶಾಹಿ ಪಕ್ಷಗಳ ಆರ್ಥಿಕ ಮತ್ತು ರಾಜಕೀಯ ನೀತಿಗಳ ವಿರುದ್ಧ ಒಂದು ಹೋರಾಟದ ವೇದಿಕೆಯಲ್ಲಿ ಒಟ್ಟುಗೂಡಿವೆ.

ದುಡಿಯುವ ಜನಗಳ ಈ ಹೋರಾಟನಿರತ ಸಂಘಟನೆಗಳು ತಕ್ಷಣದ ಸಮಾಜವಾದಕ್ಕಾಗಿಯೇನೂ ಹೋರಾಡುತ್ತಿಲ್ಲ. ಅವರು ತಮ್ಮ ಬದುಕಿನ ಹಾಗೂ ಕೆಲಸದ ಪರಿಸ್ಥಿತಿಗಳ ಸುಧಾರಣೆಗಾಗಿಯಷ್ಟೇ ಹೋರಾಡುತ್ತಿವೆ. ಈ ಜನವಿಭಾಗಗಳ ತಕ್ಷಣದ ಹಾಗೂ ಭಾಗಶಃ ಬೇಡಿಕೆಗಳನ್ನು ಕೂಡಾ ಬದಿಗೊತ್ತಲು ಕಾಂಗ್ರೆಸ್ ಹಾಗೂ ಅದೇ ವರ್ಗಗಳನ್ನು ಪ್ರತಿನಿಧಿಸುವ ಪಕ್ಷಗಳು ಹಾಗೂ ಅವರ ಸರಕಾರಗಳು ದಮನ ಕ್ರಮಗಳನ್ನು ಕೈಗೊಳ್ಳುತ್ತವೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಎಲ್ಲಾ ಧೋರಣೆಗಳು ಜನ-ವಿರೋಧಿಯಷ್ಟೇ ಅಲ್ಲ, ದೇಶ-ವಿರೋಧಿ ಕೂಡಾ. ಬ್ರಿಟಿಶ್ ಸಾಮ್ರಾಜ್ಯಶಾಹಿಯೊಂದಿಗೆ ರಾಜಿಮಾಡಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಂತರ ಅಮೆರಿಕನ್ ಮತ್ತು ಇತರ ಸಾಮ್ರಾಜ್ಯಶಾಹಿಗಳೊಂದಿಗೆ ಸಹಕಾರದ ಸಂಬಂಧಗಳನ್ನು ಬೆಳೆಸಿಕೊಂಡಿತು. ಇದು ಈಗ ಅಮೆರಿಕದ ನೇತೃತ್ವದ ಸಾಮ್ರಾಜ್ಯಶಾಹಿಯ ಮೇಲೆಯೇ ಹೆಚ್ಚೆಚ್ಚು ಅವಲಂಬಿಸಬೇಕಾದ ಸ್ಥಿತಿಗೆ ತಲುಪಿದೆ. ಹೀಗೆ ಭಾರತ ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಗೆ ಬೆದರಿಕೆ ಬಂದಿರುವುದರ ವಿರುದ್ಧ ಎಡ, ಪ್ರಜಾಪ್ರಭುತ್ವವಾದಿ, ಧರ್ಮನಿರಪೇಕ್ಷ ಹಾಗೂ ಒಕ್ಕೂಟವಾದೀ ಶಕ್ತಿಗಳು ಹೋರಾಡುತ್ತಿವೆ.

○

....ಆರಂಭದಲ್ಲೇ ಬಯಲು!

ಪುಟ 1 ರಿಂದ

ಸೈದ್ಧಾಂತಿಕವಾಗಿ ಅದರೊಂದಿಗಿಲ್ಲ, ಹಲವ ವಿಷಯಗಳ ಬಗ್ಗೆ ಅವರಲ್ಲಿ ಭಾರೀ ಭಿನ್ನಾಭಿಪ್ರಾಯಗಳಿವೆ. ಆದ್ದರಿಂದ ಒಂದು ಸರಕಾರ ರಚಿಸಲು ಬಿಜೆಪಿ ಅಯೋಧ್ಯಾ ವಿವಾದ, 370ನೇ ಕಲಮು, ಸಮಾನ ನಾಗರೀಕ ಸಂಹಿತೆ ಇತ್ಯಾದಿ ತನ್ನ ಕಾರ್ಯಕ್ರಮದ ಪ್ರಮುಖ ಅಂಶಗಳ ಬಗ್ಗೆ ರಾಜಿ ಮಾಡಿಕೊಂಡು 'ರಾಷ್ಟ್ರೀಯ ಅಜೆಂಡಾ'ದ ಮಾತನಾಡಲಾರಂಭಿಸಿತು. ವಾಸ್ತವವಾಗಿ ಈ ವಿವಾದಾತ್ಮಕ ವಿಷಯಗಳನ್ನು ಅದು ಸಂಘಪರಿವಾರದ ಭಜರಂಗ ದಳ, ವಿಹೆಚ್‌ಪಿ ಇತ್ಯಾದಿಗಳಿಗೆ ಬಿಟ್ಟುಕೊಡುತ್ತದೆ ಎಂದು ಸುರ್ಜಿತ್ ಹೇಳುತ್ತಾರೆ.

ಬಿಜೆಪಿಯ ಈ ಆಟವನ್ನು ವಿಫಲಗೊಳಿಸುವುದು ಎಲ್ಲಾ ಧರ್ಮನಿರಪೇಕ್ಷ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳ ಆದ್ಯ ಕರ್ತವ್ಯ. ಆಧುನಿಕ ಭಾರತೀಯ ಪ್ರಭುತ್ವ ಮತ್ತು ಸಮಾಜದ ಧರ್ಮನಿರಪೇಕ್ಷ ಆಧಾರವನ್ನು ರಕ್ಷಿಸುವ ಈ ಹೋರಾಟದಲ್ಲಿ ಯಾವ ಹಿಂಜರಿಕೆಯೂ ಸಲ್ಲ. ಇದಕ್ಕೆ ಎಡ, ಪ್ರಜಾಸತ್ತಾತ್ಮಕ ಹಾಗೂ ಧರ್ಮನಿರಪೇಕ್ಷ-ಶಕ್ತಿಗಳ ಐಕ್ಯತೆಯನ್ನು ಉಳಿಸಿಕೊಂಡು, ಬೆಳೆಸಿಕೊಳ್ಳುವುದು ಅತ್ಯಗತ್ಯ ಎಂದು ಸುರ್ಜಿತ್ ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದಿರುವ ಒಂದು ಲೇಖನದಲ್ಲಿ ಹೇಳಿದ್ದಾರೆ.

ಒಟ್ಟಾರೆಯಾಗಿ ನೋಡುವಾಗ ಈ ಬಾರಿಯ ಫಲಿತಾಂಶಗಳಿಂದ 1996 ರ ಚುನಾವಣೆಗಳ ವೇಳೆಗೆ ಮಾಡಿದ ಒಂದು ವಿಶ್ಲೇಷಣೆ ಸಾಬೀತುಪಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಯವರು ಈ ಬಗ್ಗೆ ಬರೆದಿರುವ ಇನ್ನೊಂದು ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ-

'ದೇಶ ಹಾಗೂ ಸಮಾಜ ನಿಜವಾಗಿಯೂ ಒಂದು ಆಳವಾದ ಮಂಥನದ ಪ್ರಕ್ರಿಯೆಯ ಮೂಲಕ ಹಾದು ಹೋಗುತ್ತಿವೆ. ಭಾರತದ ಸಾಮಾಜಿಕ ವೈವಿಧ್ಯತೆ, ಬಹುಮುಖತೆ ರಾಜಕೀಯ ವ್ಯವಸ್ಥೆಯಲ್ಲೂ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತಿದೆ. ಈಗ ಕಾಣುತ್ತಿರುವ ರಾಜಕೀಯ ಅಸ್ಥಿರತೆ ಇದರ ಅಭಿವ್ಯಕ್ತಿ. ತ್ರಿಶಂಕು ಸಂಸತ್ತುಗಳು, 'ಬಿರುಕು ಬಿಟ್ಟ' ತೀರ್ಪುಗಳು ನಕಾರಾತ್ಮಕವಾದ ಹಾಗೂ ಪ್ರತಿಗಾಮಿಯಾದ ಬೆಳವಣಿಗೆಯಾಗಲೇ ಬೇಕೆಂದೇನಿಲ್ಲ. ಇದು ಭಾರತೀಯ ಪ್ರಜಾಪ್ರಭುತ್ವ ಪ್ರೌಢಗೊಳ್ಳುತ್ತಿರುವ ಪ್ರಕ್ರಿಯೆಯ ಪ್ರತಿಫಲನ. ಆದರೆ ಈ ಪ್ರಕ್ರಿಯೆ ಒಂದೋ ಒಂದು ವಿಕೃತ ಪ್ರಜಾಪ್ರಭುತ್ವವಾಗಿ ಅವನತಿಗೊಳ್ಳಬಹುದು ಅಥವಾ ಒಂದು ಹೆಚ್ಚು ಚೈತನ್ಯಶೀಲ ಹಾಗೂ ಜನ ಭಾಗವಹಿಸುವಂತಹ ಪ್ರಜಾಪ್ರಭುತ್ವದತ್ತ ಸಾಗುವಂತೆಯೂ ಮಾಡಬಹುದು"

ಎಂದು ಅವರು ಹೇಳಿದ್ದಾರೆ.

ಆದ್ದರಿಂದ ಈಗ ಬೇಕಾಗಿರುವುದು ಭಾರತದಂತಹ ವಿಶಾಲ ದೇಶದ ಐಕ್ಯತೆ ಸಾಧಿಸಲು ಅದರ ವೈವಿಧ್ಯತೆಯಲ್ಲಿನ ಸಮಾನ ಅಂಶವನ್ನು ಬಲಗೊಳಿಸುವ ಮೂಲಕ ಮಾತ್ರ ಸಾಧ್ಯ ಎಂಬ ಒಂದು ರಾಜಕೀಯ ಕಣ್ನೋಟ. ಈ ಕಣ್ನೋಟ ಕೋಮುವಾದಿ ಶಕ್ತಿಗಳಿಗೆ ಸಾಧ್ಯವಿಲ್ಲ. ಇಲ್ಲೇ ಬಿಜೆಪಿ ಕೂಟದ ಮೂಲಭೂತ ಅಂತರ್ವೈರುಧ್ಯ ಎದ್ದು ಕಾಣುವುದು. ಭಾರತದ ಅಪಾರ ವೈವಿಧ್ಯತೆಯ ವಾಸ್ತವ ಪರಿಸ್ಥಿತಿ ಹಾಗೂ ಹಿಂದೂ ರಾಷ್ಟ್ರದ ಏಕರೂಪದ ಪರಿಕಲ್ಪನೆಯ ನಡುವಿನ ಈ ವೈರುಧ್ಯವನ್ನು ಪರಿಹರಿಸುವುದು ಬಿಜೆಪಿಗೆ ಅಸಾಧ್ಯ ಎಂದು ಯೆಚೂರಿ ಹೇಳುತ್ತಾರೆ. ಈ ವೈರುಧ್ಯವೇ ಈಗ ಬೇರೆ ಬೇರೆ ರೀತಿಗಳಲ್ಲಿ ಪ್ರಕಟಗೊಳ್ಳಲಾರಂಭಿಸಿದೆ. ಮುಂದೆ ಇನ್ನು ಎಷ್ಟು ರೀತಿಗಳಲ್ಲಿ ಪ್ರಕಟಗೊಳ್ಳುತ್ತದೋ, ಅದಕ್ಕೆ ಅದನ್ನು ಧರ್ಮನಿರಪೇಕ್ಷ, ಪ್ರಜಾಪ್ರಭುತ್ವವಾದೀ ಶಕ್ತಿಗಳು ಹೇಗೆ ಎದುರಿಸುತ್ತವೆಯೋ ಕಾದು ನೋಡೋಣ.

ಚುನಾವಣಾ ವಿಮರ್ಶೆ

ಮಿತ್ರ ಪಕ್ಷಗಳ ಬೆನ್ನೇರಿ ಬಂದರೂ ಬಿ.ಜೆ.ಪಿ.ಯ ಸಾಧನೆ ನಗಣ್ಯ

ಮಾರ್ಚ್ 6 ಹಾಗೂ 7ರಂದು ಸಭೆ ಸೇರಿ ಇತ್ತೀಚಿನ ಚುನಾವಣೆಗಳು ಹಾಗೂ ಚುನಾವಣಾ ನಂತರದ ಸನ್ನಿವೇಶದ ಬಗ್ಗೆ ಚರ್ಚಿಸಿದ ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಸಭೆಯು ನಂತರ ಹೊರಡಿಸಿದ ಪತ್ರಿಕಾ ಹೇಳಿಕೆಯನ್ನು ಇಲ್ಲಿ ಕೊಡಲಾಗಿದೆ.

ಹನ್ನೆರಡನೇ ಲೋಕಸಭೆಗೆ ನಡೆದ ಮಧ್ಯಾವಧಿ ಸಾರ್ವತ್ರಿಕ ಚುನಾವಣೆಗಳಲ್ಲಿ ಮತ್ತೊಮ್ಮೆ ತ್ರಿಶಂಕು ಸಂಸತ್ತು ಮೂಡಿ ಬಂದಿದೆ. ಬಿ.ಜೆ.ಪಿ. ತಾನು ಹೊಸದಾಗಿ ಗಳಿಸಿಕೊಂಡ ಮಿತ್ರರ ಬೆನ್ನ ಮೇಲೇರಿಕೊಂಡು ತನ್ನ ಸ್ಥಾನಗಳಲ್ಲಿ ಕೇವಲ 17 ಹೆಚ್ಚಳ ಸಾಧಿಸಿ 178 ಸ್ಥಾನಗಳನ್ನು ಗಳಿಸಲು ಸಾಧ್ಯವಾಗಿದೆಯಷ್ಟೆ. ತನ್ನ ಮಿತ್ರರೊಂದಿಗೆ ಅದಕ್ಕೆ 251 ಸ್ಥಾನಗಳು ದೊರೆತಿವೆ. ಇದು ನಿಚ್ಚಳ ಬಹುಮತಕ್ಕೆ ಬೇಕಾದುದಕ್ಕಿಂತ ಕಮ್ಮಿ.

ಬಿ.ಜೆ.ಪಿ. ಈ ಚುನಾವಣೆಗಳಲ್ಲಿ ಬಹುಮತ ಗಿಟ್ಟಿಸಲು ಮಾಡದ ಕೆಲಸಗಳಿಲ್ಲ. ಅತ್ಯಂತ ಸಮಯ ಸಾಧಕ ಮೈತ್ರಿಗಳನ್ನು ಏರ್ಪಡಿಸಿಕೊಂಡಿತ್ತು. ಎಲ್ಲಾ ರಾಜಕೀಯ ನೈತಿಕತೆಯನ್ನು, ನೈತಿಕತೆಯ ನಟನೆಯನ್ನೂ ಗಾಳಿಗೆ ತೂರಿ ಅಪರಾಧೀ ಪಟ್ಟಗಳಲ್ಲಿರುವವರಿಗೆ, ಭ್ರಷ್ಟಾಚಾರದ ಕೇಸುಗಳಲ್ಲಿ ಸಿ.ಬಿ.ಐ. ಚಾರ್ಜ್‌ಶೀಟ್ ಮಾಡಿದವರಿಗೆ ಟಿಕೇಟುಗಳನ್ನು ಕೊಟ್ಟಿತು, ಅತ್ಯಂತ ಅಬ್ಬರದ ಪ್ರಚಾರ ನಡೆಸಿತು, ಇದರಲ್ಲಿ ಕೆಲವೊಮ್ಮೆ ವಿಧೇಯ ಮಾಧ್ಯಮದ ನೆರವು ಅದಕ್ಕೆ ಸಿಕ್ಕಿತು. ಆದರೂ ಆರಂಭಿಕ ಅಂದಾಜುಗಳ ಪ್ರಕಾರ ಅದಕ್ಕೆ ಕೇವಲ ಮತದಾನದ ಕಾಲು ಭಾಗದಷ್ಟು ಬೆಂಬಲ ಮಾತ್ರವೇ ಪಡೆಯಲು ಸಾಧ್ಯವಾಯಿತು. ಅದರ ಕೂಟ ಸುಮಾರು 36% ಮತ ಪಡೆದಿದೆ ಎಂದು ಅಂದಾಜು ಮಾಡಲಾಗಿದೆ. ಇದು ಮುಖ್ಯವಾಗಿ ಅದರ ಮಿತ್ರ ಪಕ್ಷಗಳಿಂದಾಗಿ ದೊರೆತ ಮತ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಭಾರತೀಯ ಮತದಾರರಲ್ಲಿ ಸುಮಾರು ಮೂರನೇ ಎರಡರಷ್ಟು ಮಂದಿ ಈ ಕೋಮುವಾದಿ ಕೂಟದ ವಿರುದ್ಧ ಮತ ನೀಡಿದ್ದಾರೆ.

ಸಂಯುಕ್ತ ರಂಗದ ಹಿನ್ನಡೆ

ಈ ಚುನಾವಣೆಗಳಲ್ಲಿ ಸಂಯುಕ್ತ ರಂಗ ಹಿನ್ನಡೆ ಅನುಭವಿಸಿದೆ. ಇದರ ಗಂಭೀರ ವಿಮರ್ಶೆಯನ್ನು ಸಂಯುಕ್ತ ರಂಗ ಮಾಡಿಕೊಳ್ಳಬೇಕಾಗಿದೆ. ಜನ ಸಾಮಾನ್ಯರ ಅಗತ್ಯಗಳಿಗೆ ಸಾಕಷ್ಟು ಗಮನ ನೀಡದಿರುವುದು, ಕೆಲವು ರಾಜ್ಯಗಳಲ್ಲಿ ಅನೈಕ್ಯತೆಯ ಪ್ರದರ್ಶನ ಹಾಗೂ ಒಂದು ಪರಿಣಾಮಕಾರಿ ಪರ್ಯಾಯವನ್ನು ಮುಂದಿಡುವಲ್ಲಿನ ವಿಫಲತೆ ಇವು ಜನಗಳಲ್ಲಿ ತನ್ನ ಬಗೆಗಿದ್ದ ಸದ್ಭಾವನೆಯನ್ನು ಮತಗಳಾಗಿ ಪರಿವರ್ತಿಸುವಲ್ಲಿ ಸಂಯುಕ್ತ ರಂಗಕ್ಕೆ ಸಾಧ್ಯವಾಗದಿದ್ದುದರ ಕಾರಣಗಳಲ್ಲಿ ಕೆಲವು. ಆದರೆ ಎಡಪಕ್ಷಗಳು ಸುಮಾರಾಗಿ ತಮ್ಮ ನೆಲೆಯನ್ನು ಉಳಿಸಿಕೊಂಡಿವೆ.

ಕಾಂಗ್ರೆಸ್ ತನ್ನ ನೆಲೆಯನ್ನು ಪುನರುಜ್ಜೀವನಗೊಳಿಸಲು ಸರ್ವಪ್ರಯತ್ನ ನಡೆಸಿದರೂ ಅದು ಇದ್ದಲ್ಲೇ ಇದೆ. 1996 ರಲ್ಲಿ ಪಡೆದಷ್ಟೇ ಸ್ಥಾನಗಳನ್ನು ಗೆದ್ದಿದೆ. ಧರ್ಮನಿರಪೇಕ್ಷ ಸಂಯುಕ್ತ ರಂಗ ಸರಕಾರಕ್ಕೆ ನೀಡಿದ ಬೆಂಬಲವನ್ನು ಹಿಂತೆಗೆದುಕೊಂಡು ಮಧ್ಯಾವಧಿ ಚುನಾವಣೆಗಳನ್ನು ನಡೆಸುವಂತೆ ಮಾಡಿದ್ದು ಜನಕ್ಕೆ ಸರಿಕಂಡಿಲ್ಲ ಎಂಬುದು ಸ್ಪಷ್ಟ.

ಸಿಪಿಐ(ಎಂ) ವಿಜಯ

ಸಿಪಿಐ(ಎಂ) ನ ಕೇಂದ್ರ ಸಮಿತಿ ಸಿಪಿಐ(ಎಂ) ನೇತೃತ್ವದ ಎಡರಂಗದಲ್ಲಿ ಮತ್ತೊಮ್ಮೆ ವಿಶ್ವಾಸ ವ್ಯಕ್ತಪಡಿಸಿದ್ದಕ್ಕಾಗಿ ಮತ್ತು ಒಂದು ಸ್ಪಷ್ಟ ಮೂರನೇ ಎರಡು ಬಹುಮತ ನೀಡಿದ್ದಕ್ಕಾಗಿ ಹಾಗೂ ಲೋಕಸಭೆಯ ಇಬ್ಬರೂ ಅಭ್ಯರ್ಥಿಗಳನ್ನು ಆರಿಸಿದ್ದಕ್ಕಾಗಿ ತ್ರಿಪುರಾದ ಜನತೆಯನ್ನು ಅಭಿನಂದಿಸುತ್ತದೆ.

ಅದೇ ರೀತಿ ಸಿಪಿಐ(ಎಂ) ನೇತೃತ್ವದ ಎಡರಂಗದಲ್ಲಿ ಮತ್ತೆ ತಮ್ಮ ವಿಶ್ವಾಸವನ್ನು ದೃಢಪಡಿಸಿದ್ದಕ್ಕಾಗಿ ಪಶ್ಚಿಮ ಬಂಗಾಳ ಮತ್ತು ಕೇರಳದ ಜನತೆಯನ್ನೂ ಕೇಂದ್ರ ಸಮಿತಿ ಅಭಿನಂದಿಸುತ್ತದೆ. ಈ ಎರಡೂ ರಾಜ್ಯಗಳಲ್ಲಿ ಸಿಪಿಐ(ಎಂ) ಒಂದೊಂದು ಸ್ಥಾನಗಳನ್ನು ಹೆಚ್ಚಿಸಿಕೊಂಡಿದೆ. ಪಶ್ಚಿಮ ಬಂಗಾಳದಲ್ಲಿ 24 ಹಾಗೂ ಕೇರಳದಲ್ಲಿ 6 ಸ್ಥಾನಗಳನ್ನು ಗೆದ್ದಿದೆ.

ಆದ್ದರಿಂದ ಹಲವೆಡೆ ಅಧಿಕಾರಸ್ಥ ಪಕ್ಷಕ್ಕಿರುವ ಪ್ರತಿಕೂಲತೆಯಿಂದಾಗಿ ಸೋಲನುಭವಿಸಬೇಕಾಗಿ ಬಂತು ಎಂಬ ಮಾತು ಒಂದು ರಾಜಕೀಯ ವಿವರಣೆಯಾಗದು ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಜನ-ಪರ ಧೋರಣೆಗಳನ್ನು ಅನುಸರಿಸಿ ಜನಗಳ ಹಕ್ಕುಗಳನ್ನು ಹಾಗೂ ಹಿತಾಸಕ್ತಿಗಳನ್ನು ರಕ್ಷಿಸಿದ ರಾಜ್ಯಗಳಲ್ಲಿ ಜನ ಆಳುವ ಪಕ್ಷಗಳಲ್ಲಿ ಮತ್ತೊಮ್ಮೆ ವಿಶ್ವಾಸ ವ್ಯಕ್ತ ಮಾಡಿದ್ದಾರೆ.

ಎಡಪಕ್ಷಗಳ ಸಾಧನೆಗೆ ವ್ಯತಿರಿಕ್ತವಾದದ್ದು ರಾಜಸ್ಥಾನಗಳಲ್ಲಿ ಬಿಜೆಪಿ ಹಾಗೂ ಮಿತ್ರರ ಸರ್ಕಾರಗಳು ಪಡೆದ ಫಲಿತಾಂಶ. ಉದಾರೀಕರಣದ ನೀತಿಗಳನ್ನು ಅನುಸರಿಸಿ, ಜನಗಳಿಗೆ ಹೆಚ್ಚಿನ ಹೊರೆಯನ್ನು ಹೊರಿಸಿದ್ದರಿಂದಾಗಿ ಬಿಜೆಪಿ ಜನಗಳ ಅಸಂತೃಪ್ತಿಯ ಕ್ರೋಧವನ್ನು ಎದುರಿಸಬೇಕಾಗಿ ಬಂದಿದೆ. ವಾಸ್ತವವಾಗಿ ಎಲ್ಲೆಲ್ಲಿ ಇಂತಹ ನೀತಿಗಳನ್ನು ಅನುಸರಿಸಲಾಗಿದೆಯೋ ಅಲ್ಲೆಲ್ಲಾ ಇಂತಹ ನಕಾರಾತ್ಮಕ ಫಲಿತಾಂಶ ಕಂಡಿದೆ.

ಚುನಾವಣೆಯ ನಂತರದ ಸನ್ನಿವೇಶ

ಯಾವುದೇ ಚುನಾವಣಾ-ಪೂರ್ವ ಮೈತ್ರಿಕೂಟ ಸರಕಾರ ರಚಿಸುವ ಜನಾದೇಶ ಪಡೆದಿಲ್ಲ ಎಂಬುದು ಈ ಫಲಿತಾಂಶಗಳಿಂದ ಸ್ಪಷ್ಟ. ಒಂದು ಹೊಸ ಸರಕಾರವನ್ನು ರಚಿಸಲು ಹೊಸ ಚುನಾವಣಾ ನಂತರದ ಮೈತ್ರಿಗಳನ್ನು, ಕೂಟಗಳನ್ನು ರೂಪಿಸುವ ಪ್ರಯತ್ನಗಳು ನಡೆದಿವೆ.

ಒಂದು ಬಹುಮತವನ್ನು ಸ್ಪಷ್ಟಪಡಿಸುವಲ್ಲಿ ಬಿಜೆಪಿಯದು ಎತ್ತಿದ ಕೈಯಾದ್ದರಿಂದ ಅದು ಕೈಲಾದ ಎಲ್ಲಾ ಪ್ರಯತ್ನಗಳನ್ನೂ ನಡೆಸಿದೆ. ನೇರ ರಾಜಿ, ಹಣಕಾಸಿನ ಆಮಿಷ ಮತ್ತು ಅಧಿಕಾರದ ಆಕರ್ಷಣೆ ಇತ್ಯಾದಿ ಎಲ್ಲ ವಿಧಾನಗಳನ್ನೂ ಪ್ರಯೋಗಿಸಿ ಬಹುಮತ ಕಲೆಹಾಕಲು ಅದು ಪ್ರಯತ್ನಿಸುತ್ತದೆ.

ಬಿಜೆಪಿಯನ್ನು ಸರ್ಕಾರ ಮಾಡಲು ಕೇಳಿದರೆ ಸಿಪಿಐ(ಎಂ) ಎಡ ಮತ್ತು ಧರ್ಮನಿರಪೇಕ್ಷ ಶಕ್ತಿಗಳೊಂದಿಗೆ ಸೇರಿಕೊಂಡು ಲೋಕಸಭೆಯಲ್ಲಿ ವಿಶ್ವಾಸ ಮತದ ವೇಳೆಗೆ ಈ ಸರಕಾರವನ್ನು ವಿರೋಧಿಸಬೇಕು.

ಈ ಸನ್ನಿವೇಶದಲ್ಲಿ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಧರ್ಮನಿರಪೇಕ್ಷ ಶಕ್ತಿಗಳ ಐಕ್ಯತೆಯನ್ನು ಉಳಿಸಿ, ಬೆಳೆಸುವ ಅಗತ್ಯವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಿಹೇಳಿದೆ. ಇದು ಕೋಮುವಾದಿ ಶಕ್ತಿಗಳು ಒಡ್ಡಿರುವ ಸವಾಲನ್ನು ಸ್ವೀಕರಿಸಲು ಅತ್ಯಗತ್ಯ.

1911 ರಲ್ಲಿ ಕೂಪನ್‌ಹೆಗನ್‌ನಲ್ಲಿ ಸೇರಿದ್ದ ಎರಡನೇ ಅಂತರ್ರಾಷ್ಟ್ರೀಯ ಮಹಿಳಾ ಸಮ್ಮೇಳನವು ಪ್ರತಿವರ್ಷ ಮಾರ್ಚ್ 8 ನ್ನು ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲು ಕರೆ ಕೊಟ್ಟಿತು. ಹಿಂದಿನ ವರ್ಷವಷ್ಟೇ ಮಹಿಳಾ ಗಿರಣಿ ಕಾರ್ಮಿಕರು 8 ಗಂಟೆಗಳ ಕೆಲಸದ ಹಕ್ಕಿಗಾಗಿ ಒತ್ತಾಯಿಸಿ ಕೆಲಸವನ್ನು ಸ್ಥಗಿತಗೊಳಿಸಿದ್ದರು.

ದುಡಿಯುವ ಹಕ್ಕಿನ, ಮಾತ್ರವಲ್ಲ ಮನಬಂದಂತೆ ದುಡಿಸಿಕೊಳ್ಳುವ ಕ್ರೂರ ವ್ಯವಸ್ಥೆಯ ವಿರುದ್ಧದ ಹೋರಾಟದ ಹಿನ್ನೆಲೆಯಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುವಾಗ ಈ ಎರಡೂ ಅಂಶಗಳ ಆಶೋತ್ತರಗಳು ಸಾರ್ಥಕಗೊಂಡಿವೆಯೇ? ವಿಶ್ಲೇಷಿಸೋಣ.

ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ

ಮಹಿಳಾ ಚಳುವಳಿಯ ಮುಂದಿರುವ ಸವಾಲುಗಳು

ಎನ್. ಪ್ರಭಾ

ಉದ್ಯೋಗಗಳನ್ನು ಕಸಿದುಕೊಳ್ಳುತ್ತಿರುವ ಹೊಸ ಆರ್ಥಿಕ ನೀತಿ:

ಪ್ರತಿವರ್ಷ ಮಾರ್ಚ್ 8 ನ್ನು ಅಂತರ್ರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಆಚರಿಸುತ್ತಿರುವುದೇನೋ ಸತ್ಯ. ಆದರೆ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಈ ಕುರಿತು ಸುಧಾರಣೆಯನ್ನು ಕಾಣುವ ಬದಲಿಗೆ ಶಿಕ್ಷಣ ಮತ್ತು ಉದ್ಯೋಗವಕಾಶಗಳನ್ನು ವಂಚಿಸುವ ಆರ್ಥಿಕ ನೀತಿಗಳನ್ನು ಜಾರಿ ಮಾಡುತ್ತಿರುವುದೂ ಅಷ್ಟೇ ಸತ್ಯ.

ವಿಶ್ವಬ್ಯಾಂಕ್ ಐಎಂಎಫ್ ನಿರ್ದೇಶಿತ ಹೊಸ ಆರ್ಥಿಕ ನೀತಿಗಳನ್ನು ಸಾರಾಸಗಟಾಗಿ ಜಾರಿ ಮಾಡಿದ್ದರ ಫಲವಾಗಿ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಕ್ಕೆ ಒಳಪಡಿಸುವ ಜೊತೆಗೆ ಉದಾರೀಕರಣದ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳನ್ನು ಕೆಂಪುಹಾಸು ಹಾಕಿ ಸ್ವಾಗತಿಸುವ ಮೂಲಕ ಲಕ್ಷಾಂತರ ಉದ್ಯೋಗಿಗಳು ಕೆಲಸ ಕಳೆದುಕೊಂಡು ಬೀದಿ ಪಾಲಾಗಿರುವುದು ಜಗಜ್ಜಾಹೀರು.

ಲಾಭಬುರುಕ ಖಾಸಗಿ ಕಂಪನಿಗಳು ಸಹಜವಾಗಿಯೇ 'ಮಾನವಶಕ್ತಿ' ಯನ್ನು ಕಡೆಗಣಿಸಿ ಯಂತ್ರ ಶಕ್ತಿಯನ್ನು ಮುಂದೆ ಮಾಡಿ ಹತ್ತಾರು, ನೂರಾರು ಜನ ನೌಕರರ ಬದಲಿಗೆ ಒಂದೋ ಎರಡೋ ಯಂತ್ರಗಳನ್ನು ಬಳಸಿ ಸೂಪರ್ ಲಾಭ ಪಡೆಯುವ ನಿಟ್ಟಿನಲ್ಲಿ ಮೊದಲ ಬಲಿ ಮಹಿಳೆ.

ಕಾರ್ಖಾನೆಗಳಿಂದ ಇತರೆ ಉದ್ಯೋಗಗಳಿಂದ ನೌಕರರನ್ನು ಹೊರಗೆ ಹಾಕುವಾಗ ಮೊದಲ ಕಣ್ಣು ಮಹಿಳೆಯರಮೇಲೆ.

ನಮ್ಮ ದೇಶದ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಉದ್ಯೋಗ ಕಳೆದುಕೊಳ್ಳುವುದು ದೊಡ್ಡ ಪ್ರಶ್ನೆಯಾಗುವುದೇ ಇಲ್ಲ. ಮನೆಯಲ್ಲಿದ್ದು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸಿದರೆ ಸಾಕೆಂದು ಇಂದಿಗೂ ಪ್ರಚಲಿತವಿರುವ ಅಭಿಪ್ರಾಯ. ಇದೇ ಸಂದರ್ಭದಲ್ಲಿ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಲಕ್ಷಾಂತರ ಮಹಿಳೆಯರು ದುಡಿಮೆ ಮಾಡದೇ ಹೋದರೆ ಆ ಕುಟುಂಬಗಳು ಹಸಿವಿನಿಂದ ಸಾಯಬೇಕಾಗುತ್ತದೆ ಎನ್ನುವ ಅಂಶವನ್ನು ಮರೆಯುವಂತಿಲ್ಲ.

'ಉದ್ಯೋಗದ ಹಕ್ಕಿನ ಗ್ಯಾರಂಟಿಯೇ ಇಲ್ಲದಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಉದ್ಯೋಗದ ಹಕ್ಕಿಗಾಗಿ ಪುರುಷರೂ ಮಹಿಳೆಯರೂ ಒಟ್ಟಾಗಿ ಹೋರಾಟ ನಡೆಸಬೇಕೆಂಬ ಅಂಶವನ್ನು ಮನಗಾಣಬೇಕಾದ ಸನ್ನಿವೇಶದಲ್ಲಿಯೇ ಮಹಿಳೆ ಅತ್ಯಂತ ಕಡೆಗಣಿಸಲ್ಪಟ್ಟವಳು ಎನ್ನುವುದನ್ನು ಮರೆಯುವಂತಿಲ್ಲ.

ಶಿಕ್ಷಣದಿಂದ ವಂಚನೆ

ಹೊಸ ಆರ್ಥಿಕ ನೀತಿಯ ಭಾಗವಾಗಿಯೇ ಜಾರಿಯಾದ ಹೊಸ ಶಿಕ್ಷಣ ನೀತಿ 'ಉಳ್ಳವರಿಗೆ ಶಿಕ್ಷಣ' ವನ್ನು ಸಾರಿರುವುದರಿಂದಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಮೇಲೆ ತೀವ್ರ ಹೊಡೆತ ಬಿದ್ದಿದೆ. ಶಿಕ್ಷಣ ಸಂಸ್ಥೆಗಳ ಖಾಸಗೀಕರಣಕ್ಕೆ ಮಹತ್ವ ನೀಡುತ್ತಿರುವುದರಿಂದ ಖಾಸಗಿ ಸಂಸ್ಥೆಗಳು ನಿಗದಿ ಪಡಿಸುವ ಶುಲ್ಕವನ್ನು ಪಾವತಿ ಮಾಡಿ ಶಿಕ್ಷಣ ಪಡೆಯಲು ಅಶಕ್ತವಾಗಿರುವ ಕುಟುಂಬಗಳು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಯೋಚನೆಯನ್ನು ಮಾಡುವುದೇ ಕಷ್ಟ. ಹೀಗಿರುವಾಗ ವೈದ್ಯಕೀಯ, ತಾಂತ್ರಿಕ, ಕಾನೂನು ಇನ್ನೂ ಮುಂತಾದ ಉನ್ನತ ಶಿಕ್ಷಣದ ಬಗ್ಗೆ ಹೆಣ್ಣು ಮಕ್ಕಳು ಯೋಚಿಸುವುದೂ ಸಾಧ್ಯವಿಲ್ಲ. ಉದ್ಯೋಗ ಪೂರಕ ಶಿಕ್ಷಣವಂತೂ ನಿರೀಕ್ಷಿಸುವಂತೆಯೂ ಇಲ್ಲ.

ಕೌಟುಂಬಿಕ ಮೌಲ್ಯಗಳ ಪ್ರತಿಪಾದನೆ

ಶಿಕ್ಷಣದಿಂದಲೂ, ಉದ್ಯೋಗದಿಂದಲೂ ಒಟ್ಟಾರೆ ಸರಿಸಮಾನ ಬದುಕಿನ ಅವಕಾಶಗಳಿಂದ ಮಹಿಳೆಯರನ್ನು ಮತ್ತಷ್ಟು ವಂಚಿಸುತ್ತಿರುವ ಆರ್ಥಿಕ ನೀತಿಗಳು ಒಂದೆಡೆಯಾದರೆ 'ಕುಟುಂಬವೇ ಉತ್ಕೃಷ್ಟ. ಮಹಿಳೆಯರು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಲೇ ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು' ಎನ್ನುವಂತಹ ಕೌಟುಂಬಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತಾ ಮಹಿಳೆಯರನ್ನು ಸಾಮಾಜಿಕ ಮುಖ್ಯವಾಹಿನಿಯಿಂದ ದೂರವಿಡುವ ಮೂಲಭೂತವಾದಿಗಳ ವಾದ ಮತ್ತು ಪ್ರಯತ್ನ ಮತ್ತೊಂದೆಡೆ.

ಅಪಾಯಕಾರಿ ಮೂಲಭೂತವಾದ

ಮೂಲಭೂತವಾದ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳನ್ನು ಸುಧಾರಿಸುವುದಿಲ್ಲ. ಬದಲಿಗೆ ಮತ್ತಷ್ಟು ಅಪಾಯಕಾರಿ ಸನ್ನಿವೇಶಕ್ಕೆ ತಳ್ಳುತ್ತದೆ ಎನ್ನುವ ಅಂಶಗಳನ್ನು ಉದಾಹರಣೆಗಳ ಮೂಲಕ ಅನುಭವಗಳ ಮೂಲಕ ಗುರುತಿಸಿಕೊಳ್ಳಬಹುದಾಗಿದೆ.

ಅಫ್ಘಾನಿಸ್ತಾನದ ತಾಲಿಬಾನ್ ಮೂಲಭೂತವಾದಿಗಳು ಅಧಿಕಾರ ಹಿಡಿದ ಕೂಡಲೇ ಮಾಡಿದ ಮೊದಲ ಕೆಲಸ ಅಲ್ಲಿನ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನಿಷೇಧಿಸಿದ್ದು ಮಾತ್ರವಲ್ಲ, ಉದ್ಯೋಗಸ್ಥ ಮಹಿಳೆಯರನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಅಟ್ಟಿ ಕಡ್ಡಾಯ ಘೋಷಾವನ್ನು ಘೋಷಿಸಿದ್ದು. ಇಂದಿಗೂ ಕೂಡ ವಿಶ್ವದ ಪ್ರಗತಿಪರ ಜನಸಮುದಾಯ ಈ ಕ್ರೂರ ಮಹಿಳಾ ವಿರೋಧಿ ನೀತಿಗಳನ್ನು ಖಂಡಿಸುತ್ತಿದ್ದಾಗ್ಯೂ ಅಲ್ಲಿನ ಮೂಲಭೂತವಾದಿಗಳು ಈ ಕುರಿತು ತಲೆಕೆಡಿಸಿಕೊಂಡಿಲ್ಲ.

ಆ ದೇಶದ ಮೂಲಭೂತವಾದಿಗಳು ಅಧಿಕಾರ ಸಿಕ್ಕ ಕೂಡಲೇ ಮಾಡಿದ ಕೆಲಸವನ್ನು ನಮ್ಮ ದೇಶದಲ್ಲೇನಾದರೂ ಮೂಲಭೂತವಾದಿಗಳು ಅಧಿಕಾರ ಹಿಡಿದರೆ ಸ್ವಲ್ಪ ನಿಧಾನವಾಗಿ ಮಾಡಬಹುದಷ್ಟೇ. ಹೆಚ್ಚಿನ ವ್ಯತ್ಯಾಸವೇನೂ ಇರುವುದಿಲ್ಲ.

'ನ ಸ್ತ್ರೀ ಸ್ವಾತಂತ್ರ್ಯ ಅರ್ಹತಿ' ಯನ್ನು ಭೋದಿಸಿದ ಮನುವಿನ ಪಾಳೇಗಾರಿ ಮೌಲ್ಯಗಳನ್ನು ಪ್ರತಿನಿಧಿಸಿ ರೂಪಕನ್ವರ್‌ಳನ್ನು ಸತಿಯಾಗಿಸಿದ ಮೂಲಭೂತವಾದಿಗಳು ಆಕೆ ಸಾವನ್ನಪ್ಪಿದ ಜಾಗದಲ್ಲಿ ದೇವಾಲಯವನ್ನು ನಿರ್ಮಿಸಿ ಪೂಜೆ, ಪ್ರಾರ್ಥನೆ ಸಲ್ಲಿಸಿ ವೈಭವ ಮೆರೆದ ಸನ್ನಿವೇಶಗಳು ನಮ್ಮ ಮನಸ್ಸುಗಳಲ್ಲಿ ಈಗಲೂ ಅಚ್ಚಳಿಯದೇ ಉಳಿದಿವೆ.

ಸತಿಯನ್ನು ಪುಷ್ಟೀಕರಿಸಿ ಪುರಿಯ ಶಂಕರಾಚಾರ್ಯರು ಹೇಳಿಕೆ ಕೊಟ್ಟಾಗ ಅವರನ್ನು ಹೊಗಳಿ ಸನ್ಮಾನ ಮಾಡಿದ್ದೂ ಕೂಡ ನೆನಪಿದೆ.

ಸಾಮಾಜಿಕವಾಗಿ ಹಿಂದುಳಿದಿರುವ ಅದರಲ್ಲೂ ಮಹಿಳೆಯರು ಶೈಕ್ಷಣಿಕವಾಗಿ ಔದ್ಯೋಗಿಕವಾಗಿ ಶೋಚನಿಯ ಸ್ಥಿತಿಯಲ್ಲಿರುವ ಹಿಂದಿ ಪ್ರದೇಶಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಅತ್ಯಾಚಾರ ಮುಂತಾದವುಗಳು ಹೆಚ್ಚಿರುವುದನ್ನು ಗಮನಿಸಬಹುದಾಗಿದೆ. ಒಂದಕ್ಕೊಂದು ಪೂರಕವಾಗಿ ಮೂಲಭೂತವಾದಿಗಳ ನೆಲೆಯೂ ಈ ಪ್ರದೇಶಗಳಲ್ಲಿಯೇ ಇರುವುದು ಅಚ್ಚರಿಯೇನಲ್ಲ. ಮಹಿಳೆಯರನ್ನು 'ಯಥಾಸ್ಥಿತಿ' ಯಲ್ಲಿಯೇ ಕಾಪಾಡಿಕೊಂಡು ಹೋಗುವ ಮೂಲಭೂತವಾದಿಗಳ ಪ್ರಯತ್ನಗಳೂ ಕೂಡ ಅಚ್ಚರಿಯಲ್ಲ.

ಎರಡು ವರ್ಷದ ಹೆಣ್ಣುಮಗುವಿನ ಮದುವೆಯನ್ನು ನಿಲ್ಲಿಸಿದ ರಾಜಸ್ಥಾನದ ಬಾಂವರೀ ದೇವಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ ಆರೋಪಿಗಳನ್ನು ಮೆರವಣಿಗೆ ಮಾಡಿ ಮೇಲ್ಜಾತಿಯ ಜನರ ಪರವಾಗಿ ನಿಂತು ಬಾಂವರೀ ದೇವಿಯನ್ನೇ ಬಹಿಷ್ಕರಿಸಿದ ಮೂಲಭೂತವಾದಿಗಳಿಂದ ಮಹಿಳಾ ಸುಧಾರಣೆಯ ನಿರೀಕ್ಷೆ 'ಮಾರ್ಜಾಲ ನ್ಯಾಯ'ದಂತೆಯೇ ಸರಿ.

ಮಹಿಳೆಯರನ್ನು ಶಿಕ್ಷಣ, ಉದ್ಯೋಗಗಳಿಂದ ಹೊರಹಾಕುತ್ತಿರುವ ಸನ್ನಿವೇಶದಲ್ಲಿ ನಾಲ್ಕು ಗೋಡೆಗಳ ನಡುವಿನ ಕುಟುಂಬವೇ ಆಕೆಯ ಸರ್ವಸ್ವ, ಇದೇ 'ನಾರೀ ಸಂಸ್ಕೃತಿ' ಎನ್ನುವ ಪರ್ಯಾಯವನ್ನು ಮಂಡಿಸುವ ಮೂಲಭೂತವಾದಿಗಳು ಇದೇ ಹಿನ್ನೆಲೆಯಲ್ಲಿಯೇ ಸಂಸ್ಕೃತಿಯ ಒಂದಂಶವನ್ನಷ್ಟೇ ಒತ್ತಿಹೇಳಿ 1996ರ ನವೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆಯನ್ನು ವಿರೋಧಿಸಿ ಬಹುಮುಖ್ಯವಾದ ಮಹಿಳಾ ವಿರೋಧಿ ಅಂಶಗಳನ್ನು ನಗಣ್ಯಗೊಳಿಸಿದ್ದನ್ನು ಮರೆಯುವಂತಿಲ್ಲ.

ಮಹಿಳೆಯರನ್ನು 'ವ್ಯಕ್ತಿಯಾಗಿ' ನೋಡುವ ಬದಲಿಗೆ ಆಕೆಯನ್ನು ಕೇವಲ ಭೋಗದ ವಸ್ತುವನ್ನಾಗಿ ಗುರುತಿಸಿ ಆಕೆಯ ಬಾಹ್ಯ ಸೌಂದರ್ಯಕ್ಕಷ್ಟೇ ಆದ್ಯತೆಯನ್ನು ನೀಡುತ್ತಾ ಬೌದ್ಧಿಕ ಬೆಳವಣಿಗೆಯನ್ನು ನಿರ್ಲಕ್ಷ್ಯ ಮಾಡುವಲ್ಲಿಯೇನು ಕೋಮುವಾದಿಗಳು ಹಿಂದೆ ಬಿದ್ದಿಲ್ಲ.

ಪೂರಕವಾಗಿ ಮಾಧ್ಯಮಗಳು

ಈ ನೀತಿಗಳಿಗೆ ಪೂರಕವಾಗಿಯೇ ಮಾಧ್ಯಮಗಳೂ ಕೆಲಸ ಮಾಡುತ್ತಿವೆ. ಸಿನಿಮಾಗಳಲ್ಲಿ, ಜಾಹೀರಾತುಗಳಲ್ಲಿ ಯುವತಿಯರನ್ನು ಅರೆನಗ್ನಗೊಳಿಸಿ ವಿಕೃತವಾದ ಕೆಟ್ಟ ಸಂದೇಶಗಳನ್ನು ಸಮಾಜಕ್ಕೆ ಕೊಡಲಾಗುತ್ತಿದೆ. ಮಹಿಳೆಯರ ಬಾಹ್ಯ ಸೌಂದರ್ಯವನ್ನು ವೈಭವೀಕರಿಸಲಾಗುತ್ತಿದೆ. ಇದರಿಂದ ಪ್ರೇರಿತಗೊಂಡು ಮಹಿಳೆಯರನ್ನು ಚುಡಾಯಿಸುವುದು, ಅಪಹರಣ ಮಾಡುವುದು, ಅತ್ಯಾಚಾರಗೈಯುವುದು ಮುಂತಾದ ಅಪರಾಧಗಳನ್ನು ನಿರ್ಭೀತವಾಗಿ ಎಸಗಲಾಗುತ್ತಿದೆ.

ಒಂದು ಕಡೆ ಆರ್ಥಿಕ ನೀತಿಗಳಿಂದಾಗಿ ಮಹಿಳೆಯರನ್ನು ಕಾಡುತ್ತಿರುವ ತೀವ್ರ ಆರ್ಥಿಕ ಸಾಮಾಜಿಕ ಸಂಕಷ್ಟಗಳು ಮತ್ತೊಂದೆಡೆ ಇದೇ ಸಮಸ್ಯೆಗಳನ್ನು ಮತ್ತಷ್ಟು ಆಳಕ್ಕೆ ಕೊಂಡೊಯ್ಯುವ ಕೋಮುವಾದಿ ಮೂಲಭೂತವಾದಿಗಳು. ಈ ಹಳ್ಳ ಮತ್ತು ತೋಳಗಳಿಂದ ತಪ್ಪಿಸಿಕೊಳ್ಳಲು ಉಳಿದಿರುವ ಒಂದೇ ದಾರಿ ಸಮಾನತೆಗಾಗಿ ಹೋರಾಟ. ಸಾಮಾಜಿಕ ಅಸಮಾನತೆ ಮತ್ತು ಮೂಲಭೂತವಾದದ ವಿರುದ್ಧದ ಹೋರಾಟವೇ ಮಹಿಳಾ ಸಮಾನತೆಯ ಹೋರಾಟ. ಮಹಿಳಾ ಸಮಾನತೆಯನ್ನು ಪ್ರತ್ಯೇಕವಾಗಿ ಸಾಧಿಸಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ '98 ರ ಅಂತರ್ರಾಷ್ಟ್ರೀಯ ಮಹಿಳಾ ದಿನಕ್ಕೆ ಹೋರಾಟದ ಸ್ಫೂರ್ತಿಯನ್ನು ತುಂಬಬೇಕಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಚಳುವಳಿ ಸಮಾನತೆಗಾಗಿ ಹೋರಾಟವನ್ನು ಸವಾಲಾಗಿ ಸ್ವೀಕರಿಸುವ ಪ್ರತಿಜ್ಞೆ ಮಾಡಿದ್ದೇ ಆದರೆ '98 ರ ಅಂತರ್ರಾಷ್ಟ್ರೀಯ ಮಹಿಳಾ ದಿನಕ್ಕೆ ಅರ್ಥ ಬಂದೀತು.

ಉತ್ತರ ಪ್ರದೇಶದಲ್ಲಿ ಇನ್ನೊಂದು ಮಾನಗೇಡಿ ಸಂಪುಟ ವಿಸ್ತರಣೆ

ದೇಶದೊಳಗೆ

ಉತ್ತರ ಪ್ರದೇಶದಲ್ಲಿ ಪಕ್ಷಾಂತರಿಗಳಿಂದ ಕೂಡಿರುವ ಲಜ್ಜೆಗೇಡಿ ಸರಕಾರ ನಡೆಸುತ್ತಿರುವ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಅಂಟಿಕೊಳ್ಳುವ ತನ್ನ ತಂತ್ರವನ್ನು ಮುಂದುವರಿಸಿದೆ. ಪಕ್ಷಾಂತರ ಮಾಡಿ ತನ್ನ ಸರಕಾರ ಉಳಿಯಲು ನೆರವಾಗುವ ಇತರ ಪಕ್ಷಗಳ ಶಾಸಕರಿಗೆ ಮಂತ್ರಿ ಸ್ಥಾನ ಕೊಡುವುದೇ ಆ ಲಜ್ಜೆಗೇಡಿ ತಂತ್ರವಾಗಿದೆ.

ಫೆಬ್ರವರಿ 27ರ ಸಂಯುಕ್ತ ಬಲಾಬಲ ಪರೀಕ್ಷೆ ವೇಳೆ ಕಲ್ಯಾಣ್ ಸಿಂಗ್ ಪರವಾಗಿ ಮತ ಚಲಾಯಿಸಿದ ಬಹುಜನ ಸಮಾಜ ಪಕ್ಷದ(ಬಿ.ಎಸ್.ಪಿ.) ಇನ್ನೂ ಐದು ಶಾಸಕರಿಗೆ ಮಂತ್ರಿ ಸ್ಥಾನ ಕೊಡಲಾಗಿದೆ. ಮಾರ್ಚ್ 10ರಂದು ಈ ಐವರನ್ನು ಸೇರಿಸಿಕೊಂಡು ಸಂಪುಟವನ್ನು ವಿಸ್ತರಿಸಲಾಯಿತು. ಮೊದಲೇ ಗಜಗಾತ್ರದ ಕಲ್ಯಾಣ್ ಸಿಂಗ್ ಸಂಪುಟ ಈಗ ಇನ್ನಷ್ಟು ದೊಡ್ಡದಾಗಿದೆ. ಈಗ ಈ ಮಂತ್ರಿಮಂಡಲದ ಸದಸ್ಯರ ಸಂಖ್ಯೆ ಎಷ್ಟು ಗೊತ್ತೇ! 95! ಹೌದು, ಶತಕ ಬಾರಿಸಲು ಕೇವಲ ಐದು ಬಾಕಿ!

ಕಳೆದ ವರ್ಷ ಅಕ್ಟೋಬರ್‌ನಲ್ಲಿ ತಮ್ಮ ತಮ್ಮ ಪಕ್ಷ ಬಿಟ್ಟು ಬಂದು ಬಿ.ಜೆ.ಪಿ. ಸರಕಾರವನ್ನು ಬೆಂಬಲಿಸಿದ ಬಿ.ಎಸ್.ಪಿ.ಯ ಎಲ್ಲಾ 12 ಶಾಸಕರು ಮತ್ತು ಕಾಂಗ್ರೆಸ್‌ನ ಎಲ್ಲಾ 22 ಶಾಸಕರಿಗೆ ಮಂತ್ರಿ ಸ್ಥಾನ ನೀಡಿ 'ಸನ್ಮಾನಿಸಲಾಗಿತ್ತು'! ಜನರಿಂದ ಆಳುವುದಕ್ಕೆ ಸ್ಪಷ್ಟ ಆದೇಶ ಪಡೆಯುವಲ್ಲಿ ವಿಫಲವಾಗುತ್ತಿರುವ ಬಿ.ಜೆ.ಪಿ. ಆಡಳಿತಕ್ಕೆ ಬರಲಿಕ್ಕೆ ಇತರರನ್ನು ಸೆಳೆಯಲು ಮಂತ್ರಿ ಸ್ಥಾನದ ಆಮಿಷ ತೋರುವ ಹೇಯ ತಂತ್ರಕ್ಕೆ ಶರಣಾಗುತ್ತಿದೆ.

ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಹೆಣಗಾಡುತ್ತಿರುವ ಈ ಪಕ್ಷ ಅದನ್ನೇ ಮಾಡಲು ಉತ್ತರ ಪ್ರದೇಶವನ್ನು ಮಾದರಿಯನ್ನಾಗಿ ಅನುಸರಿಸಲಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಮೇಘಾಲಯದಲ್ಲಿ ಪ್ರತಿಪಕ್ಷಗಳಿಗೆ ಜಯ

ಯುನೈಟೆಡ್ ಪಾರ್ಲಿಮೆಂಟರಿ ಫೋರಂನ ಬಿ.ಬಿ. ಲಿಂಗ್ಡೋ ಮೇಘಾಲಯದ ಹೊಸ ಮುಖ್ಯಮಂತ್ರಿಯಾಗಿ ಮಾರ್ಚ್ 10ರಂದು ಅಧಿಕಾರ ವಹಿಸಿಕೊಂಡರು.

ಸಭಾಪತಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿಯ ಸೋಲಿನಿಂದ ಮೇಘಾಲಯದ ಮುಖ್ಯಮಂತ್ರಿ ಸಾಲ್ಸೆಂಗ್ .ಸಿ. ಮರಕ್ ವಿಶ್ವಾಸ ಮತ ಕೋರಲು ನಿರಾಕರಿಸಿ ತಾವು ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಪ್ರತಿಪಕ್ಷದ ಕೂಟ ಅಧಿಕಾರಕ್ಕೆ ಬಂತು.

ವಾಸ್ತವವಾಗಿ, ವಿಧಾನಸಭೆ ಚುನಾವಣೆಯ ಫಲಿತಾಂಶದ ನಂತರ ಪ್ರತಿಪಕ್ಷಗಳ ಕೂಟವಾದ ಯು.ಡಿ.ಎಫ್.ಗೇ ಸರಕಾರ ರಚಿಸಲು ರಾಜ್ಯಪಾಲರು ಆಹ್ವಾನ ನೀಡಬೇಕಾಗಿತ್ತು. ಆದರೆ ಅವರು ಹಾಗೆ ಮಾಡದೆ ಕಾಂಗ್ರೆಸ್ ಪಕ್ಷವನ್ನು ಸರಕಾರ ರಚಿಸಲು ಆಹ್ವಾನಿಸಿ ವಿವಾದದ ಗೂಡಿಗೆ ಕೈ ಹಾಕಿದ್ದರು.

ಬಹುಮತ ಸಾಬೀತು ಪಡಿಸುವ ಸಾಮರ್ಥ್ಯ ತನಗೆ ಇದೆ ಎಂದು ಯು.ಡಿ.ಎಫ್. ಹೇಳಿದ್ದರೂ ಅದನ್ನು ಲೆಕ್ಕಿಸದೆ ರಾಜ್ಯಪಾಲರು ಸರಕಾರ ರಚಿಸಲು ಕಾಂಗ್ರೆಸ್‌ಗೆ ಅವಕಾಶ ಕಲ್ಪಿಸಿದ್ದರು. ಮಾ. 10ರಂದು ಬಹುಮತ ಸಾಬೀತು ಪಡಿಸುವಂತೆ ಸೂಚಿಸಿದ್ದರು.

ರಾಜ್ಯಪಾಲರ ಈ ಕ್ರಮವನ್ನು ಸಿ.ಪಿ.ಐ.(ಎಂ) ಸಹಿತ ಬಹುತೇಕ ಪಕ್ಷಗಳು ಕಟುವಾಗಿ ಟೀಕಿಸಿದ್ದವು. ಕೊನೆಗೂ ಪ್ರತಿಪಕ್ಷಗಳ ನಿಲುವೇ ಸರಿಯೆಂಬುದು ಸಾಬೀತಾಗಿ ಜಯ ಅವುಗಳಿಗೆ ಒಲಿಯಿತು.

ಬಹುಮತ ಸಾಬೀತು ಪಡಿಸಬೇಕಾದ ಮುಂಚೆಯೇ ಮುಖ್ಯಮಂತ್ರಿ ಮರಕ್ ರಾಜೀನಾಮೆ ನೀಡಬೇಕಾದ ಸನ್ನಿವೇಶ ಎದುರಾಯಿತು. ಅದೇ ದಿನ ಸಭಾಪತಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್‌ನ ಅಭ್ಯರ್ಥಿ ಇ.ಕೆ. ಮವ್ಲಾಂಗ್ ಕೇವಲ ಒಂದು ಮತದ ಅಂತರದಿಂದ ಸುಜಿತ್ ಸಂಗ್ಮಾ ಅವರನ್ನು ಸೋಲಿಸಿದ ನಂತರ ಮರಕ್ ರಾಜೀನಾಮೆಯ ತಮ್ಮ ನಿರ್ಧಾರವನ್ನು ವಿಧಾನಸಭೆಗೆ ತಿಳಿಸಿದರು.

ವಿಧಾನಸಭಾ ಕಲಾಪಗಳನ್ನು ಮುಂದಕ್ಕೆ ಹಾಕಿದ ತಕ್ಷಣ ರಾಜ್ಯಪಾಲ ಎಂ.ಎಂ. ಜೇಕಬ್ ಅವರಿಗೆ ಮಾರಕ್ ತಮ್ಮ ರಾಜೀನಾಮೆ ಸಲ್ಲಿಸಿದರು.

ಗೆಲುವಿನಲ್ಲೂ ಸೋಲಿನ ರುಚಿಯುಂಡ ಕಾವಿಪಡೆ

ಮಹಾರಾಷ್ಟ್ರದಲ್ಲಿ ಅಬ್ಬರಿಸುತ್ತಿದ್ದ ವ್ಯಾಘ್ರ (ಶಿವಸೇನೆ) ಮತ್ತು ಅರಳಿದ್ದ ಕಮಲವನ್ನು (ಬಿಜೆಪಿ) ಹಸ್ತ(ಕಾಂಗ್ರೆಸ್) ಹೇಗೆ ನಿಯಂತ್ರಣಕ್ಕೆ ತರುವುದು ಎನ್ನುವುದನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಮತೀಯ ಶಕ್ತಿಗಳಿಗೆ ಭಾರೀ ಹೊಡೆತ ನೀಡಿದ ಈ ಫಲಿತಾಂಶದ ಇನ್ನಷ್ಟು ವಿವರಗಳು ಈಗ ಲಭ್ಯ. ವಿಶೇಷವಾಗಿ ಬಿಜೆಪಿ-ಶಿವಸೇನೆ ಕೂಡಿ 1996 ರ ಚುನಾವಣೆಯಲ್ಲಿ ಹೊಂದಿದ್ದ 33 ಸ್ಥಾನಗಳಿಂದ 10 ಸ್ಥಾನಕ್ಕೆ ಇಳಿದಿದ್ದು ಮಾತ್ರವೇ ಅಲ್ಲ ಗೆದ್ದ 10 ಕ್ಷೇತ್ರಗಳಲ್ಲಿ ಕೇವಲ ಅದರ ವಿಜಯದ ಅಂತರ ಕೂಡ ಕಳೆದ ಸಾರಿಗಿಂತ ಗಣನೀಯವಾಗಿ ಇಳಿದಿರುವುದು ಇಲ್ಲಿ ಗಮನಾರ್ಹ ಅಂಶವಾಗಿದೆ.

11ನೇ ಲೋಕಸಭೆಯಲ್ಲಿ ಮಹಾರಾಷ್ಟ್ರದಿಂದ ಬಿಜೆಪಿ 18 ಹಾಗೂ ಶಿವಸೇನೆ 15 ಸ್ಥಾನಗಳನ್ನು ಹೊಂದಿದ್ದವು. ಈಗ ಆ ಸಂಖ್ಯೆ ಅನುಕ್ರಮವಾಗಿ ಕೇವಲ 4 ಮತ್ತು 6 ಕ್ಕೆ ಇಳಿದಿದೆ.

ಕಾವಿಪಡೆಯ ಹುರಿಯಾಳುಗಳು ಸೋತಲ್ಲಿ ಕೂಡ ಅದರ ಮತಗಳ ಸಂಖ್ಯೆ ಭಾರೀ ಪ್ರಮಾಣದಲ್ಲಿ ಇಳಿಮುಖವಾಗಿರುವುದು ಕಂಡು ಬಂದಿದೆ.

ಶಿವಸೇನೆ-ಬಿಜೆಪಿಯ ಕೋಟೆ ಮಾತ್ರವಲ್ಲ ಪವರ್ ಹೌಸ್ ಎಂದು ಕರೆಯಲಾಗುವ ಹಾಗೂ ರಾಜ್ಯದಲ್ಲೇ ಅತ್ಯಂತ ದೊಡ್ಡ ನೆಲೆಯಾದ ಮುಂಬೈಯಲ್ಲಿಯೇ ಕೂಟಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಬಿಜೆಪಿಯ ರಕ್ತಪಾತದ ರಥಯಾತ್ರೆಗಳ ಕೋಮುವಾದಿ ಪ್ರಮೋದ್ ಮಹಾಜನ್ ಇಲ್ಲಿ 47,450 ಮತಗಳ ಅಂತರದಿಂದ ಸೋತಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು 1.91 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದರು.

ಬಿಜೆಪಿಯ ಇನ್ನೊಬ್ಬ ನಾಯಕ ರಾಮ ನಾಯ್ಕ ಅವರ ಗೆಲುವಿನ ಅಂತರ ಇಳಿದಿದೆ. ಉತ್ತರ ಮುಂಬೈ ಕ್ಷೇತ್ರದಿಂದ ಸತತ ನಾಲ್ಕನೇ ಬಾರಿ ಅವರು ಆಯ್ಕೆಯಾಗಿದ್ದು, ಇದು ಐತಿಹಾಸಿಕ ವಿಜಯ ಎಂದು ವರ್ಣಿಸಿದ್ದಾರೆ. ಆಗೆ ಗೆಲುವಿನ ಮತಗಳ ಅಂತರ ಕಡಿಮೆಯಾಗಿರುವುದರ ಬಗ್ಗೆ ಹೇಳಲು ಬಿಜೆಪಿಗೆ ಏನೂ ಉಳಿದಿಲ್ಲ . 96 ರ ಚುನಾವಣೆಯಲ್ಲಿ ರಾಮನಾಯ್ಕ 2.56 ಲಕ್ಷದಷ್ಟು ಭಾರೀ ಬಹುಮತದ ಅಂತರದಿಂದ ಗೆದ್ದಿದ್ದರು. ಈ ಬಾರಿ ಅವರ ಗೆಲುವಿನ ಅಂತರ ಕೇವಲ 55 ಸಾವಿರ ಮತಗಳು ಅಷ್ಟೇ.

ಜಲಾನಾ ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡಿದ್ದೇನೋ ಹೌದು. ಆದರೆ ಗೆಲುವಿನ ಮತಗಳ ಅಂತರ 47.527 ರಿಂದ ಕೇವಲ 17,000ಕ್ಕೆ ಇಳಿದಿದೆ. ಉಪ ಮುಖ್ಯಮಂತ್ರಿ (ಬಿಜೆಪಿ) ಗೋಪಿನಾಥ ಮುಂಡೆಯವರ ಸ್ವಕ್ಷೇತ್ರವಾದ ಬೀಡನ್‌ನಲ್ಲಿ ಕೂಡ ಬಿಜೆಪಿಯ ಗೆಲುವಿನ ಅಂತರ 57.460 ಮತಗಳಿಂದ ಕೇವಲ 6000ಕ್ಕಿಳಿದಿದೆ.

ಪುಣೆಯಲ್ಲಿ ಮುಖಭಂಗ

ಪುಣೆಯಲ್ಲಿ ಮತದಾರರು ಬಿ.ಜೆ.ಪಿ.-ಶಿವಸೇನೆ ಕೂಟಕ್ಕೆ ಒಳ್ಳೆಯ ಪಾಠವನ್ನೇ ಕಲಿಸಿದ್ದಾರೆ. ಚುನಾವಣೆಗೆ ಸ್ವಲ್ಪವೇ ಮುನ್ನ ಕಾಂಗ್ರೆಸ್ ಬಿಟ್ಟು ಸ್ವಂತ ಪಕ್ಷವೊಂದನ್ನು ಕಟ್ಟಿಕೊಂಡಿದ್ದ ಸುರೇಶ ಕಲ್ಮಾಡಿ ಈ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಬಿ.ಜೆ.ಪಿ.-ಶಿವಸೇನೆ ಕಲ್ಮಾಡಿಗೆ ಬೆಂಬಲ ನೀಡಿದ್ದರು.

ಕಳೆದ ಚುನಾವಣೆಯಲ್ಲಿ ಕಲ್ಮಾಡಿ ಈ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದರು. 96ರ ಚುನಾವಣೆಯಲ್ಲಿ ಇಲ್ಲಿ ಕಲ್ಮಾಡಿ ಮತ್ತು ಬಿ.ಜೆ.ಪಿ. ಅಭ್ಯರ್ಥಿಗಳು ಗಳಿಸಿದ್ದ ಮತ ಪ್ರಮಾಣ ಒಟ್ಟು ಚಲಾಯಿತವಾದ ಶೇ. 90 ರಷ್ಟಿತ್ತು. ಆದರೂ ಇವರೆಲ್ಲಾ ಒಟ್ಟಾಗಿ ಸೇರಿದಾಗ ಕಲ್ಮಾಡಿಗೆ ಇಲ್ಲಿ ಸೋಲುಂಟಾಗಿದೆ.

ಕ್ಷೀಣಿಸಿದ ವ್ಯಾಘ್ರ ದನಿ

ಬಿಜೆಪಿಯ ಪರಿಸ್ಥಿತಿ ಇದಾದರೆ ಅದರ ಮಿತ್ರಪಕ್ಷ ಶಿವಸೇನೆಯ ಸ್ಥಿತಿಯು ಇದರಿಂದ ಭಿನ್ನವಾಗಿಯೇನೂ ಇಲ್ಲ.

ಕರಾಚಿಗೆ ಹೋಗಿ ದಾವೂದ್ ಇಬ್ರಾಹಿಂನನ್ನು ಸದೆಬಡಿಯುವ ಸಾಮರ್ಥ್ಯ ನನಗಿದೆ ಎಂದು ಘರ್ಜಿಸಿದ್ದ ಶಿವಸೇನೆಯ ಮೋಹನ್ ರಾವಳೆ ದಕ್ಷಿಣ ಮಧ್ಯ ಮುಂಬೈಯಿ ಕ್ಷೇತ್ರದಿಂದ ಕೇವಲ 153 ಮತಗಳ ಅಂತರದಲ್ಲಿ ಗೆದ್ದು ಬಂದಿದ್ದಾರೆ. ಕಳೆದ ಬಾರಿ ಅವರ ಗೆಲುವಿನ ಅಂತರ 58,600 ಮತಗಳಾಗಿದ್ದವು. ವಾಯುವ್ಯ ಮುಂಬಯಿ ಕ್ಷೇತ್ರದಲ್ಲಿ ವಿಸರ್ಜಿತ ಲೋಕಸಭಾ ಶಿವಸೇನೆ ಗುಂಪಿನ ನಾಯಕ ಮಧುಕರ ಸರ್ಪೋತ ವಾರ್ 20 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಕಳೆದ ಬಾರಿ ಅವರು 88,400 ಮತಗಳಿಂದ ವಿಜಯಿಯಾಗಿದ್ದರು. ಥಾಣೆ ಯಿಂದ ಶಿವಸೇನೆಯ ಪ್ರಕಾಶ್ ಪರಾಂಜಪೆ ಕೇವಲ 60,000 ಮತಗಳ ಅಂತರದಿಂದ ಗೆದ್ದಿದ್ದಾರೆ. ಕಳೆದ ಚುನಾವಣೆಯಲ್ಲಿ ಈ ಅಂತರ 1.92 ಲಕ್ಷ ಆಗಿತ್ತು!

ಅಹ್ಮದ್‌ನಗರದಲ್ಲಿ ಶಿವಸೇನೆಯ ಬಾಳಾಸಾಹೇಬ್ 19,000 ಮತಗಳ ಅಂತರದಿಂದ ಗೆದ್ದಿದ್ದಾರೆ. ಕಾಂಗ್ರೆಸ್‌ನಿಂದ ಶಿವಸೇನೆ ಕಿತ್ತುಕೊಂಡ ಏಕೈಕ ಕ್ಷೇತ್ರ ಇದಾಗಿದೆ.

ಬಿ.ಜೆ.ಪಿ. ಸರ್ಕಾರವೇ ಹುಟ್ಟು ಹಾಕಿದ್ದ ದಂಗೆ

ಅಲ್ಪ ಸಂಖ್ಯಾತರ ಸಮುದಾಯದ ಜನರಲ್ಲಿ ಭೀತಿಯನ್ನೇ ಹುಟ್ಟಿ ಹಾಕಲು ಹಾಗೂ ಅವರಿಗೆ ಒಂದು ಪಾಠ ಕಲಿಸಲು ಬಿ.ಜೆ.ಪಿ. ಮತ್ತು ಅದರ ಸರಕಾರವೇ ಗಲಭೆಯನ್ನೇ ಹುಟ್ಟು ಹಾಕಿತ್ತು....

ರಾಜಸ್ಥಾನದ ಅಜಮೇರ್ ನಗರದಲ್ಲಿ ಈಚೆಗೆ ನಡೆದ ಗಲಭೆಗಳ ಬಗ್ಗೆ ಅಧ್ಯಯನ ನಡೆಸಿದ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ನೀಡಿರುವ ಒಟ್ಟಾರೆ ಅಭಿಪ್ರಾಯವಾಗಿದೆ.

ಗಲಭೆ ಪೀಡಿತ ದರ್ಗಾ ಪ್ರದೇಶಕ್ಕೆ ಫೆ. 19ರಂದು ಭೇಟಿ ನೀಡಿದ್ದ ತಂಡದಲ್ಲಿ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೃಷ್ಣಕಾಂತ್ ವರ್ಮಾ, ರವೀಂದ್ರ ಶುಕ್ಲಾ ಮತ್ತು ಅಜ್ಮೀರ್ ಜಿಲ್ಲಾ ಸಮಿತಿ ಕಾರ್ಯದರ್ಶಿ ಪರಶುರಾಮ್ ಶರ್ಮಾ ಇದ್ದರು.

ಫೆ. 20ರಂದು ರಾಜಸ್ಥಾನ ರಾಜಧಾನಿ ಜೈಪುರಕ್ಕೆ ಮರಳಿದ ತಂಡ ಸುದ್ದಿಗಾರರೊಂದಿಗೆ ತನ್ನ ಅಧ್ಯಯನದ ಫಲಿತಾಂಶಗಳನ್ನು ವಿವರಿಸಿದರು.

'ಗ್ರಾಹಕನೊಬ್ಬ ಖರೀದಿಸಿದ್ದ ವಸ್ತುವನ್ನು ಅಂಗಡಿಯವನಿಗೆ ವಾಪಸ್ಸು ಮಾಡಲು ಬಂದಿದ್ದ ಒಂದು ಸಣ್ಣ ಪ್ರಕರಣವನ್ನು ಗಲಭೆಯನ್ನಾಗಿ ಪರಿವರ್ತಿಸುವಲ್ಲಿ ರಾಜ್ಯದ ಪೋಲೀಸರು ಮತ್ತು ಆಡಳಿತ ವರ್ಗ ಬಹಳ ಕೆಟ್ಟ ಪಾತ್ರವನ್ನು ವಹಿಸಿತ್ತು ಎಂದು ಮಂಡಳಿ ಸದಸ್ಯರು ಹೇಳಿದರು. ಆಡಳಿತ ವರ್ಗ ಪೋಲೀಸರೂ ಐಕ್ಯತೆಯನ್ನು ಪ್ರದರ್ಶಿಸಿದ್ದೇ ಆದಲ್ಲಿ ಜನತೆಯ ಮೇಲಿನ ಗೋಲೀಬಾರನ್ನು ನಿವಾರಿಸಬಹುದಿತ್ತು ಎಂದವರು ತಿಳಿಸಿದರು.

ರಾಜ್ಯದಲ್ಲಿ ಲೋಕಸಭೆ ಚುನಾವಣೆ ನಡೆದ ಬೆನ್ನಲ್ಲೇ ದೊಂಬಿ ನಡೆದಿರುವುದು ಗಮನಾರ್ಹ. ಪೋಲೀಸ್ ಮತ್ತು ಆಡಳಿತವರ್ಗದವರು ಗಲಭೆಯನ್ನು ಪ್ರಚೋದಿಸಿ ಆ ನಂತರ ಯಾವುದೇ ಸೂಚನೆ ನೀಡದೆ ಗೋಲಿಬಾರು ನಡೆಸಿದ್ದಾರೆ ಎಂದು ತಂಡದ ಸದಸ್ಯರು ತಿಳಿಸಿದರು.

ದೇಶದಾದ್ಯಂತದಿಂದ ಬಂದಿದ್ದ ಮುಸ್ಲಿಂ ಯಾತ್ರಿಕರು ಕೂಡ ನೆರೆದಿದ್ದ ದರ್ಗಾದತ್ತವೂ ಪೋಲೀಸರು ಗುಂಡು ಹಾರಿಸಿದರು. ದರ್ಗಾದ ಪ್ರದೇಶದ ಅಂಗಡಿಗಳನ್ನು ಪೋಲೀಸರು ಲೂಟಿ ಮಾಡಿದರು. ಯಾತ್ರಿಕರೊಡನೆ ಕೆಟ್ಟದಾಗಿ ವರ್ತಿಸಿದರು. ಮನೆ ಮನೆಯೊಳಗೆ ದಾಳಿ ಮಾಡಿ ಶಸ್ತ್ರಾಸ್ತ್ರಗಳನ್ನು ಶೋಧಿಸುವ ಹೆಸರಿನಲ್ಲಿ ಇಡೀ ಪ್ರದೇಶದಲ್ಲಿ ಭೀತಿಯ ವಾತಾವರಣವನ್ನೇ ಸೃಷ್ಟಿಸಿದರು.

ಧರಣಿ

ದರ್ಗಾದ ಮುಖ್ಯ ದ್ವಾರದಲ್ಲಿ ಧರಣಿ ಕುಳಿತಿದ್ದ ಜನರನ್ನು ಸಿ.ಪಿ.ಐ.(ಎಂ) ನಾಯಕರು ಭೇಟಿ ಮಾಡಿದರು.

ಗೋಲೀಬಾರಿನಲ್ಲಿ ಮಹಮದ್ ಇಲಿಯಾಸ್ ಎಂಬುವನಿಗೆ ಸಣ್ಣ ಗಾಯ ಮಾತ್ರವೇ ಆಗಿದೆ ಎಂಬ ಪೋಲೀಸ್ ಹೇಳಿಕೆ ಸುಳ್ಳು ಎಂಬುದು ಅಧ್ಯಯನ ತಂಡಕ್ಕೆ ತಿಳಿದು ಬಂದಿದೆ. ವಾಸ್ತವವಾಗಿ 303 ರೈಫಲ್‌ನಿಂದ ಹೊರ ಬಂದ ಗುಂಡು ಇಲಿಯಾಸ್‌ನ ಹೊಟ್ಟೆಯನ್ನು ಛೇದಿಸಿ ಹೋಗಿದೆ. ಆ ನಂತರ ಜನರು ಈ ಗುಂಡನ್ನು ಪೋಲೀಸರಿಗೆ ಒಪ್ಪಿಸಿದ್ದು ಅದಕ್ಕೆ ರಸೀದಿಯನ್ನು ಪಡೆದಿದ್ದಾರೆ.

ಸರಕಾರಿ ಆಸ್ಪತ್ರೆಗೂ ಭೇಟಿ ನೀಡಿದ್ದ ತಂಡ ಗಾಯಾಳುಗಳೊಂದಿಗೆ ಮಾತುಕತೆ ನಡೆಸಿತು.

ನ್ಯಾಯಾಂಗ ತನಿಖೆಗೆ ಆಗ್ರಹ

ಅಜ್ಮೀರ್ ಗಲಭೆಗಳು ಹಾಗೂ ಇಡೀ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವಂತೆ ಸಿ.ಪಿ.ಐ.(ಎಂ) ರಾಜಸ್ಥಾನ ರಾಜ್ಯ ಸಮಿತಿ ಒತ್ತಾಯಿಸಿದೆ. ಅಸ್ತ್ರಗಳಿಗಾಗಿ ದಾಳಿ ಮಾಡಿ ಶೋಧದ ಹೆಸರಲ್ಲಿ ಹರಿಯಬಿಡಲಾಗಿರುವ ಭಯದ ವಾತಾವರಣವನ್ನು ತಕ್ಷಣ ನಿಲ್ಲಿಸಬೇಕು ಹಾಗೂ ಗಾಯಳುಗಳಿಗೆ ಪೂರ್ತಿ ಚಿಕಿತ್ಸೆಯನ್ನು ಒದಗಿಸುವಂತೆಯೂ ಅದು ಒತ್ತಾಯಿಸಿದೆ.

ಕೈಲಾಗದವರು ಮೈಪರಚಿಕೊಂಡರು!

ಪುಟ 1 ರಿಂದ

ರಾಜ್ಯದ ಜನತೆಯ ಹಿತವನ್ನು ಕಾಪಾಡುವಲ್ಲಿ, ಅದರಲ್ಲೂ ಮುಖ್ಯವಾಗಿ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಒಗ್ಗಟ್ಟನ್ನು ಉಳಿಸುವಲ್ಲಿ ಅವಿರತ ಶ್ರಮಿಸಿದ ಜನತೆಯ ನೈಜಮಿತ್ರ ಎಡರಂಗ ಸತತ ಎರಡನೇ ಸಲ ಆಯ್ಕೆಯಾಗಿ ಅಧಿಕಾರ ಸ್ವೀಕರಿಸುವ, ರಾಜಭವನದಲ್ಲಿನ ಸಮಾರಂಭವನ್ನು ರಾಜ್ಯದ ಪ್ರತಿಪಕ್ಷಗಳು ಬಹಿಷ್ಕರಿಸಿದ್ದವು!

ಕಾಂಗ್ರೆಸ್-ತ್ರಿಪುರಾ ಉಪಜಾತಿ ಯುವ ಸಮಿತಿ(ಟಿಯುಜೆಎಸ್)-ತ್ರಿಪುರಾ ಸ್ವಯಂಸೇವಕರ(ಟಿ.ಎಸ್.ವಿ.) ಮೈತ್ರಿಕೂಟ ಇದುವೇ ರಾಜ್ಯದ ಪ್ರತಿಪಕ್ಷ.

ಚುನಾವಣೆಯಲ್ಲಿ ಭಾರೀ ಅಕ್ರಮ ನಡೆಸಿ, ಆಳುವ ಎಡರಂಗ ಅಧಿಕಾರಕ್ಕೆ ಬಂದಿದೆ ಎನ್ನುವುದು ಈ ಕೂಟದ ಆರೋಪವಾಗಿದೆ ಹಾಗೂ ಸಮಾರಂಭ ಬಹಿಷ್ಕರಿಸಲು ನೀಡಿರುವ ಸಬೂಬಾಗಿದೆ.

"ಇದು ಅಪ್ಪಟ ಸುಳ್ಳಿನ ಕಂತೆ ಹಾಗೂ ಆಧಾರರಹಿತ ಆರೋಪ ಎನ್ನುವುದರಲ್ಲಿ ಸಂಶಯವೇ ಇಲ್ಲ. ಎಡರಂಗ ಸರಕಾರವನ್ನು ಏನಾದರೂ ಮಾಡಿ ಉರುಳಿಸಲು ತಾನು ಬಹಳ ಕಾಲದಿಂದ ನಡೆಸುತ್ತಿದ್ದ ಪ್ರಯತ್ನಗಳು ಫಲ ನೀಡದಿದ್ದರಿಂದ ಈ ಅಪವಿತ್ರ ಮೈತ್ರಿಕೂಟ ಈ ರೀತಿಯ ಹುಯಿಲೆಬ್ಬಿಸುತ್ತಿದೆ. ಹಾಗೂ ಅಪಾದನೆ ಮಾಡುತ್ತಿದೆ. ಕೈಲಾಗದವನು ಮೈಪರಚಿಕೊಂಡ ಎಂಬ ನಾಣ್ಣುಡಿಗೆ ಉದಾಹರಣೆಯಾಗಿ ಈ ಪ್ರಕರಣವನ್ನು ಧಾರಾಳವಾಗಿ ಬಳಸಿಕೊಳ್ಳಬಹುದು.

ರಾಜ್ಯದ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಐಕ್ಯವನ್ನು ಒಡೆಯಲು ಈ ಮೈತ್ರಿಕೂಟ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸತತ ಪ್ರಯತ್ನ ನಡೆಸಿದ್ದು ಗುಟ್ಟಿನ ಸಂಗತಿಯೇನೂ ಅಲ್ಲ. ಅದ್ಯಾವುದನ್ನೂ ಲೆಕ್ಕಿಸದೆ ಜನರು ಈ ಕೂಟದ ಹೂಟಕ್ಕೆ ಸರಿಯಾದ ಬುದ್ಧಿ ಕಲಿಸಿದ್ದಾರೆ.

ಚುನಾವಣೆ ಪೂರ್ವದಲ್ಲಿ ಭಾರೀ ಹಿಂಸಾಚಾರ ನಡೆದಿದ್ದ ತ್ರಿಪುರದಲ್ಲಿ ಮತದಾನದ ಸಂದರ್ಭದಲ್ಲಿ ಕಿಂಚಿತ್ತೂ ಅಹಿತಕರ ಘಟನೆ ನಡೆದಿರಲಿಲ್ಲ. ಮಾತ್ರವಲ್ಲದೆ ಎಲ್ಲೂ ಮರುಮತದಾನ ಕೂಡ ನಡೆಯಲಿಲ್ಲ. ಚುನಾವಣೆ ಶಾಂತಿಯಿಂದ, ನಿಷ್ಪಕ್ಷಪಾತವಾಗಿ ನಡೆದಿತ್ತೆನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೇನು?

ಪರಿಸ್ಥಿತಿ ಹೀಗಿರುವಾಗ ಸರಕಾರ ರಿಗ್ಗಿಂಗ್ ನಡೆಸಿ, ಅಧಿಕಾರಕ್ಕೆ ಬಂತು ಎಂದು ಬೊಬ್ಬಿಡುವುದರಲ್ಲಿ ಏನು ಅರ್ಥವಿದೆ? ಜನರು ಕೊಟ್ಟಿರುವ ತೀರ್ಮಾನವನ್ನು ಗೌರವಯುತವಾಗಿ ಒಪ್ಪಿ ರಾಜ್ಯದ ಅಭಿವೃದ್ಧಿ ಕಾರ್ಯದಲ್ಲಿ ಸರಕಾರಕ್ಕೆ ಸಹಕಾರ ನೀಡುವುದೇ ಪ್ರತಿಪಕ್ಷಕ್ಕೆ ಶೋಭೆ ತರುವ ವಿಚಾರವಾಗುತ್ತದೆ.

ಎಚ್.ವಿ.ಪಿ.-ಬಿ.ಜೆ.ಪಿ. ನೈಜಮುಖ ಅನಾವರಣ

ಕಾರ್ಮಿಕರ ಮೇಲೆ ಗೋಲಿಬಾರು ನಡೆಸಿ ಎಂಟು ಕಾರ್ಮಿಕರ ಪ್ರಾಣ ತೆಗೆದ ಪ್ರಕರಣ ಹರ್ಯಾಣದ ಆಳುವ ಹರ್ಯಾಣ ವಿಕಾಸ್ ಪಕ್ಷ (ಎಚ್.ವಿ.ಪಿ.)-ಬಿ.ಜೆ.ಪಿ. ಮೈತ್ರಿ ಕೂಟದ ನಿಜವಾದ ಮುಖವನ್ನು ಅನಾವರಣಗೊಳಿಸಿದೆ.

ರೇವಾರಿ ಜಿಲ್ಲೆಯ ಧರುಹೇರಾದಲ್ಲಿ ಧರುಹಾರ್ನ್ ಪಶುಪತಿ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್‌ನ ಕಾರ್ಮಿಕರ ಮೇಲೆ ಫೆ. 19ರಂದು ಪೋಲೀಸರು ಅಮಾನುಷವಾಗಿ ಗೋಲಿಬಾರು ನಡೆಸಿ ಎಂಟು ಕಾರ್ಮಿಕರನ್ನು ಕೊಂದಿದ್ದರು. ನೂರಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ್ದರು.

ಪೋಲೀಸರು ಆಡಳಿತ ವರ್ಗದೊಂದಿಗೆ ಶಾಮೀಲಾಗಿ ಫ್ಯಾಕ್ಟರಿಯಲ್ಲಿ ಕರ್ತವ್ಯ ನಿರತರಾಗಿದ್ದ ಕಾರ್ಮಿಕರನ್ನು ಫ್ಯಾಕ್ಟರಿಯಿಂದ ಹೊರಗೆಳೆದು ಹಾಕಿ ಬರ್ಬರವಾಗಿ ಗುಂಡು ಹಾರಿಸಿದರು. ಇದು ಆಡಳಿತ ವರ್ಗ, ಪೋಲೀಸರು ಮತ್ತು ಆಳುವ ಎಚ್.ವಿ.ಪಿ.-ಬಿ.ಜೆ.ಪಿ. ಸರಕಾರಗಳ ದುಡಿಯುವ ಜನರ ವಿರುದ್ಧದ ಅಪವಿತ್ರ ಮೈತ್ರಿಯ ಸ್ಪಷ್ಟ ರೂಪವಾಗಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಸಿ.ಪಿ.ಐ.(ಎಂ) ಮತ್ತು ಸಿ.ಐ.ಟಿ.ಯು ಹರ್ಯಾಣದ ರಾಜ್ಯ ಸಮಿತಿಗಳು ದುಡಿಯುವ ಜನರ ಮೇಲಿನ ಈ ಹೇಯ ದೌರ್ಜನ್ಯವನ್ನು ಕಟುವಾಗಿ ಖಂಡಿಸಿವೆ.

ಈ ಎರಡೂ ಸಮಿತಿಗಳ ನಿಯೋಗವೊಂದು ಧರುಹೇರಾಕ್ಕೆ ಭೇಟಿ ನೀಡಿ ಪರಿಸ್ಥಿತಿಯ ಅಧ್ಯಯನ ನಡೆಸಿತು.

ಸಮವಸ್ತ್ರಧಾರಿ ಗೂಂಡಾಗಳು!

ಮಿಲ್ ಆಡಳಿತ ವರ್ಗದಿಂದ ಹಣ ಪಡೆದಿದ್ದ ಪೋಲೀಸರು ಸಮವಸ್ತ್ರಧಾರಿ ಗೂಂಡಾಗಳಂತೆ ವರ್ತಿಸಿದರು ಎಂದು ತಮನ್ನು ಭೇಟಿ ಮಾಡಿದ್ದ ನಿಯೋಗಕ್ಕೆ ಕಾರ್ಮಿಕರು ವಿವರಿಸಿದ್ದಾರೆ.

ಕಳೆದ ವರ್ಷದ ದೀಪಾವಳಿ ಹಬ್ಬದ ದಿನದಿಂದಲೂ ಈ ಮಿಲ್‌ನ ಕಾರ್ಮಿಕರು ಆಡಳಿತ ವರ್ಗದ ತೀವ್ರ ದಬ್ಬಾಳಿಕೆಗೆ ಒಳಗಾಗಿದ್ದಾರೆ. ವಿಶೇಷವಾಗಿ ಅದರ ಜನರಲ್ ಮ್ಯಾನೇಜರ್ ಕಾರ್ಮಿಕರನ್ನು ಗುಲಾಮರಂತೆ ನಡೆಸಿಕೊಂಡು ದೌರ್ಜನ್ಯವನ್ನೇ ಹರಿಬಿಟ್ಟಿದ್ದಾನೆ.

ಆ ಕರಾಳ ದಿನದಂದು, ಅಂದರೆ ಫೆ. 17ರಂದು ಸಂಜೆ ಭಾರೀ ಸಂಖ್ಯೆಯ ಪೋಲೀಸರು ಫ್ಯಾಕ್ಟರಿ ಬಳಿ ಜಮಾಯಿಸಿದರು. ತಮ್ಮ ಬಳಿ ಆದೇಶ ಇಲ್ಲದಿದ್ದರೂ ಕಾರ್ಮಿಕರನ್ನು ಹೊರಗಡೆ ಎಳೆದು ಹಾಕಿದರು. ಕಾರ್ಮಿಕ ಇಲಾಖೆ ಫ್ಯಾಕ್ಟರಿ ಲಾಕೌಟ್ ಕೂಡ ಘೋಷಿಸಿಯೂ ಇರಲಿಲ್ಲ.

ಹೀಗಿದ್ದಾಗ್ಯೂ ತಮ್ಮನ್ನು ಬಲವಂತವಾಗಿ ಹೊರಗೆಳೆದು ಹಾಕಿದ್ದನ್ನು ಪ್ರತಿಭಟಿಸಿ ಕಾರ್ಮಿಕರು ಫ್ಯಾಕ್ಟರಿ ಗೇಟ್ ಬಳಿ ಶಾಂತಿಯುತವಾಗಿ ಧರಣೆ ಕುಳಿತಾಗ ಅವರನ್ನು ಚದುರಿಸಲು ಪೋಲೀಸರು ಎಚ್ಚರಿಕೆಯನ್ನು ನೀಡದೆ ಗೋಲಿಬಾರು ನಡೆಸಿದರು.

ಆನಂತರ ಪೋಲೀಸರು ಕಾರ್ಮಿಕರ ಮನೆಗಳನ್ನು ಲೂಟಿ ಮಾಡಿದರು. ಎದುರಿಗೆ ಬಂದವರಿಗೆಲ್ಲ ಯದ್ವಾತದ್ವಾ ಹೊಡೆದರು.

ಎಚ್.ವಿ.ಪಿ.-ಬಿ.ಜೆ.ಪಿ. ಸರಕಾರದ ದಮನಕಾರಿ ನೀತಿಗಳು ಹಾಗೂ ಜಂಗ್ಲೀ ರಾಜ್‌ನ್ನು ಸಿ.ಪಿ.ಐ.(ಎಂ) ಹಾಗೂ ಸಿ.ಐ.ಟಿ.ಯು. ಕಟುವಾಗಿ ಟೀಕಿಸಿದ್ದು, ನ್ಯಾಯಕ್ಕಾಗಿ ಆಗ್ರಹಿಸಿವೆ.

ಲೋಕಸಂಚಾರ

ಇಂಡೋನೇಶ್ಯಾ: 'ಚಮಚಾ' ಬಂಡವಾಳಶಾಹಿ'ಯ ವಿರುದ್ಧ ವಿದ್ಯಾರ್ಥಿಗಳ ವಿರುದ್ಧ ವಿದ್ಯಾರ್ಥಿಗಳ ಆಕ್ರೋಶದ ನಡುವೆ ಸುಹಾರ್ತೋ ಮತ್ತೆ ಅಧ್ಯಕ್ಷ

ಇಂಡೋನೇಶ್ಯಾದ ಅಧ್ಯಕ್ಷ ಸುಹಾರ್ತೋ ಸತತ ಏಳನೇ ಬಾರಿಗೆ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ ಅಥವಾ ತಮ್ಮನ್ನು ನೇಮಿಸಿಕೊಂಡಿದ್ದಾರೆ ಎನ್ನಬಹುದು. 'ಜನತಾ ಸಲಹಾ ಸಭೆ' ಎಂಬ ದೊಡ್ಡ ಸಭೆಯೊಂದು ಅಧ್ಯಕ್ಷರನ್ನು ನೇಮಿಸುವ ಕ್ರಮವನ್ನು ಈ ಮಾಜಿ ಸೇನಾಧಿಪತಿ ಅಧಿಕಾರವನ್ನು ತಮ್ಮ ಕೈಗೆ ತಗೊಂಡಂದಿನಿಂದ ಆರಂಭಿಸಿದ್ದರು. ಏಶ್ಯಾದಲ್ಲಿ ಎರಡನೇ ದೊಡ್ಡ ಕಮ್ಯುನಿಸ್ಟ್ ಪಾರ್ಟಿ ಹೊಂದಿದ್ದ ಈ ದೇಶದಲ್ಲಿ ಅದನ್ನು ಬಲ ಪ್ರಯೋಗಿಸಿ ನಿರ್ಮೂಲ ಮಾಡುವಲ್ಲಿ ಯಶಸ್ವಿಯಾದ ಜನರಲ್ ಸುಹಾರ್ತೋಗೆ ಸಹಜವಾಗಿ ಅಮೆರಿಕಾದ ಭಾರೀ ಬೆಂಬಲ ದೊರೆಯುತ್ತಾ ಬಂದಿದೆ. ಆದರೆ ಇತ್ತೀಚೆಗೆ ಅಲ್ಲಿಯ ರೂಪ್ಯಾ ಭಾರೀ ಕುಸಿತ ಕಂಡ ನಂತರ ಐಎಂಎಫ್‌ನ ಕಠಿಣ ಶರತ್ತುಗಳನ್ನು ಪಾಲಿಸುವ ವಿಷಯದಲ್ಲಿ ಭಿನ್ನಾಭಿಪ್ರಾಯ ಎದ್ದು ಬಂದಿದೆ.

ಈ ನಡುವೆ ಈ ಆರ್ಥಿಕ ಕುಸಿತದ ದುಷ್ಪರಿಣಾಮಗಳನ್ನು ಎದುರಿಸಬೇಕಾದ ಜನಗಳಲ್ಲಿ ತೀವ್ರ ಅಸಂತೃಪ್ತಿ ಎದ್ದಿದೆ. ಇಲ್ಲಿಯ ಮೂರು ಮುಖ್ಯ ರಾಜಕೀಯ ಪಕ್ಷಗಳು ಸುಹಾರ್ತೋ ಬೆಂಬಲಕ್ಕೆ ನಿಂತಿರುವುದರಿಂದ ವಿದ್ಯಾರ್ಥಿಗಳು ಜನಗಳ ಆಕಾಂಕ್ಷೆಗಳಿಗೆ ದನಿ ನೀಡುತ್ತಿದ್ದಾರೆ. 'ಕರೆಪ್ಷ್ಹ, ಕರಪ್ಶನ್, ಕ್ರೋನಿಯಿಸಂ' ಅಂದರೆ ನಾಣ್ಯ ಬಿಕ್ಕಟ್ಟು, ಭ್ರಷ್ಟಾಚಾರ ಹಾಗೂ ಚಮಚಾಗಿರಿ ಇಂಡೋನೇಶ್ಯಾದ ಮೂರು ಅತಿದೊಡ್ಡ ಸಮಸ್ಯೆಗಳು, ಇದನ್ನು ನಿವಾರಿಸಬಲ್ಲ 'ಸ್ವಚ್ಛ ಸರಕಾರ ಬೇಕು' ಎಂದು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದಾರೆ.

ಇಂಡೋನೇಶ್ಯಾದಲ್ಲಿ ಈಗಿರುವುದು 'ಚಮಚಾ ಬಂಡವಾಳಶಾಹಿ' ಎಂದು ಇವರ ವಾದ. ವಾಸ್ತವವಾಗಿ ಇಲ್ಲಿಯ ರಾಜಕೀಯ, ವ್ಯಾಪಾರ, ಉದ್ದಿಮೆ ಎಲ್ಲಾ ಸುಹಾರ್ತೋರ ಪುತ್ರ-ಪುತ್ರಿಯರ, ಅಳಿಯಂದಿರ ಸೊತ್ತಾಗಿ ಬಿಟ್ಟಿದೆ. 'ಐಎಂಎಫ್ ಆರ್ಥಿಕ ಸುಧಾರಣೆ ಕೇಳುತ್ತಿದೆ, ನಾವು ರಾಜಕೀಯ ಸುಧಾರಣೆ ಕೇಳುತ್ತಿದ್ದೇವೆ. ಕೆಲವೇ ಪ್ರಭಾವಿ ಕುಳಗಳು ಲಾಭ ದೋಚುವ ಆರ್ಥಿಕ ಸುಧಾರಣೆಗಳಿಂದೇನು ಪ್ರಯೋಜನ? ನಾವು ಈ ಚಮಚಾ ಬಂಡವಾಳಶಾಹಿಯನ್ನು ಕೊನೆಗೊಳಿಸ ಬಯಸುತ್ತೇವೆ' ಎನ್ನುತ್ತಾರೆ ಈ ವಿದ್ಯಾರ್ಥಿಗಳು. ಆದರೆ ಈ ನಡುವೆ ಐಎಂಎಫ್ ಮತ್ತು ಪಾಶ್ಚಿಮಾತ್ಯ ಆಳರಸರು ತಮ್ಮ 'ಆರ್ಥಿಕ ಸುಧಾರಣೆ'ಗಳನ್ನು ಇಂಡೋನೇಶ್ಯನ್ನರ ತಲೆಯ ಮೇಲೆ ಹೇರ ಬಯಸುತ್ತಿದ್ದಾರೆ.



ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಪ್ರಕಟವಾಗಿ 150 ವರ್ಷಗಳಾದ ಸಂದರ್ಭದಲ್ಲಿ ಕಮ್ಯುನಿಸ್ಟರು ಲಂಡನ್ನಿನ ಹೈಗೇಟ್‌ನಲ್ಲಿರುವ ಕಾರ್ಲ್‌ಮಾರ್ಕ್ಸ್‌ರವರ ಸಮಾಧಿಗೆ ಭೇಟಿನೀಡಿ ಶ್ರದ್ಧಾಂಜಲಿ ಅರ್ಪಿಸಿದರು

ಟಿಬೆಟ್ಟಿನಲ್ಲಿ ಮಾನವ ಹಕ್ಕುಗಳ ಬಗ್ಗೆ ಚೀಣಾದ ಶ್ವೇತಪತ್ರ ಬಿಡುಗಡೆ

ಫೆಬ್ರವರಿ 24 ರಂದು ಚೀಣೀ-ಸರ್ಕಾರ ಟಿಬೆಟ್ಟಿನಲ್ಲಿ ಮಾನವ ಹಕ್ಕುಗಳ ಬಗ್ಗೆ ಹೊರಡಿಸಿದ ಶ್ವೇತಪತ್ರ ಈ ಬಗ್ಗೆ ಅಪಪ್ರಚಾರ ನಡೆಸುತ್ತಿರುವವರ ಬಾಯಿ ಮುಚ್ಚಿಸುವ ಅಂಕಿ-ಅಂಶಗಳನ್ನು ಒಳ ಗೊಂಡಿದೆ ಎಂದು ಹೇಳಲಾಗಿದೆ. ಬಹಳ ವರ್ಷಗಳಿಂದ ಸಾಮ್ರಾಜ್ಯಶಾಹಿಗಳಿಗೆ ಚೀಣಾದ ಮೇಲೆ ತಮ್ಮ ದ್ವೇಷಕಾರಲು ದಲೈಲಾಮಾ ಒಂದು ಉತ್ತಮ ಸಾಧನ ವಾಗಿದ್ದಾರೆ. ದಲೈಲಾಮಾ ಮತ್ತು ಅವರ ಬೆಂಬಲಿಗರು ಟಿಬೆಟ್ ಒಂದು ಆಕ್ರಮಿತ ಪ್ರದೇಶ ಎಂದರೆ ಚೀಣೀ ಸರಕಾರ ಹಾಗೂ ಈಗ ಟಿಬೆಟಿನಲ್ಲಿ ಇರುವವರು 1959 ರಲ್ಲಿ ಚೀಣೀ ಕೇಂದ್ರ ಸರ್ಕಾರ ದಲೈ ಲಾಮಾ ರಂತಹ ದುಷ್ಟ ಗುಲಾಮರೊಡೆಯರಿಂದ ಈ ಪ್ರದೇಶವನ್ನು ಉಳಿಸಿದರು ಎಂದು ಹೇಳುತ್ತಾರೆ. ಈ ಶ್ವೇತಪತ್ರದಲ್ಲಿನ ಅಂಶಗಳು ಟಿಬೇಟಿನ ಬಗ್ಗೆ ತಿಳಿಯಲು ಬಹಳ ಸಹಾಯಕ ಎನ್ನಲಾಗಿದೆ.

ಅದೇ ದಿನ ಅಮೆರಿಕ ಧಾರ್ಮಿಕ ಮುಖಂಡರ ತಂಡವೊಂದು ಟಿಬೇಟಿನ ಜೈಲುಗಳಿಗೆ ಭೇಟಿ ನೀಡಿ ಅಲ್ಲಿರುವ ಧಾರ್ಮಿಕ ಕಾರ್ಯಕರ್ತರ ಮಾನವ ಹಕ್ಕುಗಳ ಬಗ್ಗೆ ಸ್ವತಃ ನೋಡಲು ಟಿಬೆಟ್ ಆಡಳಿತ ಅವಕಾಶ ನೀಡಿತ್ತು.

ಇರಾಕ್: ಅಮೆರಿಕನ್ ನಿಲುವಿಗೆ ವಿಶ್ವಸಂಸ್ಥೆ ಮುಖ್ಯಸ್ಥರ ಸವಾಲು

ಇರಾಕ್‌ನಲ್ಲಿದೆಯೆನ್ನುವ ರಾಸಾಯನಿಕ ಶಸ್ತ್ರಾಸ್ತ್ರಗಳ ತನಿಖೆಗೆ ಸಂಬಂಧಪಟ್ಟಂತೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನನ್‌ರ ಮುತುವರ್ಜಿಯಿಂದ ಉಂಟಾದ ಒಪ್ಪಂದದಿಂದ ಕುಪಿತಗೊಂಡಿರುವ ಅಮೆರಿಕಾ ಮತ್ತೆ-ಮತ್ತೆ ಇರಾಕ್ ತನಿಖೆಯ ಒಪ್ಪಂದವನ್ನು ಉಲ್ಲಂಘಿಸಿದರೆ ಅದರ ವಿರುದ್ಧ ಮಿಲಿಟರಿ ಧಾಳಿ ನಡೆಸಲು ತನಗೆ ಹಕ್ಕಿದೆ ಎಂದು ಹೇಳುತ್ತಲೇ ಇದೆ. ಇದಕ್ಕೆ ಮಾರ್ಚ್ 8 ರಂದು ನೀಡಿದ ಸಂದರ್ಶನ ವೊಂದರಲ್ಲಿ ಕೋಫಿ ಅನ್ನನ್ ಸವಾಲು ಹಾಕಿದ್ದಾರೆ. ಯಾವುದೇ ಮಿಲಿಟರಿ ಧಾಳಿ ಮಾಡುವ ಮೊದಲು ಅಮೆರಿಕಾ ವಿಶ್ವಸಂಸ್ಥೆ ಯೊಡನೆ ಸಮಾಲೋಚಿಸ ಬೇಕಾಗುತ್ತದೆ ಎಂದು ಅವರು ಸ್ಪಷ್ಟ ಪಡಿಸಿದ್ದಾರೆ.

ಇರಾಕಿನಲ್ಲಿ ತನಿಖೆಗೆ ಸಂಬಂಧಪಟ್ಟಂತೆ ಇಬ್ಬರು ವಿಶ್ಯನ್ನರನ್ನು (ಭಾರತ ಪ್ರಕಾಶ್ ಶಾಹ ಹಾಗೂ ಶ್ರೀಲಂಕಾದ ಧನಪಾಲ್) ನೇಮಿಸಿರುವುದರಿಂದ ಅಮೆರಿಕಾ ಮತ್ತು ಬ್ರಿಟನ್ ಕುಪಿತಗೊಂಡಿದೆ ಎಂದು ಹೇಳಲಾಗುತ್ತಿದೆ.

ಇರಾಕಿಗೆ ಡಿವೈಎಫ್‌ಐ ಮುಖಂಡರ ಭೇಟಿ

ಇರಾಕೀ ಗಣತಂತ್ರದ ಸರಕಾರ ಡಿವೈಎಫ್‌ಐ ನ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸತ್ ಸದಸ್ಯ ಮಹಮ್ಮದ್ ಸಲೀಮ್‌ರನ್ನು ಇರಾಕಿಗೆ ಭೇಟಿ ನೀಡಲು ಆಹ್ವಾನ ನೀಡಿದೆ. ಅಮೆರಿಕನ್ ಆಡಳಿತ ಉಂಟುಮಾಡಿದ ಬಿಕ್ಕಟ್ಟನ್ನು ಕುರಿತಂತೆ ಇರಾಕಿನ ನಿಲುವನ್ನು ತಿಳಿಯಲಿಕ್ಕಾಗಿ ಈ ಭೇಟಿ. ಇರಾಕಿನ ಮೇಲೆ ಹೇರಿದ ಅನ್ಯಾಯ ಪೂರ್ಣ ಬಹಿಷ್ಕಾರವನ್ನು ಮುಂದುವರಿಸುತ್ತಿರುವುದರಿಂದಾಗಿ ಇರಾಕೀ ಜನತೆ ಪಡುತ್ತಿರುವ ಸಂಕಟಗಳನ್ನು ಸರಿಯಾಗಿ ತಿಳಿಯಲು ಭಾರತೀಯ ಯುವಜನರಿಗೆ ಈ ಭೇಟಿ ಅವಕಾಶ ಕಲ್ಪಿಸಿದೆ. ಇರಾಕೀ ಮುಖಂಡರೊಂದಿಗೆ ವಿಚಾರ ವಿನಿಮಯ ಈ ಭೇಟಿಯ ಸಮಯದಲ್ಲಿ ನಡೆಯುವುದು.

ಈ ನಡುವೆ ವಿಶ್ವ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟ(WFDY) ದ ಜನರಲ್ ಕೌನ್ಸಿಲ್ ಸಭೆ ಕೈರೋದಲ್ಲಿ ಮಾರ್ಚ್ 5 ರಿಂದ 8 ರವರೆಗೆ ನಡೆದಿದೆ. ಕಳೆದ ವರ್ಷ ಹವಾನಾದಲ್ಲಿ ನಡೆದ ವಿಶ್ವ ಯುವ ಜನೋತ್ಸವದ ಮೌಲ್ಯಮಾಪನ ಈ ಸಭೆಯ ಉದ್ದೇಶ. ಈ ಪ್ರದೇಶದಲ್ಲಿನ ಪ್ರಸ್ತುತ ಹಿಂಸಾಚಾರ ಹಾಗೂ ಭಯೋತ್ಪಾದನೆಯ ಬಗ್ಗೆ ಒಂದು ಕಾರ್ಯಾಗಾರವನ್ನು ನಡೆಸುವ ಯೋಜನೆಯಿತ್ತು. ಈ ಸಭೆ ಫೆಬ್ರವರಿಯಲ್ಲಿ ನಡೆಯಬೇಕಾಗಿತ್ತು. ಭಾರತದಲ್ಲಿನ ಮಧ್ಯಾವಧಿ ಚುನಾವಣೆಗಳಿಂದಾಗಿ ಇದನ್ನು ಮುಂದೂಡಲಾಗಿತ್ತು.

(ಐಪಿಎಸ್)

ಐಕ್ಯತೆ ಬಲಪಡಿಸಲು ಶಾಂತಸಾಗರದ ಚಿಕ್ಕ ದೇಶಗಳ ಯತ್ನ

ಕೆರೀಬಿಯಾನ್, ಹಿಂದೂ ಮಹಾಸಾಗರ ಹಾಗೂ ಶಾಂತ ಸಾಗರ ಪ್ರದೇಶಗಳ 35 ಸಣ್ಣ ದ್ವೀಪ ದೇಶಗಳು ವಿಶ್ವ ಸಂಸ್ಥೆಯಲ್ಲಿ ಮತ್ತು ಇತರ ಅಂತರ್ರಾಷ್ಟ್ರೀಯ ಸಭೆಗಳಲ್ಲಿ ತಮ್ಮ ದನಿ ಕೇಳುವಂತೆ ಮಾಡಲು ನಿರ್ಧರಿಸಿವೆ. ಫಿಜಿ ದ್ವೀಪದ ಸುವಾದಲ್ಲಿ ನಡೆದ ಈ ಸಭೆ ಒಂದು 'ಮೈಲಿಗಲ್ಲು' ಎಂದು ವಾವುವಾನ್ಯೂಗಿನಿಯ ನೋಯೆಲ್ ಲೆವಿ ಹೇಳಿರುವುದಾಗಿ ಚೀಣೀ ಸುದ್ದಿ ಸಂಸ್ಥೆ ಕ್ಸಿನ್‌ಹುವಾ ವರದಿ ಮಾಡಿದೆ.

ಬಹುದೇಶೀಯ ಸಂಸ್ಥೆಗಳ ಅಜೆಂಡಾ ಬಹಳಮಟ್ಟಿಗೆ ಅಮೆರಿಕಾ, ಯುರೋಪು ಮತ್ತು ಜಪಾನಿನ ಅಜೆಂಡಾವೇ ಆಗಿರುತ್ತದೆ ಎಂದಿರುವ ಈ ದೇಶಗಳ ಪ್ರತಿನಿಧಿಗಳು ಇದನ್ನು ಬದಲಿಸುವ ಅಗತ್ಯವಿದೆ ಎನ್ನುತ್ತಾರೆ.

ಇಬ್ಬರು ನಾಝಿಗಳಿಗೆ ಜೀವಾವಧಿ ಶಿಕ್ಷೆ

54 ವರ್ಷಗಳ ನಂತರ ಕೊನೆಗೂ ಇಬ್ಬರು ನಾಝಿಗಳಿಗೆ ಇಟಲಿಯ ಮಿಲಿಟರಿ ಅಪೀಲು ಕೋರ್ಟು ಜೀವಾವಧಿ ಶಿಕ್ಷೆ ವಿಧಿಸಿದೆ. 1944 ರಲ್ಲಿ ಜರ್ಮನಿಯ ನಾಝಿ ಪಡೆಗಳು ರಾಜಧಾನಿ ರೋಮನ್ನು ಆಕ್ರಮಿಸಿಕೊಂಡಿದ್ದಾಗ ಅರ್ಡಿಯಾಟೈನ್ ಗುಹೆಗಳ ಬಳಿ 335 ನಾಗರಿಕರನ್ನು ಕೊಂದ ಎರಿಕ್ ಪ್ರೀಬ್ಕೆ ಹಾಗೂ ಮೇಜರ್ ಕಾರ್ಲ್‌ಹೌಸ್‌ಗೆ ಈ ಶಿಕ್ಷೆ ವಿಧಿಸಲಾಗಿದೆ. ಇವರಿಬ್ಬರಿಗೂ ಈಗ 85 ವರ್ಷ.

ಮತ್ತೆ ಅಲ್ಜೀರಿಯಾದಲ್ಲಿ ಬಂಡುಕೋರರ ದುಷ್ಕೃತ್ಯ

ಅಲ್ಜೀರಿಯಾದ ಮೂಲಭೂತವಾದಿ ಬಂಡುಕೋರರು ಇತ್ತೀಚೆಗೆ ಮತ್ತೆ 6 ಕುರಿಕಾಯುವವರ ಗಂಟಲು ಸೀಳಿ ಕೊಂದ ಘಟನೆ ವರದಿಯಾಗಿದೆ. ಕಳೆದ ಡಿಸೆಂಬರ್‌ನಿಂದ ಹೀಗೆ ಸುಮಾರು 1200 ಮಂದಿಯ ಹತ್ಯೆಯಾಗಿದ್ದೆಂದು ಹೇಳಲಾಗುತ್ತಿದೆ. ಅಲ್ಜೀರಿಯಾದ ಸರ್ಕಾರಿ ಪಡೆಗಳ ಮಿಲಿಟರಿ ಕಾರ್ಯಾಚರಣೆಯಲ್ಲಿ ಇದುವರೆಗೆ 300 ಬಂಡುಕೋರರು ಸತ್ತಿದ್ದಾರೆ ಎಂದು ವರದಿಯಾಗಿದೆ.

ಇಸ್ರೇಲಿ ಗುಪ್ತಚರ ಪಡೆಯ ಮುಖ್ಯಸ್ಥರ ರಾಜೀನಾಮೆ

1996 ರಿಂದ ಇಸ್ರೇಲಿ ಗುಪ್ತಚರ ಪಡೆ ಮೊಸ್ಸಾದ್‌ನ ಮುಖ್ಯಸ್ಥ ಡ್ಯಾನಿ ಯತೋಮ್ ರಾಜೀನಾಮೆ ನೀಡಿ ಅವರ ಸ್ಥಾನದಲ್ಲಿ ಇದುವರೆಗೆ ಯುರೋಪಿಯನ್ ಯೂನಿಯನ್‌ನಲ್ಲಿ ಇಸ್ರೇಲಿ ರಾಯಭಾರಿಯಾಗಿದ್ದ ಎಫ್ರೈಮ್ ಹಾಲಿವಿಯವರನ್ನು ನೇಮಿಸಲಾಗಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಜೋರ್ಡಾನಿನಲ್ಲಿ ಇಸ್ಲಾಮಿ ಗುಂಪು ಹಮಸ್‌ನ ಮುಖಂಡ ಖಾಲೆದ್ ಮೆಶಾಲ್‌ರ ಕೊಲೆ ಪ್ರಯತ್ನದಲ್ಲಿ ಇಸ್ರೇಲಿ ಗುಪ್ತಚರ ಪಡೆಯ ವಿಫಲತೆಗೆ ಯಾತೋಮ್ ಬೆಲೆ ತೆರಬೇಕಾಗಿ ಬಂದಿದೆ ಎಂದು ಹೇಳಲಾಗಿದೆ. ಈ ವಿಫಲತೆಯಲ್ಲಿ ಯತೋಮ್‌ರದ್ದು ದೊಡ್ಡ ಜವಾಬ್ದಾರಿಯಿದೆ ಎಂದು ತನಿಖೆಯೊಂದು ಹೇಳಿದ ಮೇಲೆ ಆತ ರಾಜೀನಾಮೆ ನೀಡಿದ್ದಾರೆ.

ಚುನಾವಣೆಗಳು ಮತ್ತು ....

ಪುಟ 3 ರಿಂದ

ಬಂಡವಳಶಾಹಿ ಭೂಮಾಲಿಕ ಪಕ್ಷಕ್ಕೆ ಪರೋಕ್ಷವಾಗಿ ಇಲ್ಲವೆ ಪ್ರತ್ಯಕ್ಷವಾಗಿ ಸೇವೆ ಸಲ್ಲಿಸುತ್ತಾರೆ. ಆ ಮುಖಾಂತರ ಪ್ರಸ್ತುತ ವ್ಯವಸ್ಥೆಯ ಬದಲಾವಣೆಯನ್ನು ತಡೆಯುವಲ್ಲಿ ಚಳುವಳಿಯನ್ನು ಬೆಳೆಯದಂತೆ ತಡೆಯುವಲ್ಲಿ ಸಫಲರಾಗುತ್ತಿದ್ದಾರೆ.

ಹೊಸ ಆರ್ಥಿಕ ನೀತಿಯ ದಾಳಿಯಿಂದಾಗಿ ಕೃಷಿ ಕೂಲಿಕಾರ ಬಡರೈತರ ಸಂಖ್ಯೆ ತೀವ್ರ ಹೆಚ್ಚಾಗಿದೆ. ಆಯಾ ಪ್ರದೇಶವಾರು 50% ರಿಂದ 70% ಭಾಗದಷ್ಟಿದೆ. ಮಧ್ಯಮ ರೈತರಲ್ಲಿ ಒಂದು ಭಾಗ ತೀರಾ ಸಂಕಷ್ಟದಿಂದ ಹೋರಾಟದತ್ತ ಒಲವು ಹೊಂದಿದೆ. ಇನ್ನೊಂದು ಭಾಗ ಹೋರಾಟ ತೀವ್ರ ಗೊಂಡರೆ ಬಂದು ಪಾಲುಗೊಳ್ಳುತ್ತಾರೆ.

ಹೆಚ್ಚುತ್ತಿರುವ ಹೋರಾಟದ ಆಶಯ

ನಗರ ಪ್ರದೇಶದಿಂದ ಬೆಳೆದು ಬಂದ ಪ್ರಜ್ಞೆಯನ್ನು ಬಳಸಿ ಇಂದು ಸರಕಾರಿ ಭೂಮಿ, ಹೆಚ್ಚುವರಿ ಭೂಮಿ, ಕಾಮಗಾರಿ, ಕೂಲಿ, ಹಸಿರು ಕಾರ್ಡ್, ಸರಕಾರಿ ಇಲಾಖೆಯ ಕೆಲಸಗಳನ್ನು ಘೋಷಿಸಿ, ಅದಕ್ಕನುಗುಣವಾಗಿ ಕೂಲಿ ಬೇಡಿಕೆ (ಲೇಬರ್ ಕಾಂಟ್ರಾಕ್ಟ್) ವಸತಿ, ಮನೆ, ಮನೆಕಟ್ಟಲು ಹಣವನ್ನು ಆ ಫಲಾನುಭವಿಗಳಿಗೆ ಕೊಡುವುದು, ಸರಕಾರಿ ಸೌಲಭ್ಯಗಳನ್ನು ಗ್ರಾಮಸಭೆ ಮುಖಾಂತರ ಕೊಡುವುದು, ರಾಜಕೀಯ ಭ್ರಷ್ಟಾಚಾರ ತಡೆಯುವ ಬೇಡಿಕೆಗಳನ್ನು ನಿರ್ದಿಷ್ಟ ಸ್ಥಳೀಯ ಪರಿಸ್ಥಿತಿಯ ಆಧಾರದಲ್ಲಿ ದಲಿತರಿಗೆ ಮೀಸಲಾತಿಯ ಹಣ ಬಳಕೆ ಸೇರಿದಂತೆ ಸ್ಥಳೀಯ ಬೇಡಿಕೆಗಳನ್ನು ವಿಶೇಷವಾಗಿ ಗಮನಿಸಿ ಹೋರಾಟಕ್ಕೆ ಇಳಿಸಿದರೆ, ಗ್ರಾಮೀಣ ಬಡವರು ಬಹು ಸಂಖ್ಯೆಯಲ್ಲಿ ಗ್ರಾಮೀಣ ಶೋಷಕರನ್ನು ಅರಿಯಲು, ಅವರ ವಿರುದ್ಧವೇ ಹೋರಾಟಕ್ಕಿಳಿಯುವ ಮುಖಾಂತರ ಅವರ ಶ್ರಮವಿಲ್ಲದೆ ಗಳಿಸುವ ಆದಾಯವನ್ನು ತಡೆಯಲು ಬಂಡವಾಳಶಾಹಿ ಭೂಮಾಲಿಕ ರಾಜಕೀಯ ಕಾರ್ಯಕರ್ತರ ಬಲ ಕುಗ್ಗಿಸಲು, ಚುನಾವಣೆಯಲ್ಲಿ ದುಂದು ವೆಚ್ಚ ತಡೆಯಲು ಆ ಮುಖಾಂತರ ಎಡ ಚಳುವಳಿಯನ್ನು ಗಟ್ಟಿ ಗೊಳಿಸಲು ಹಾಗೂ ಮುಂದೆ ಕೊಂಡೊಯ್ಯಲು ಸಾಧ್ಯ.

ಹಿಂದಿಗಿಂತಲೂ ಗ್ರಾಮೀಣ ದುಡಿಯುವ ಜನರಲ್ಲಿ ಹೋರಾಟದ ಆಶಯ ಹೆಚ್ಚಾಗಿದೆ. ಬಂಡವಾಳಶಾಹಿ ರಾಜಕೀಯದಿಂದ ಬೇಸರಗೊಂಡಿದ್ದು ಅವರ ಸಮಸ್ಯೆಗಳು ತೀವ್ರಗೊಂಡಿದ್ದು ಹೋರಾಟಕ್ಕೆ ಭೂಮಿಕೆ ತಯಾರಾಗಿದೆ. ಎಡ ಪಕ್ಷದ ಕಾರ್ಯಕರ್ತರು ಸೂಕ್ತ ಬೇಡಿಕೆಗಳೊಂದಿಗೆ ಜನರತ್ತ ಹೋಗುವುದು ತುರ್ತಿನ ಅಗತ್ಯವಾಗಿದೆ.

○

ಅಭಿವೃದ್ಧಿ ಶುಲ್ಕ ವಿರೋಧಿ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲ

ಬೆಂಗಳೂರು ನಗರದ ಸುತ್ತ ಇರುವ 6 ನಗರ ಸಭೆಗಳ ವ್ಯಾಪ್ತಿಯ ನಿವಾಸಿಗಳ ಮೇಲೆ ಸರ್ಕಾರ ವಿಧಿಸಿರುವ ಅವಮಾನವೀಯ ಅಭಿವೃದ್ಧಿ ಶುಲ್ಕವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬೆಂಗಳೂರು ಜಿಲ್ಲಾ ಸಮಿತಿ ವಿರೋಧಿಸುತ್ತದೆ. ಪ್ರತಿ ಚದರ ಗಜಕ್ಕೆ ಸಂಗ್ರಹಿಸುತ್ತಿರುವ ರೂ. 100 ನ್ನು ಕಡಿಮೆ ಮಾಡಬೇಕು, ಅಭಿವೃದ್ಧಿ ಶುಲ್ಕದ ಪಾವತಿಗೆ ನೀಡಿರುವ ಮಾರ್ಚ್ 31ರ ಗಡುವನ್ನು ರದ್ದುಪಡಿಸಬೇಕು, ಶುಲ್ಕವನ್ನು ಕಂತುಗಳಲ್ಲಿ ಸಂಗ್ರಹಿಸಬೇಕು ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಲು ಪ್ರತಿ ಬಡಾವಣೆಯಲ್ಲೂ ಶಿಬಿರಗಳನ್ನು ನಡೆಸುವ ಮೂಲಕ ಖಾತಾ ನೊಂದಾವಣೆ ಮಾಡಬೇಕೆಂದು ಸಿಪಿಐ(ಎಂ) ಸರ್ಕಾರವನ್ನು ಒತ್ತಾಯಿಸಿದೆ.

ತೀವ್ರ ವಸತಿ ಸಮಸ್ಯೆ ಎದುರಿಸುತ್ತಿರುವ ಬೆಂಗಳೂರಿನ ಜನತೆಗೆ ಸರ್ಕಾರ ಯಾವುದೇ ಸೌಲಭ್ಯಗಳನ್ನು ಸೃಷ್ಟಿಸದ ಕಾರಣದಿಂದ ರೆವಿನ್ಯೂ ಪ್ರದೇಶಗಳಲ್ಲಿ ಜನತೆ ಸಾಲ-ಸೋಲ ಮಾಡಿ ಬದುಕಲು ಸೂರುಗಳನ್ನು ನಿರ್ಮಿಸಿ ಕೊಂಡಿದ್ದಾರೆ. ಆದರೆ ಇಂದು ಇವುಗಳನ್ನು ಅಭಿವೃದ್ಧಿ ಪಡಿಸುವ ನೆಪದಲ್ಲಿ ಸಾಮಾನ್ಯ ಜನರನ್ನು ಸುಲಿಗೆ ಮಾಡುವ ಕ್ರಮಗಳನ್ನು, ಬೆದರಿಕೆಗಳನ್ನು ಒಡ್ಡಲಾಗುತ್ತಿದೆ. ಸರ್ಕಾರದ ನಿಷ್ಕ್ರಿಯತೆಯಿಂದಾಗಿ ಉಂಟಾಗಿರುವ ಸಮಸ್ಯೆಗಳಿಗೆ ಸರ್ಕಾರವೇ ಜವಾಬ್ದಾರಿ ಹೊರಬೇಕು. ಪ್ರತಿ ಚದರ ಗಜಕ್ಕೆ 100 ರೂ.ಗಳನ್ನು ಮಾರ್ಚ್31 ರೊಳಗೆ ಕೊಡಬೇಕು. ಇಲ್ಲದಿದ್ದರೆ 200 ರೂ.ಗಳನ್ನು ಕೊಡಬೇಕು ಎಂಬ ಬೆದರಿಕೆಯ ತಂತ್ರಗಳನ್ನು ಆಡಳಿತ ನಡೆಸುವವರು ಕೈಬಿಡಬೇಕು ಎಂದು ಸಿಪಿಐ(ಎಂ) ಒತ್ತಾಯಿಸಿದೆ. ಮೇಲಿನ ಅಂಶಗಳ ಆಧಾರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಈಗಾಗಲೇ ಹಲವು ಹೋರಾಟಗಳನ್ನು ನಡೆಸುತ್ತಿದ್ದು, ಮಾರ್ಚ್ 10 ಕೆ.ಆರ್.ಪುರ, ಮಾರ್ಚ್ 11 ಟಿ.ದಾಸರಹಳ್ಳಿ, ಮಾರ್ಚ್ 13 ಬೊಮ್ಮನಹಳ್ಳಿ ಮತ್ತು ಮಹದೇವಪುರ ನಗರಸಭೆ ಕಚೇರಿಗಳ ಮುಂದೆ ಪ್ರತಿಭಟನಾ ಹೋರಾಟಗಳನ್ನು ನಡೆಸುತ್ತಿದ್ದು ಈ ಹೋರಾಟಕ್ಕೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಬೆಂಬಲ ನೀಡುವುದರ ಜೊತೆಗೆ ನಾಗರೀಕರು ಪಕ್ಷಭೇದ ಮರೆತು ಈ ಹೋರಾಟಗಳಲ್ಲಿ ಭಾಗವಹಿಸಬೇಕೆಂದು ವಿನಂತಿಸಿದೆ.

ಅಸಂಘಟಿತ ಕಾರ್ಮಿಕರ ಕುರಿತು ವಿಚಾರ ಸಂಕಿರಣ

ಬೆಳಗಾವಿಯ ರಾಜಾ ಲಖಮನಗೌಡ ಕಾನೂನು ಕಾಲೇಜಿನ ಉಚಿತ ಕಾನೂನು ಸೇವಾ ಸಂಸ್ಥೆಯ ಆಶ್ರಯದಲ್ಲಿ ಫೆ.23 ರಂದು 'ಅಸಂಘಟಿತ ಕಾರ್ಮಿಕರ ಹಿತರಕ್ಷಣೆ' ಕುರಿತು ವಿಚಾರ ಸಂಕಿರಣವೊಂದು ನಡೆಯಿತು.

ವಿಚಾರ ಸಂಕಿರಣ ಉದ್ಘಾಟಿಸಿದ ಕಾರ್ಮಿಕ ಮುಖಂಡರಾದ ವಿ.ಪಿ.ಕುಲಕರ್ಣಿ ಮಾತನಾಡಿ ಅಸಂಘಟಿತ ಕಾರ್ಮಿಕರ ಸ್ಥಿತಿಗತಿಗಳು ಹಾಗೂ ಅವರನ್ನು ಸಂಘಟಿಸುವಲ್ಲಿ ಇರುವ ತೊಂದರೆ ಮತ್ತು ತೊಡಕುಗಳನ್ನು ವಿವರಿಸಿದರು.

ಕಾರ್ಮಿಕ ಧುರೀಣ, ನ್ಯಾಯವಾದಿ ವಿ.ಆರ್.ವಿಜಯಕುಮಾರ್ ಮಾತನಾಡಿ ದೇಶದಲ್ಲಿ ಒಟ್ಟು 35 ಕೋಟಿ ಕಾರ್ಮಿಕರಿದ್ದು ಅವರಲ್ಲಿ ಕೇವಲ 3.5 ಕೋಟಿ ಕಾರ್ಮಿಕರು ಮಾತ್ರ ಸಂಘಟಿತರಾಗಿದ್ದಾರೆ. ಅಸಂಘಟಿತರ ರಕ್ಷಣೆಗಾಗಿ ಯಾವ ಕಾನೂನುಗಳೂ ಇಲ್ಲ ಎಂದು ವಿಷಾದಿಸಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ವಿ.ಎಸ್. ಜೋಷಿ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಸಿ.ಎಸ್.ಪಾಟೀಲ್, ಪ್ರೊ.ಕೆ.ಎಸ್.ಕೇರಳಿಕರ, ಕೆ.ಎಚ್.ಪಾಟೀಲ್ ಉಪಸ್ಥಿತರಿದ್ದರು.

ಸದನದೊಳಗೆ ಜಾಗಟೆ: ಸಭೆಗೆ ಗೌರವ ತರುವಂತದ್ದಲ್ಲ: ಸಿಪಿಐ(ಎಂ)

ಕರ್ನಾಟಕ ವಿಧಾನಸಭೆಯೊಳಗೆ ಚರ್ಚೆ ನಡೆದಿರುವಾಗ ಸದಸ್ಯರು ಜಾಗಟೆ ಬಾರಿಸುವಂತ ವರ್ತನೆಗಳು ಸದನದ ಗೌರವಕ್ಕೆ ಕಳಂಕ ತರುವಂತಹದ್ದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ. ಈ ಬಗ್ಗೆ ಸಭಾಧ್ಯಕ್ಷರು ಕಠಿಣ ಕ್ರಮವಹಿಸಬೇಕೆಂದು ಒತ್ತಾಯಿಸಲಾಗಿದೆ.

ಇಂತಹ ವರ್ತನೆಗಳು ಕೆಲವರಿಗೆ ಚೇತೋಹಾರಿ ಯಾಗಿರಬಹುದು. ಆದರೆ ಅತ್ಯಂತ ಕಳಪೆ ಸ್ಟಂಟ್‌ಗಳಿಂದ ಸದನದ ಗಂಭೀರತೆಯನ್ನು ಹಾಳುಮಾಡುವಂತಹದ್ದಾಗಿದೆ. ಜಾಗಟೆಗಳಂತಹ ವಸ್ತುಗಳನ್ನು ಸದನದೊಳಗೆ ಕೊಂಡೊಯ್ಯಲು ಅವಕಾಶವಾದುದಾದರೂ ಹೇಗೆ? ಇಲ್ಲಿ ಭದ್ರತಾ ಸಿಬ್ಬಂದಿ ಶಾಮೀಲಾಗಿರುವ ಸಂಭವ ಇದೆ. ಆದ್ದರಿಂದ ಇದನ್ನು ಬಗೆಗೊಳಿಸಬೇಕು ಹಾಗೂ ಸದಸ್ಯರೂ ಸಹ ಇಂತಹ ಸುಲಭ ಪ್ರಚಾರದ ಸ್ಟಂಟ್‌ಗಳನ್ನು ಕೈ ಬಿಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ಈ ಘಟನೆಗಳ ಬಗ್ಗೆ ಸಭಾಧ್ಯಕ್ಷರು ಮೂಕ ಪ್ರೇಕ್ಷಕರಾಗಿ ಕೂರುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟಿದೆ.

"ಭಸ್ಮಾಸುರರು, ಶಕುನಿಗಳು...." ಯಾರು?

'ಸಂಯುಕ್ತ ಕರ್ನಾಟಕ'ದ ಸಂಪಾದಕರಿಗೆ ಬಹಿರಂಗ ಪತ್ರ

ಸಿ.ಆರ್. ಭಟ್

ಮಾನ್ಯರೇ,

ನೀವು 5-3-98ರ ಸಂ.ಕ.ದಲ್ಲಿ "ಭಸ್ಮಾಸುರರು ಇದ್ದಾರೆ, ಎಚ್ಚರಿಕೆ" ಎಂಬ ಸಂಪಾದಕೀಯದಲ್ಲಿ ಅಮೂಲ್ಯವಾದ ಪತ್ರಿಕಾ ವೃತ್ತಿಯ ಮರ್ಯಾದೆಯನ್ನು ಮೀರಿದಂತಿದೆ. ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್‌ರನ್ನು ಶಕುನಿ ಎಂದು ಏಕವಚನದಲ್ಲಿ ಅವಹೇಳನ ಮಾಡಿ, ಸುರ್ಜಿತರ ತಲೆಯಲ್ಲಿ ಬರಿ ಕುತಂತ್ರ, ಕುಯುಕ್ತಿಗಳೇ ತುಂಬಿದೆ... ಅವರು ಮಾಡದೆ ಇರುವ ಕುಕೃತ್ಯಗಳಿಲ್ಲ, ಕುತಂತ್ರಗಳೆಂಬುದಿಲ್ಲ... ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಚಾಳಿ ಅವರಲ್ಲಿ ರಕ್ತಗತವಾಗಿದೆ... ಸಂಯುಕ್ತ ರಂಗದಲ್ಲಿದ್ದಷ್ಟು ದಿನ ಈ ಶಕುನಿಯದೇ ದರಬಾರು.. ಈಗ ಈ ಶಕುನಿ ಮತ್ತೆ ಬಂದಿದ್ದಾನೆ..... ಎಂದು ನೀವು ಆಪಾದಿಸಿರುವುದು ಖಂಡನೀಯವಾಗಿದೆ. ಇದರಿಂದಾಗಿ ಸಿ.ಪಿ.ಐ(ಎಂ) ಮತ್ತು ಅದರ ಮಿತ್ರ ಪಕ್ಷಗಳ ಅಸಂಖ್ಯಾತ ಸದಸ್ಯರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ, ಮತದಾರರಿಗೆ ಅವಮಾನ ಮಾಡಿದಂತಾಗಿದೆ.

ಅಕಾಲಿದಳವು ಸುರ್ಜಿತ್‌ರನ್ನು ಪಕ್ಷದಿಂದ ಮಾತ್ರವಲ್ಲ ರಾಜ್ಯದಿಂದಲೇ ಹೊರ ಹಾಕಿತು ಎಂಬ ನಿಮ್ಮ ಆಪಾದನೆಯೂ ನಿರಾಧಾರ ವಾಗಿದೆ.

ಪಂಜಾಬಿನ ಬಡ ರೈತ ಕುಟುಂಬದಲ್ಲಿ 1916ರಲ್ಲಿ ಜನಿಸಿದ ಸುರ್ಜಿತ್ ತನ್ನ 14-15ನೇ ವರ್ಷದ ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡು ಶಾಲೆಯಿಂದ ತೆಗೆಯಲ್ಪಟ್ಟರು. ಭಗತ್ ಸಿಂಗ್‌ರ "ನವ ಜವಾನ್ ಭಾರತ ಸಭಾ"ದ ಸದಸ್ಯರಾಗಿ ಹೋಶಿಯಾರ್‌ಪುರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮೇಲಿದ್ದ ಬ್ರಿಟಿಷ್ ಧ್ವಜವನ್ನು ಕಿತ್ತೊಗೆದು ಭಾರತದ ರಾಷ್ಟ್ರಧ್ವಜವನ್ನು ಏರಿಸಿ ಅಲ್ಪ ಪ್ರಾಯದವರಿದ್ದಾಗಲೇ ದೀರ್ಘ ಕಾಲ ಜೈಲುವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಕಮ್ಯುನಿಸ್ಟ್ ನಾಯಕರ ವಿರುದ್ಧ ಮೀರತ್ ಪಿತೂರಿ ಮೊಕದ್ದಮೆಯ ವಿಚಾರಣೆ ನಡೆಯುತ್ತಿದ್ದಾಗ (1929-33) ಸುರ್ಜಿತ್ ಕಮ್ಯುನಿಸ್ಟ್ ಚಳುವಳಿಯಲ್ಲಿ ಒಲವು ಮೂಡಿಸಿಕೊಂಡರು. ಮುಂದೆ ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ಬ್ರಿಟಿಷರ ಮತ್ತು ನಂತರ ಕಾಂಗ್ರೆಸ್ ಆಳ್ವಿಕೆಗಳ ಕಾಲದಲ್ಲಿ ಮೇಲಿಂದ ಮೇಲೆ ಸುರ್ಜಿತ್ ಜೈಲು ಹಾಗೂ ಭೂಗತವಾಸ, ಲಾಠಿ ಏಟು, ಕಷ್ಟ ಕಾರ್ಪಣ್ಯ ಗಳನ್ನು ಎದುರಿಸುತ್ತಾ ಕಮ್ಯುನಿಸ್ಟ್ ಆಂದೋಳನದ ಮುಂಚೂಣಿಯಲ್ಲಿದ್ದರು. ಪಂಜಾಬಿನಲ್ಲಿ ಕಮ್ಯುನಿಸ್ಟ್ ಚಳುವಳಿ ಕಟ್ಟಿಬೆಳೆಸುವುದರಲ್ಲಿ ಸುರ್ಜಿತ್ ಮಹತ್ವದ ಪಾತ್ರ ವಹಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ಪಂಜಾಬಿನಲ್ಲಿ ಪ್ರತ್ಯೇಕತಾ, ವಿಚ್ಛಿದ್ರಕಾರಿ, ಭಯೋತ್ಪಾದಕ ಶಕ್ತಿಗಳ ವಿರುದ್ಧ ಸಿ.ಪಿ.ಐ.(ಎಂ) ಕಾರ್ಯಕರ್ತರು ಅಪಾರ ತ್ಯಾಗ ಬಲಿದಾನಗಳಿಂದ ರಾಷ್ಟ್ರೀಯ ಏಕತೆಗಾಗಿ ಹೋರಾಡಿದ್ದರು. 1995ರಲ್ಲಿ ಸಿ.ಪಿ.ಐ(ಎಂ)ನ 15ನೇ ಮಹಾ ಅಧಿವೇಶನ ಚಂಡಿಗಢದಲ್ಲಿ ಯಶಸ್ವಿಯಾಗಿ ನಡೆದು ರಾಷ್ಟ್ರ-ಅಂತರಾಷ್ಟ್ರೀಯ ಗಮನ ಸೆಳೆಯಿತು. ರಾಜ್ಯದ ಪ್ರಮುಖ ಪತ್ರಿಕೆಯ ಸಂಪಾದಕರಾದ ನಿಮಗೆ ಇವೆಲ್ಲವುಗಳೂ ತಿಳಿಯದೇ ಇರದು.

ಸುರ್ಜಿತ್ ಸಿ.ಪಿ.ಐ.(ಎಂ) ಮತ್ತು ಸಂಯುಕ್ತ ರಂಗದ ನಾಯಕರಾಗಿ ರಾಷ್ಟ್ರದ ರಾಜಕೀಯದಲ್ಲಿ 82 ವರ್ಷದ ಹಿರಿಯ ಮುತ್ಸದ್ದಿಯಾಗಿ ಏನು ಬೇಳೆ ಬೇಯಿಸಿ ಕೊಳ್ಳುತ್ತಿದ್ದಾರೆ? ಐ.ಎಂ.ಎಫ್., ಜಾಗತಿಕ ಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆಗಳ ಕಪಿಮುಷ್ಠಿಯಿಂದ ದೇಶದ ಸ್ವಾವಲಂಬನೆಯನ್ನು, ಸಾರ್ವಭೌಮತೆಯನ್ನು ರಕ್ಷಿಸಲು ಅವರು ಹೋರಾಡುತ್ತಿದ್ದಾರೆ. ಪ್ರತ್ಯೇಕತಾವಾದಿ, ವಿಚ್ಛಿದ್ರಕಾರಿ, ಭಯೋತ್ಪಾದಕ ಶಕ್ತಿಗಳನ್ನು ಮತ್ತು ಕೋಮುವಾದಿ ಬಿ.ಜೆ.ಪಿ.-ಸಂಘ-ಪರಿವಾರಗಳ ಫ್ಯಾಸಿಸ್ಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಿ ರಾಷ್ಟ್ರೀಯ ಏಕತೆ, ಸಮಗ್ರತೆ, ಕೋಮು ಸೌಹಾರ್ದತೆ ಕಾಯ್ದುಕೊಳ್ಳಲು ಶ್ರಮಿಸುತ್ತಿದ್ದಾರೆ. ಸಂವಿಧಾನದಲ್ಲಿ ಪ್ರಸ್ತಾಪಿಸಿರುವ ಜಾತ್ಯಾತೀತತೆ, ಪ್ರಜಾಪ್ರಭುತ್ವ ಒಕ್ಕೂಟ ಪದ್ಧತಿ, ಸಾಮಾಜಿಕ ನ್ಯಾಯ, ಸಮಾಜವಾದ, ಮೊದಲಾದ ಆದರ್ಶಗಳನ್ನು ಸಫಲಗೊಳಿಸಲು ಸೇವೆ ಸಲ್ಲಿಸುತ್ತಿದ್ದಾರೆ. ಬಡರೈತರ, ಕಾರ್ಮಿಕರ, ಜನಸಾಮಾನ್ಯರ ಪರವಾದ ಆರ್ಥಿಕ ನೀತಿಗಳನ್ನು ರೂಪಿಸಿ ಜಾರಿಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ರಾಜಕೀಯದಲ್ಲಿ ಅಪರಾಧೀಕರಣ ಮತ್ತು ಉನ್ನತ ಮಟ್ಟಗಳಲ್ಲಿ ಭ್ರಷ್ಟಾಚಾರ ತಡೆ ಗಟ್ಟಲು ಕಾನೂನು ಕ್ರಮಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಈ ದಿಸೆಯಲ್ಲಿ ಸಿ.ಪಿ.ಐ.(ಎಂ) ಕಾಲಕಾಲಕ್ಕೆ ಸರಿಯಾಗಿ ತನ್ನ ಕಾರ್ಯವ್ಯೂಹಗಳನ್ನು ಹಾಗೂ ಕಾರ್ಯತಂತ್ರಗಳನ್ನು ರೂಪಿಸಿ ಜ್ಯಾರಿಗೊಳಿಸುತ್ತಿದೆ. ಪ.ಬಂಗಾಳ, ತ್ರಿಪುರಾ, ಕೇರಳ ರಾಜ್ಯಗಳಲ್ಲಿ ಸಿ.ಪಿ.ಐ(ಎಂ) ಮತ್ತು ಅವರ ಮಿತ್ರ ಪಕ್ಷಗಳ ಎಡರಂಗ ಸರಕಾರಗಳು ದೀರ್ಘಕಾಲದಿಂದ ಜನಪ್ರಿಯ ಹಾಗೂ ಸ್ಥಿರ ಸರಕಾರಗಳನ್ನು ದೇಶಕ್ಕೇ ಮಾದರಿಯಾಗುವಂತೆ ನಡೆಸಿಕೊಂಡು ಬಂದಿವೆ. ಈ ಸಲದ ಚುನಾವಣೆಯಲ್ಲಿಯೂ ಈ ರಾಜ್ಯಗಳಲ್ಲಿ ಎಡರಂಗಗಳ ಬಲ ಭದ್ರವಾಗಿರುವುದನ್ನು ನೀವು ಗಮನಿಸಬಹುದು.

ಸಿ.ಪಿ.ಐ(ಎಂ)ನ, ಸುರ್ಜಿತ್‌ರ ತಂತ್ರ ಗಳೆಲ್ಲವೂ ನಿಮಗೆ ಶಕುನಿಯ ಕುತಂತ್ರಗಳಾಗಿ, ಕುಯುಕ್ತಿಗಳಾಗಿ, ಪರಿಸ್ಥಿತಿಯ ದುರುಪಯೋಗವಾಗಿ ಕಾಣುತ್ತಿವೆ. 1996ರಲ್ಲಿ ಪ.ಬಂಗಾಳ, ತ್ರಿಪುರಾ, ಅಸ್ಸಾಂ, ಬಿಹಾರ್, ಜಮ್ಮು-ಕಾಶ್ಮೀರ, ಆಂಧ್ರ ಪ್ರದೇಶ, ಕರ್ನಾಟಕ, ತಮಿಳುನಾಡು, ಪಾಂಡಿಚೇರಿ, ಕೇರಳ ರಾಜ್ಯ ಗಳಲ್ಲಿ ಜನಪ್ರಿಯ ಹಾಗೂ ಸ್ಥಿರ ಸರಕಾರಗಳನ್ನು ನಡೆಸುತ್ತಿದ್ದ 13 ಪಕ್ಷಗಳ ಮುಖಂಡರೂ, ಮುಖ್ಯಮಂತ್ರಿಗಳೂ ಇರುವ ಮತ್ತು ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಹಾಗೂ ಕೋರ್ ಸಮಿತಿಯ ಮೂಲಕ ಸಾಮೂಹಿಕ ನಾಯಕತ್ವದ ಆಧಾರದ ಸಂಯುಕ್ತ ರಂಗ ನಿಮಗೆ 'ಕುಖ್ಯಾತ ರಂಗ'ವಾಗಿ ಕಾಣುತ್ತಿದೆ. ಆದರಲ್ಲಿರುವ ರಾಷ್ಟ್ರನಾಯಕರೆಲ್ಲರೂ ದುಶ್ಯಾಸನರಾಗಿ, ದುರ್ಯೋಧನರಾಗಿ, ಯಾವುದೇ ನೀತಿ-ತತ್ವ-ಸಿದ್ಧಾಂತಗಳಿಗೆ ಬದ್ಧರಾಗದಿರುವವರಾಗಿ ಕಾಣುತ್ತದೆ. ಆಗ ಬಿ.ಜೆ.ಪಿ. ಸಂಸತ್ತಿನಲ್ಲಿ ಬಹುಮತ ಸಾಬೀತು ಪಡಿಸಲು ವಿಫಲವಾಗಿ 13 ದಿನಗಳಲ್ಲಿಯೇ ಅಧಿಕಾರ ಕಳೆದುಕೊಂಡಾಗ ಕಾಂಗ್ರೆಸ್ ತನ್ನ ಬಲ ಕಳೆದುಕೊಂಡು ಸರಕಾರ ರಚಿಸದೆ ಸಂಯುಕ್ತ ರಂಗವೇ ಸರಕಾರ ರಚಿಸಲು ನಿಶರತ್ತಾಗಿ ಬೆಂಬಲಿಸಿದಾಗ, ಅನಿವಾರ್ಯವಾಗಿ ಸಂವಿಧಾನ ಬದ್ಧವಾಗಿ ಸಂಯುಕ್ತ ರಂಗದ ನಾಯಕರನ್ನು ಪ್ರಧಾನಿಯಾಗಲು ಆಮಂತ್ರಿಸಿದ ರಾಷ್ಟ್ರಾಧ್ಯಕ್ಷರನ್ನೇ ತರಾಟೆಗೆ ತೆಗೆದುಕೊಂಡು ಅವರನ್ನು ಅವಮಾನಗೊಳಿಸುವ ದುಃಸ್ಸಾಹಸಕ್ಕೆ ನೀವು ಮುಂದಾದಿರಿ. ಸಂಯುಕ್ತ ರಂಗ ಮೊದಲಿನಿಂದ ಇದುವರೆಗೂ ತನ್ನ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿದ್ದರೂ, ದಕ್ಷ ಹಾಗೂ ಸ್ವಚ್ಛ ಸರಕಾರ ನೀಡಿದ್ದರೂ ಅದರ ಸರಕಾರ ಬಿದ್ದು ಹೋದುದಕ್ಕೆ ವಿನಾಕಾರಣವಾಗಿ ಕಾಂಗ್ರೆಸ್ ಎರಡು ಬಾರಿ ತನ್ನ ಬೆಂಬಲ ಹಿಂತೆಗೆದುಕೊಂಡುದೇ ಕಾರಣವಾದರೂ, ನಿಮ್ಮ ಟೀಕಾಸ್ತ್ರಗಳನ್ನೆಲ್ಲಾ ಸಂಯುಕ್ತರಂಗದ ಮೇಲೆಯೇ ಪ್ರಯೋಗಿಸುತ್ತಿರುವಿರಿ.

ನೀವು ಯಾರ ಪರವಾಗಿ ಈ ರೀತಿ ಮೈಪರಚಿಕೊಂಡು ನಿಮ್ಮ ಲೇಖನವನ್ನು ಹರಿಯ ಬಿಟ್ಟಿರುವಿರಿ ಎಂಬುದು ದಿನಾಂಕ 5-3-98ರ ನಿಮ್ಮ ಪತ್ರಿಕೆಯ ಪುಟ 11ರಲ್ಲಿ ಪ್ರಕಟವಾದ 'ನಮಗೊಂದು ಸ್ಥಿರವಾದ ಸರಕಾರ ಕೊಡಿ-ರಾಜಕೀಯ ಪಕ್ಷಗಳಿಗೆ, ಕೈಗಾರಿಕೋದ್ಯಮಿಗಳ ಮನವಿ" ಎಂಬ ಸುದ್ದಿಯಲ್ಲಿ ಸ್ಪಷ್ಟವಾಗಿದೆ. "ಈ ಬಾರಿ ಖಚಿತವಾಗಿ ಕೇಂದ್ರದಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬರುವು ದೆಂದು ನಂಬಿದ್ದ ಮುಂಬೈನ ಬಹುತೇಕ ಭಾರೀ ಕೈಗಾರಿಕೋದ್ಯಮಿಗಳು, ಇದೀಗ ಆ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗದಿರುವ ಬಗ್ಗೆ ನಿರಾಶೆ ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ರಿಲೆಯನ್ಸ್ ಕೈಗಾರಿಕಾ ಸಮೂಹ ಬಿ.ಜೆ.ಪಿ.ಯನ್ನು ಅಧಿಕಾರಕ್ಕೆ ತರಲು ಸಾಕಷ್ಟು ನೆರವಾಗಿತ್ತಾ ದರೂ, ಈಗ ಅದರ ಶ್ರಮ ವ್ಯರ್ಥವಾಗಿ ಮಹಾರಾಷ್ಟ್ರದಲ್ಲಿ ಆ ಪಕ್ಷಕ್ಕೆ ಶೋಚನೀಯ ಸೋಲಾಗಿದೆ. ಮೊದಲಿನಿಂದಲೂ ರಿಲೆಯನ್ಸ್ ಕಂಪನಿಯೊಂದಿಗೆ ಸುದೀರ್ಘ ಒಡನಾಟ ಇಟ್ಟುಕೊಂಡಿರುವ ಬಿ.ಜೆ.ಪಿ. ಮುಖಂಡ ಪ್ರಮೋದ್ ಮಹಾಜನ್ ಸೋತಿರುವುದು ಆ ಪಕ್ಷಕ್ಕೆ ನಷ್ಟ ಉಂಟು ಮಾಡಿದೆ. ಅಲ್ಲದೆ ಮುಂಬೈ-ಪುಣೆ ಸುತ್ತ ಮುತ್ತಲಿನ ಕೈಗಾರಿಕೋದ್ಯಮಿಗಳಿಗೆ ತೀವ್ರ ಭ್ರಮನಿರಸನ ಉಂಟು ಮಾಡಿದೆ ಎಂದು ಈ ಸುದ್ದಿಯಲ್ಲಿ ತಿಳಿಸಲಾಗಿದೆ. ಈ ನಿರಾಶೆಯಲ್ಲಿ ನೀವೂ ಪಾಲುಗೊಂಡಂತಿದೆ. ಬಿ.ಜೆ.ಪಿ. ಯಾರ ಬೇಳೆ ಬೇಯಿಸುತ್ತಿದೆ ಮತ್ತು ಸಿ.ಪಿ.ಐ.(ಎಂ)ನ ಸುರ್ಜಿತ್ ಯಾರ ಬೇಳೆ ಬೇಯಿಸುತ್ತಿದ್ದಾರೆ ಎಂದು ನೀವೇ ಹೇಳಬೇಕು.

ಈ ಸಲ ಬಿ.ಜೆ.ಪಿ. 178 ಸ್ಥಾನಗಳನ್ನಷ್ಟೆ ಪಡೆದಿದ್ದು, ಭ್ರಷ್ಟಾಚಾರದ ಹಲವು ಹಗರಣ ಗಳಲ್ಲಿ ಆಪಾದಿತರಾದ ಜಯಲಲಿತಾ ಮತ್ತು ಸುಖರಾಂ ರಂತಹವರ ಪಕ್ಷಗಳೂ ಸೇರಿದಂತೆ ಪಕ್ಷಾಂತರಿಗಳ ಹಾಗೂ ಭಿನ್ನಮತೀಯರ ಸುಮಾರು 20 ಪಕ್ಷಗಳ ಮತ್ತು ಹಲವಾರು ಸ್ವತಂತ್ರ ಸಂಸತ್ ಸದಸ್ಯರ ಬೆಂಬಲ ಪಡೆಯುತ್ತಿರುವುದೂ ಉ.ಪ್ರದೇಶದಂತೆಯೇ ಕೇಂದ್ರದಲ್ಲಿಯೂ ಎಂ.ಪಿ.ಗಳ 'ಕುದುರೆ ವ್ಯಾಪಾರ' ನಡೆಸುತ್ತಿರುವುದೂ, ಇನ್ನೂ ಬಹುಮತ ಗಳಿಸದೇ ಸರಕಾರ ರಚಿಸಲು ಹಕ್ಕು ಚಲಾಯಿಸುತ್ತಿರುವುದೂ... 'ರಾಜತಂತ್ರ' 'ಕೃಷ್ಣಸಂಧಾನ'ಗಳೆಂದು ನಿಮ್ಮಿಂದ ಮರ್ಯಾದೆ ಪಡೆಯುತ್ತಿವೆ. ಬಿ.ಜೆ.ಪಿ. ಮತ್ತು ಅದರ ಮಿತ್ರ ಪಕ್ಷಗಳ ರಂಗವು ನಿಮಗೆ ನೀತಿ-ತತ್ವ-ಸಿದ್ಧಾಂತಗಳಿಗೆ ಬದ್ಧರಾಗಿರುವವರ ಜನಪ್ರಿಯ ಹಾಗೂ ಸ್ಥಿರಸರ್ಕಾರ ನೀಡುವ ರಂಗವಾಗಿ ಕಾಣುತ್ತಿದೆ. ಈ ರಂಗದಲ್ಲಿರು ವವರೆಲ್ಲರೂ ನಿಮಗೆ ಧರ್ಮರಾಯರಂತೆ, ದ್ರೌಪದಿಯರಂತೆ, ಶ್ರೀರಾಮರಂತೆ, ಶ್ರೀಕೃಷ್ಣರಂತೆ ಕಾಣುತ್ತಾರೆ. ಈ ಸಲ ಸಿ.ಪಿ.ಐ.(ಎಂ)ಗೆ ಟಾಟಾ ಕೈಗಾರಿಕಾ ಗುಂಪಿನಿಂದ ಚುನಾವಣೆಗಾಗಿ ರೂ.19 ಲಕ್ಷ ದೇಣಿಗೆ ಬಂದುದನ್ನು ತಿರಸ್ಕರಿಸಿರುವುದೂ, ಚುನಾವಣಾ ನಿಧಿಗಾಗಿ ಅದು ತನ್ನ ಆರು ಲಕ್ಷ ಸದಸ್ಯರನ್ನೂ, ಮೂರು ಕೋಟಿ ಸಾಮೂಹಿಕ ಸಂಘಟನೆ ಗಳ ಸದಸ್ಯರನ್ನೂ, ಅಪಾರ ಅಭಿಮಾನಿಗಳನ್ನೂ ಅವಲಂಬಿಸಿ ರುವುದೂ ನಿಮಗೆ ಕುತಂತ್ರವಾಗಿ ಕಾಣುತ್ತಿದೆ. ಬಿ.ಜೆ.ಪಿ. ಧುರೀಣ ರಾದ ಅಡ್ವಾಣಿ, ವಾಜಪೇಯಿ ಅವರ ಹುಟ್ಟು ಹಬ್ಬಗಳಿಗಾಗಿ, ರಥಯಾತ್ರೆಗಳಿಗಾಗಿ, ಚುನಾವಣಾ ಜಾಹೀರಾತುಗಳಿಗಾಗಿ ದೇಶ ವಿದೇಶಗಳ ದೊಡ್ಡ ಕೈಗಾರಿ ಕೋದ್ಯಮಿಗಳು ಸಾವಿರಾರು ಕೋಟಿ ರೂ. ದೇಣಿಗೆ ನೀಡುತ್ತಿರುವುದನ್ನು ಆದರ 'ರಾಜತಾಂತ್ರಿಕತೆ'ಯ ಸಫಲತೆ ಎಂದು ನೀವು ಕೊಂಡಾಡುತ್ತೀರಿ.

ಸಂಯುಕ್ತ ರಂಗದ ಬೆಂಬಲವನ್ನು ನಂಬಿ ಕಾಂಗ್ರೆಸ್ ಸರಕಾರ ರಚಿಸಿದರೆ ಭಸ್ಮಾಸುರರನ್ನು ಆಲಂಗಿಸಿದಂತಾಗುವುದು ಎಂದು ನೀವು ಎಚ್ಚರಿಸಿರುವಿರಿ. ಆದರೆ, ಬಿ.ಜೆ.ಪಿ., ಸಂಘ-ಪರಿವಾರದವರು ಮಹಾತ್ಮಾ ಗಾಂಧಿಯನ್ನು ಕೊಲೆ ಮಾಡಿ, ಬಾಬ್ರಿ ಮಸೀದಿ ಧ್ವಂಸ ಮಾಡಿ, ಈದ್ಗಾ ಮೈದಾನದಂತಹ ನೂರಾರು ವಾದ ವಿವಾದಗಳನ್ನೆಬ್ಬಿಸಿ ದೇಶದಾದ್ಯಂತ ಕೋಮು ದಳ್ಳುರಿ ಬಡಿದೆಬ್ಬಿಸಿ ಭಸ್ಮಾಸುರರಾದುದನ್ನೂ ನೀವು ಈಗ ಜಾಣ್ಮೆಯಿಂದ ಮರೆ ಮಾಚುತ್ತಿದ್ದೀರಿ. ಸದ್ಯ ಬಿ.ಜೆ.ಪಿ.ಯ ಉದಾರ ಮುಖವಾಡವನ್ನು ನಂಬಿ ಆದರ ಮಿತ್ರ ಪಕ್ಷಗಳು ಬಿ.ಜೆ.ಪಿ. ಕೇಂದ್ರದಲ್ಲಿ ಅಧಿಕಾರಕ್ಕೆ ಬರುವಂತೆ ಮಾಡಿದರೆ ದೇಶದ ಏಕತೆ, ಸಮಗ್ರತೆ, ಸೌಹಾರ್ದತೆ ಅಳಿದು ಭಸ್ಮವಾದೀತು ಎಂದು ನಾವು ನಿಮಗೆ ಎಚ್ಚರಿಕೆ ನೀಡುತ್ತೇವೆ. ಆದಷ್ಟು ಮಿತ್ರ ಪಕ್ಷಗಳನ್ನು ತನ್ನ ತೆಕ್ಕೆಯಲ್ಲಿ ಹಾಕಿ ಕೊಳ್ಳಲು ಬಿ.ಜೆ.ಪಿ. ಉದಾರತೆಯ ಮುಖವಾಡ ಧರಿಸಲು, ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದ ಸಂವಿಧಾನದ ಕಲಂ 370ರ ರದ್ದತಿ, ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಸ್ಥಳದಲ್ಲಿಯೇ ರಾಮ ಮಂದಿರ ಕಟ್ಟುವುದು, ಸಮಾನ ನಾಗರೀಕ ಸಂಹಿತೆ ಜ್ಯಾರಿಗೊಳಿಸು ವುದು ಮುಂತಾದ ಹಿಂದುತ್ವವಾದದ ಕಾರ್ಯ ಕ್ರಮಗಳನ್ನು ಸಧ್ಯ ಮರೆಮಾಚಲು ಆರ್.ಎಸ್. ಎಸ್.ನ ವರಿಷ್ಠರಾದ ಕೆ.ಸಿ.ಸುದರ್ಶನ ಮತ್ತು ಬಿ.ಜೆ.ಪಿ. ಮುಖಂಡರಾದ ಮುರಳಿ ಮನೋಹರ ಜೋಶಿ ಹಾಗೂ ಗೋವಿಂದಾಚಾರ್ಯ ಇವರೊಳಗೆ ಮಾತುಕತೆ ನಡೆದು ನಿರ್ಧಾರಕ್ಕೆ ಬರಲಾಗಿದೆಯೆಂದು ದಿ 6-3-98ರ ಇಂಡಿಯನ್ ಎಕ್ಸ್‌ಪ್ರೆಸ್‌ನ ಮುಖ ಪುಟದಲ್ಲಿ ಪ್ರಕಟವಾಗಿರುವುದನ್ನು ನೀವು ಗಮನಿಸಬೇಕು. ಬಿ.ಜೆ.ಪಿ. ರಂಗದ ಸರಕಾರ ನಡೆಸಲು ಆರ್.ಎಸ್.ಎಸ್.ನ ಕೋರ್ ಸಮಿತಿ ಒಂದು ರಚಿತವಾಗಿರುವುದನ್ನೂ ನೀವು ಗಮನಿಸ ಬೇಕು.(ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕೀಯ : 10-3-1998.)

ಬಿಜೆಪಿಗೆ, ಅದರ ಹದಿನೆಂಟು ಮಿತ್ರಪಕ್ಷಗಳೊಡಗೂಡಿಯೂ ಜನತೆ ಸ್ಪಷ್ಟ ಬಹುಮತ ನೀಡದಿದ್ದರೂ 'ಬಿಜೆಪಿಗೊಂದು ಅವಕಾಶ ಕೊಡಬೇಕು' ಎಂಬ ರಾಗ ಈಗ ಮಾಧ್ಯಮಗಳಲ್ಲಿ ವ್ಯಾಪಕವಾಗಿದೆ. ಶಿವಸೇನೆಯ ಬಾಳಾಠಾಕ್ರೆಯವರು ಅಂತರ್ಯುದ್ಧದ ಬೆದರಿಕೆ ಹಾಕಿದ್ದರೆ, ಹಲವು ಸಂಪಾದಕರುಗಳು, ಪತ್ರಕರ್ತರು ಅದನ್ನು ಇನ್ನೊಂದು ರೀತಿಯಲ್ಲಿ ಮಾಡುತ್ತಿದ್ದಾರೆ - ಬೇರೆ ರಾಜಕೀಯ ಪಕ್ಷಗಳು ತಮ್ಮ ಕಾನೂನುಬದ್ಧ ರಾಜಕೀಯ ಚಟುವಟಿಕೆಗಳನ್ನು ಕೈಬಿಟ್ಟು ಬಿಜೆಪಿಗೆ ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ಅವರು 'ಭಸ್ಮಾಸುರರು, 'ಶಕುನಿಗಳು' ಇತ್ಯಾದಿ ಇತ್ಯಾದಿ!! ಎಂತಹಾ ಪ್ರಜಾಪ್ರಭುತ್ವ!!

ಬಿಜೆಪಿ ವೆಬ್‌ಸೈಟಿನಲ್ಲಿ ಕ್ರಿಮಿನಲ್ ಸಂದೇಶಗಳು!

ಬುದ್ಧಿಜೀವಿಗಳ ಆತಂಕ

ಬಿಜೆಪಿಯ ಅಧಿಕೃತ ವೆಬ್‌ಸೈಟಿನ ಮೂಲಕ ದ್ವೇಷ ಹರಡಿಸಲಾಗುತ್ತಿದೆ ಎಂದು ಕೆಲವು ಬುದ್ಧಿಜೀವಿಗಳು ಫೆಬ್ರವರಿ 24, 1998 ರಲ್ಲಿ ಭಾರತದ ಚುನಾವಣಾ ಆಯೋಗಕ್ಕೆ ಒಂದು ಪತ್ರ ಕಳಿಸಿದ್ದಾರೆ. ಆ ಪತ್ರದ ಒಕ್ಕಣಿಕೆ ಹೀಗಿದೆ.

"ಬಿಜೆಪಿಯ ಅಧಿಕೃತ ವೆಬ್‌ಸೈಟಿನಲ್ಲಿ ಬುಲೆಟಿನ್ ಬೋರ್ಡ್‌ನಲ್ಲಿ ಹಾಕಲಾಗುತ್ತಿರುವ ದ್ವೇಷದ ಸಂದೇಶಗಳಿಂದ ನಾವು ಬಹಳ ಆತಂಕಿತರಾಗಿದ್ದೇವೆ. ಈ ಸಂದೇಶಗಳು ತನ್ನವಲ್ಲ ಎಂದು ಬಿಜೆಪಿ ಹೇಳುತ್ತಿದೆ ಯಾದರೂ ಅತ್ಯಂತ ವಿಚ್ಛಿದ್ರಕಾರಿ ಮಾತ್ರವಲ್ಲ, ಬಹಿರಂಗವಾಗಿ ಕ್ರಿಮಿನಲ್ ಸ್ವರೂಪದ ಸಂದೇಶಗಳನ್ನು ಹಾಕಲು ಬಿಡಬಹುದೇ?

ಉದಾಹರಣೆಗೆ, ಫೆಬ್ರವರಿ 15 ರಂದು ಒಬ್ಬ ಧರ್ಮೇಶ್ ಎಂಬಾತ ಕೊಯಮತ್ತೂರು ಬಾಂಬ್ ಸ್ಫೋಟಕ್ಕೆ ಮುಸ್ಲಿಮರ ವಿರುದ್ಧ ಪ್ರತೀಕಾರಕ್ಕೆ ಕರೆ ನೀಡುತ್ತಾ 'ಒಬ್ಬ ಹಿಂದೂವನ್ನು ಕೊಂದರೆ 100 ಮುಸ್ಲಿಮರನ್ನು ಕೊಲ್ಲಬೇಕು' ಎಂದು ಹಿಂದೂಗಳಿಗೆ ಕರೆ ನೀಡಿದ್ದಾನೆ. ಪ್ರತೀಕಾರದಲ್ಲಿ ಆಸಕ್ತಿಯಿದ್ದವರು ತನ್ನನ್ನು ಸಂಪರ್ಕಿಸಬೇಕು ಎಂದೂ ಹೇಳಿದ್ದಾನೆ. ಈ ಮೊದಲು ಈ ಬಿಜೆಪಿ ಬುಲೆಟಿನ್ ಬೋರ್ಡಿನಲ್ಲಿ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರನ್ನು ದೇಶಬಿಟ್ಟು ಹೋಗಬೇಕೆಂಬ, ಇತರ ಪಕ್ಷಗಳ ಮುಖಂಡರನ್ನು ಸೂಳೆಮಕ್ಕಳು, ವಿದೇಶಿ ನಾಯಿಗಳು ಎಂದೆಲ್ಲಾ ಕರೆಯುವ ದ್ವೇಷ ಸಂದೇಶಗಳು ಇರುತ್ತಿದ್ದವು. ಮೇಲೆ ಹೇಳಿದ ಸಂದೇಶ ಇದಕ್ಕಿಂತಲೂ ಬಹಳ ಮುಂದೆ ಹೋಗಿದೆ.

ಇಂತಹ ಕ್ರಿಮಿನಲ್ ಸಂದೇಶಗಳನ್ನು ಹಾಕುವಾಗ ಸಂದೇಶಗಳನ್ನು ಈ ಬುಲೆಟಿನ್ ಬೋರ್ಡಿನಲ್ಲಿ ಹಾಕುವವರ ಅಭಿಪ್ರಾಯಗಳಿಗೆ ತಾವು ಹೊಣೆಯಲ್ಲ ಎಂಬ ಮಾತಿನ ಹಿಂದೆ ಯಾವುದೇ ರಾಜಕೀಯ ಪಕ್ಷ ಅಡಗಿಕೊಳ್ಳಲು ಸಾಧ್ಯವೇ?

ಬೇರೆ ದೇಶಗಳಲ್ಲಿ ನವ-ನಾಝಿಗಳು ಮಕ್ಕಳನ್ನು ಅಶ್ಲೀಲವಾಗಿ ಬಳಸುವವರು ತಮ್ಮ ದುಷ್ಟ ಉದ್ದೇಶ ಸಾಧನೆಗೆ ಇಂಟರ್‌ನೆಟ್‌ನ ಸ್ವಾತಂತ್ರ್ಯವನ್ನು ಬಳಸುವ ಉದಾಹರಣೆಗಳಿವೆ. ಆದರೆ ನಮಗೆ ತಿಳಿದಂತೆ ಹೀಗೆ ಇಂಟರ್‌ನೆಟ್ ಬುಲೆಟಿನ್ ಬೋರ್ಡನ್ನು ಯಾವುದೇ ದೇಶದಲ್ಲಿ ಯಾವುದೇ ಪ್ರಮುಖ ಪಕ್ಷ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಿಕೆಗೆ ಬಳಸುತ್ತಿರುವುದು ಇದೇ ಮೊದಲು. ಮೇಲೆ ಹೇಳಿದ ಸಂದೇಶದ ಒಂದು ಪ್ರತಿಯನ್ನು ಜತೆಗಿಟ್ಟಿದ್ದೇವೆ"

ಈ ಪತ್ರಕ್ಕೆ ಅಮಿತ್ ಸೇನ್‌ಗುಪ್ತಾ, ಪ್ರಬೀರ್ ಪುರಕಾಯಸ್ಥ, ಕಮರ್ ಚಿನಾಯ್, ಎನ್.ಡಿ.ಜಯಪ್ರಕಾಶ್, ಗೀತಾ ಹರಿಹರನ್, ಮೋಹನ್ ರಾವ್, ಗೌತಮ್ ನೌಲಖಾ, ನಿವೇದಿತಾ ಮೆನನ್, ಕುಂಕುಮ್ ಸಾಂಗ್ರಿ, ಅನು ಚಿನಾಯ್ ಹಾಗೂ ಡಿ.ರಘುನಂದನ್ ಸಹಿ ಹಾಕಿದ್ದಾರೆ.

ಹೀಗೊಂದು ಒಗಟು


'ಮಾನ್ಯ ಸಭಾಧ್ಯಕ್ಷರೇ, ಅಲ್ಲಿ (ಉತ್ತರ ಪ್ರದೇಶದಲ್ಲಿ) ಒಂದು ಕಗ್ಗಂಟಿನ ಸ್ಥಿತಿ ಉಂಟಾಗಿದೆ. ಇದಕ್ಕೆ ಏಕೈಕ ಪರಿಹಾರವೆಂದರೆ ಮುಖ್ಯಮಂತ್ರಿಗಳನ್ನು ನೇಮಿಸಿದ ರಾಜ್ಯಪಾಲರು ತನ್ನ ಮರ್ಜಿಯನ್ನು ಹಿಂತಗೆದುಕೊಳ್ಳಬೇಕು ...... ರಂದು ವಿಧಾನಸಭೆ ಸೇರಿದಾಗ ಸದನದಲ್ಲಿ ತನ್ನ ಬಲಪರೀಕ್ಷೆಗೆ ಸಿದ್ಧ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಬಹುಮತ ಕಳಕೊಂಡ ಮುಖ್ಯಮಂತ್ರಿ ಎಂ.ಎಲ್.ಎ.ಗಳನ್ನು ಬೆದರಿಸಿ ತನಗೆ ಅಡಿಯಾಳಾಗುವಂತೆ ಮಾಡುವ ವಿಧಾನವನ್ನು ಅವಲಂಬಿಸಿದ್ದಾರೆ....... ಇಂತಹ ಮುಖ್ಯಮಂತ್ರಿಯನ್ನು ಅಲ್ಲಿಯವರೆಗೆ ಅಧಿಕಾರದಲ್ಲಿ ಮುಂದುವರಿಯಲು ಬಿಡುವುದು ಸರಿಯಲ್ಲ"

ಇದು ಯಾರು ಯಾವ ಸಂದರ್ಭದಲ್ಲಿ ಹೇಳಿದ ಮಾತು ಎಂದು ಹೇಳಬಲ್ಲಿರಾ? ಕಳೆದ ತಿಂಗಳು ಉತ್ತರಪ್ರದೇಶದಲ್ಲಿ ನಡೆದ ಘಟನೆಗಳ ಬಗ್ಗೆ ಸುರ್ಜಿತ್ ಹೇಳಿರಬಹುದೆಂದು ಊಹಿಸಿದ್ದರೆ ಖಂಡಿತಾ ತಪ್ಪು. ಇದು ಈಗ ಮತ್ತೆ ಪ್ರಧಾನಿ ಗದ್ದುಗೇರಬಯಸುತ್ತಿರುವ ಅಟಲ್ ಬಿಹಾರಿ ವಾಜಪೇಯಿಯವರು 13 ದಿನಗಳ ಪ್ರಧಾನಿಯಾಗುವ ಮೊದಲು ಹೇಳಿದ ಮಾತು - ಲೋಕಸಭೆಯಲ್ಲಿ ಜೂನ್ 3 ರಂದು. ಸಂದರ್ಭ-ಜೂನ್ 1995 ರಲ್ಲಿ ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ. ಬೆಂಬಲ ಹಿಂತೆಗೆದುಕೊಂಡಾಗ ಮುಲಾಯಂ ಸಿಂಗ್ ಸರಕಾರ ಬಹುಮತ ಕಳಕೊಂಡಿತು.

ಫೆಬ್ರವರಿ 1998 ರ ಸ್ಥಿತಿಗೂ ಜೂನ್ 1995 ರ ಸ್ಥಿತಿಗೂ ಏನಾದರೂ ವ್ಯತ್ಯಾಸವಿದೆಯೇ? ಆದರೆ ಜೂನ್ 1995 ರಲ್ಲಿ ವಾಜಪೇಯಿಯವರು ಯಾವುದಕ್ಕೆ ಆಗ್ರಹ ಮಾಡಿದ್ದರೋ ಅದರ ವಿರುದ್ಧವೇ ಫೆಬ್ರವರಿ 1998 ರಲ್ಲಿ ಉಪವಾಸಕ್ಕಿಳಿದುದ್ದಕ್ಕೆ ಏನು ಹೇಳಬೇಕು? ಗೋಸುಂಬೆತನವೋ, ಇಬ್ಬಂದಿತನವೋ... ಅಥವಾ...ಕೇವಲ ಒಗಟೋ?

ವಾರದ ವ್ಯಂಗ್ಯಚಿತ್ರ

'ದಿ ಹಿಂದು'ನಲ್ಲಿ ಸುರೇಂದ್ರನ್



KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27